ಸೋಮವಾರ, ಅಕ್ಟೋಬರ್ 17, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಉದ್ಯೋಗವನ್ನು ಯಶಸ್ವಿ ಆಗಿ ನಿಭಾಯಿಸಿಕೊಂಡು ಹೋಗಬೇಕಾದರೆ ಶೈಕ್ಷಣಿಕ ವಿದ್ಯಾರ್ಹತೆಗಿಂತ ಹೊರತಾದ ಅನೇಕ ಗುಣಗಳು ಬೇಕೇ ಬೇಕು.

ಮೆಗಾ ದೀಪಾವಳಿ ಧಮಾಕಾ
ಭೀಮದಲ್ಲಿ

30 ಸೆಪ್ಟೆಂಬರ್ – 30 ಅಕ್ಟೋಬರ್

*ಷರತ್ತು ಮತ್ತು ನಿಬಂಧನೆಗಳು ಅನ್ವಯ

1 ಚಿನ್ನದ ನಾಣ್ಯ ಉಚಿತ
ಪ್ರತಿ 10 ಗ್ರಾಂ ಚಿನ್ನದ ಖರೀದಿಯ ಮೇಲೆ

ಬೆಳ್ಳಿ ಮೇಕಿಂಗ್ ಶುಲ್ಕದ ಮೇಲೆ **50%** ವರೆಗೆ ಕಡಿತ

ಚಿನ್ನದ ದರ ರೂ. **4199*** ಮೇಲ್ಪಟ್ಟು ಪ್ರತಿ ಗ್ರಾಂಗೆ

ವಜ್ರ ಪ್ರತಿ ಕ್ಯಾರೆಟ್ ಮೇಲೆ ರೂ. **10,000** ವರೆಗೆ ಕಡಿತ

HDFC BANK
We understand your world

ಎಚ್‌ಡಿಎಫ್‌ಸಿ ಬ್ಯಾಂಕ್ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳ ಮೇಲೆ 5000 ರೂ. ವರೆಗೆ ಇನ್‌ಸ್ಟಂಟ್ ಡಿಸ್ಕೌಂಟ್*

HDFC BANK FESTIVE TREATS

BHIMA JEWELLERS
GOLD • DIAMONDS • SILVER • PLATINUM
SINCE 1925

ಬೆಂಗಳೂರು: ಡಿಕೆನ್ಸನ್ ರಸ್ತೆ • ಜಯನಗರ 3ನೇ ಬ್ಲಾಕ್ • ಕೋರಮಂಗಲ • ಹೆಚ್‌ಬಿಆರ್ ಲೇಔಟ್ • ರಾಜಾಜಿನಗರ • ಮಾರತಹಳ್ಳಿ ಹೂಡಿ • ಮಲ್ಲೇಶ್ವರಂ • ಜಯನಗರ 4ನೇ ಬ್ಲಾಕ್ • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ • ಚೆನ್ನೈ • ರಾಜಮಂಡ್ರಿ

ಸ್ಥಳ ತಿಳಿಯಲು ಸ್ಕ್ಯಾನ್ ಮಾಡಿ

ಈಗ ಇಲ್ಲಿಯೂ ಲಭ್ಯವಿದೆ ▶ bhimagold.com

BHIMA Helpline Toll Free 1800-121-9076 (10:00am to 7:00pm)

ಸೋಮವಾರ, ಅಕ್ಟೋಬರ್ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 287 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹೊರ ರಾಜ್ಯ
ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆ 'ಕೈ'-'ಕಮಲ' ನೇರ ಹಣಾಹಣಿ
ತೈವಾನ್ ಸೇರ್ಪಡೆಗೆ ಸೇನೆ ಬಳಸಲು ಸಿದ್ಧ: ಷಿ ಪ್ರತಿಜ್ಞೆ 9
ಮಳೆ: ರಾಜ್ಯದಲ್ಲಿ ಡೆಂಗಿ ಉಲ್ಬಣ 4
75 ಡಿಜಿಟಲ್ ಬ್ಯಾಂಕಿಂಗ್ ಘಟಕಗಳಿಗೆ ಚಾಲನೆ
'ಫೋನ್ ಬ್ಯಾಂಕಿಂಗ್'ನಿಂದ ಆರ್ಥಿಕತೆಗೆ ಪೆಟ್ಟು: ಮೋದಿ 9

ಜಮೀನುಗಳು ಜಲಾವೃತ • ಅಪಾರ ಪ್ರಮಾಣದ ಬೆಳೆ ನಷ್ಟ • ಮನೆಗಳಿಗೆ ಹಾನಿ

ಮಳೆ: ರೈತ ಸಾವು, ಮೂವರು ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶನಿವಾರ ರಾತ್ರಿ ಮತ್ತು ಭಾನುವಾರವೂ ಮಳೆ ಮುಂದುವರಿದಿದ್ದು, ರೈತರೊಬ್ಬರು ಮೃತಪಟ್ಟಿದ್ದಾರೆ. ನೀರಿನ ರಭಸಕ್ಕೆ ಸಿಲುಕಿ ಮೂವರು ನಾಪತ್ತೆಯಾಗಿದ್ದಾರೆ. ಕೆಲವೆಡೆ ಕೆರೆ ಏರಿಗಳು ಒಡೆದಿದ್ದು, ಅಪಾರ ಪ್ರಮಾಣದ ಕೃಷಿ ಜಮೀನು ಜಲಾವೃತವಾಗಿದೆ. ಅನೇಕ ಕಡೆ ಮನೆಗಳಿಗೆ ಹಾನಿ ಉಂಟಾಗಿದೆ.

ಮೈಸೂರು ತಾಲ್ಲೂಕಿನ ಭುಗತಹಳ್ಳಿಯಲ್ಲಿ ಶನಿವಾರ ತಡರಾತ್ರಿ ಮಳೆಯಿಂದ ಜಲಾವೃತವಾಗಿದ್ದ ಜಮೀನಿನಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ರೈತ ಪುಟ್ಟಮಾದಪ್ಪ (46) ಮೃತಪಟ್ಟಿದ್ದಾರೆ.

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಕಲ್ಲೂರಿನಲ್ಲಿ ಶನಿವಾರ ರಾತ್ರಿ ತೋಟದಿಂದ ಹಿಂತಿರುಗುತ್ತಿದ್ದಾಗ ಕಲ್ಲೂರು ಕೆರೆಯ ಕೋಡಿ ನೀರಿನಲ್ಲಿ ಕೈಕಾಲು ತೊಳೆಯಲು ಹೋಗಿದ್ದ ಹನುಮಂತಯ್ಯ (40) ಜಾರಿಬಿದ್ದರು. ಅವರನ್ನು ರಕ್ಷಿಸಲು ನಟರಾಜು (32) ಧಾವಿಸಿದರು. ಆದರೆ, ನೀರಿನ ರಭಸಕ್ಕೆ ಇಬ್ಬರೂ ಕೊಚ್ಚಿ ಹೋಗಿದ್ದಾರೆ. ಪಾವಗಡ ತಾಲ್ಲೂಕಿನ ಪಳವಳ್ಳಿಗೆ ಹೊರಟಿದ್ದ ಕೆಂಚಗಾನಹಳ್ಳಿಯ ಗಂಗಾಧರ (38) ರಸ್ತೆ ಮೇಲೆ ರಭಸವಾಗಿ ಹರಿಯುತ್ತಿದ್ದ ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿಕೊಂಡು ಹೋಗಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಶೋಧ ಕಾರ್ಯ ಕೈಗೊಂಡಿದ್ದಾರೆ.

ವಿಜಯನಗರ ಜಿಲ್ಲೆಯ ಕೊಟ್ಟೂರಿನಲ್ಲಿ ಭಾನುವಾರ ಸುರಿದ ಮಳೆಗೆ ಬಸ್ ನಿಲ್ದಾಣದ ಆವರಣ ಜಲಾವೃತಗೊಂಡಿತ್ತು —ಪ್ರಜಾವಾಣಿ ಚಿತ್ರ

> **ಮಳೆ ಹಾನಿಗೆ ಸಂಬಂಧಿಸಿದಂತೆ ಶಾಶ್ವತ ಕ್ರಮ ಕೈಗೊಳ್ಳಲಾಗುವುದು. ಸೋಮವಾರ (ಅ.17) ಮತ್ತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಸಿಇಒಗಳ ಜೊತೆ ಸಭೆ ನಡೆಸಿ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು**
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಮನೆ, ಬೆಳೆ ಹಾನಿ: ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕಿನ 12 ಗ್ರಾಮಗಳಲ್ಲಿ 30ಕ್ಕೂ ಹೆಚ್ಚು ಮನೆಗಳ ಗೋಡೆಗಳು ಕುಸಿದಿವೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಹೊನ್ನೇನಹಳ್ಳಿಯಲ್ಲಿ ಮಳೆಗೆ 6 ಮನೆಗಳು ಹಾನಿಗೀಡಾಗಿವೆ.

ವಿಜಯನಗರ ಜಿಲ್ಲೆಯ ಕೊಟ್ಟೂರಿನಲ್ಲಿ ಮಳೆಯಿಂದಾಗಿ ಬಸ್‌ನಿಲ್ದಾಣ ಜಲಾವೃತವಾಗಿತ್ತು.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು, ಚಾಮರಾಜನಗರ, ಕೊಡಗು, ಮಂಡ್ಯ ಜಿಲ್ಲೆಗಳಲ್ಲಿ ಮಳೆಯಿಂದಾಗಿ ಅಪಾರ ಪ್ರಮಾಣದ ಜಮೀನು ಜಲಾವೃತವಾಗಿದ್ದು, ಬೆಳೆ ಹಾನಿಯಾಗಿದೆ. ಚಾಮರಾಜನಗರ ಜಿಲ್ಲೆಯ ಗರಿಕೆಕಂಡಿಯಿಂದ ತಮಿಳುನಾಡಿನ ಹಂದಿಯೂರು ನಡುವೆ ವಿವಿಧೆಡೆ ಗುಡ್ಡ ಕುಸಿದಿದ್ದು, ಭಾನುವಾರದಿಂದ 4 ದಿನಗಳವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಪ್ರವಾಸಿ ತಾಣ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಹಾಳಾಗಿದ್ದು, ಭಾನುವಾರ ಬೆಟ್ಟಕ್ಕೆ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಸ್ಥಗಿತಗೊಂಡಿತ್ತು.

ಇನ್ನಷ್ಟು ಸುದ್ದಿಗಳು 4

ಇನ್ನೂ 2 ದಿನ ರಾಜ್ಯದ ವಿವಿಧೆಡೆ ಮಳೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕೆಲವು ಕಡೆಗಳಲ್ಲಿ ಸೋಮವಾರ ಹಾಗೂ ಮಂಗಳವಾರ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬಾಗಲಕೋಟೆ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ, ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಯ ಒಂದೆರಡು ಕಡೆ ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಬೆಂಗಳೂರು ನಗರದಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವು ಬಾರಿ ಗುಡುಗು ಸಹಿತ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಅಧ್ಯಕ್ಷತೆ: ಮತದಾನ ಇಂದು

ಕಾಂಗ್ರೆಸ್ ಚುನಾವಣೆ: ಖರ್ಗೆ–ತರೂರ್ ಮಧ್ಯೆ ಸ್ಪರ್ಧೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನದ ಚುನಾವಣೆಯ ಮತದಾನ ಸೋಮವಾರ ನಡೆಯಲಿದೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಮಲ್ಲಿಕಾರ್ಜುನ ಖರ್ಗೆ ಮತ್ತು ಶಶಿ ತರೂರ್ ಅವರಲ್ಲಿ ಯಾರಿಗೆ ಈ ಸ್ಥಾನವು ಒಲಿಯಲಿದೆ ಎಂಬುದು ತೀರ್ಮಾನವಾಗಲಿದೆ. ಎರಡು ದಶಕಗಳ ಬಳಿಕ, ನೆಹರೂ–ಗಾಂಧಿ ಕುಟುಂಬದ ಹೊರಗಿನವರ ಕೈಗೆ ಅಧ್ಯಕ್ಷ ಸ್ಥಾನ ಸಿಗಲಿದೆ.

ಮತದಾನದ ಅರ್ಹತೆ ಹೊಂದಿರುವ 9,000ಕ್ಕೂ ಹೆಚ್ಚು ಪ್ರತಿನಿಧಿಗಳಿದ್ದಾರೆ. ಕಾಂಗ್ರೆಸ್ ಕೇಂದ್ರ ಕಚೇರಿ ಮತ್ತು ಇತರ 65 ಮತಗಟ್ಟೆಗಳಲ್ಲಿ ಮತದಾನ ನಡೆಯಲಿದೆ. ಕಾಂಗ್ರೆಸ್ ಪಕ್ಷದ 137 ವರ್ಷಗಳ ಇತಿಹಾಸದಲ್ಲಿ ಆರನೇ ಬಾರಿ ಚುನಾವಣೆ ನಡೆಯುತ್ತಿದೆ. ಮತ ಎಣಿಕೆಯು ಬುಧವಾರ ನಡೆಯಲಿದೆ

ನೆಹರೂ–ಗಾಂಧಿ ಕುಟುಂಬಕ್ಕೆ ಹತ್ತಿರವಾಗಿರುವ ಖರ್ಗೆ ಅವರಿಗೆ ಪ್ರಮುಖ ಮುಖಂಡರ ಬೆಂಬಲ ಇದೆ. ಹಾಗಾಗಿ, ಖರ್ಗೆ ಅವರು ಗೆಲ್ಲುವ ಸಾಧ್ಯತೆ ಹೆಚ್ಚು ಎನ್ನಲಾಗಿದೆ. ಪಕ್ಷದಲ್ಲಿ ಬದಲಾವಣೆ ತರುವುದಕ್ಕಾಗಿ ತಮಗೆ ಮತ ಹಾಕಿ ಎಂದು ತರೂರ್ ಅವರು ಪ್ರಚಾರ ಸಂದರ್ಭದಲ್ಲಿ ಹೇಳಿದ್ದಾರೆ.

> **ಗಾಂಧಿ ಕುಟುಂಬ ಕಾಂಗ್ರೆಸ್‌ಗೆ ದುಡಿದಿದ್ದು, ಅವರ ಸಲಹೆ ಪಡೆಯುತ್ತೇನೆ. ಅದು ನನ್ನ ಕರ್ತವ್ಯ. 20 ವರ್ಷಗಳ ಅವರ ಅನುಭವದಿಂದ ನಾನು ಕಲಿಯಬೇಕಿದೆ**
>
> **ಮಲ್ಲಿಕಾರ್ಜುನ ಖರ್ಗೆ,** ಅಭ್ಯರ್ಥಿ

> **ಯಾರಾದರೊಬ್ಬರು ಗೆಲ್ಲುತ್ತಾರೆ, ಒಬ್ಬರು ಸೋಲುತ್ತಾರೆ. ಖರ್ಗೆ ಗೆಲ್ಲಲಿ ಅಥವಾ ನಾನು ಗೆಲ್ಲಲಿ, ಕಾಂಗ್ರೆಸ್ ಪಕ್ಷವು ವಿಜಯಶಾಲಿ ಆಗಲಿದೆ ಎಂಬುದು ನನ್ನ ನಿಲುವು**
>
> **ಶಶಿ ತರೂರ್,** ಅಭ್ಯರ್ಥಿ

ತಮಗೆ ಚುನಾವಣೆಯಲ್ಲಿ ಸಮಾನ ಅವಕಾಶ ಇಲ್ಲದ ಸ್ಥಿತಿ ನಿರ್ಮಾಣ ಆಗಿದೆ ಎಂದು ತರೂರ್ ಅವರು ಪ್ರಚಾರದ ಸಂದರ್ಭದಲ್ಲಿ ಹೇಳಿದ್ದರು. ಆದರೆ, ನೆಹರೂ–ಗಾಂಧಿ ಕುಟುಂಬವು ತಟಸ್ಥವಾಗಿದೆ ಮತ್ತು 'ಅಧಿಕೃತ' ಅಭ್ಯರ್ಥಿಯಾಗಿ ಯಾರೂ ಇಲ್ಲ ಎಂದು ಇಬ್ಬರೂ ಅಭ್ಯರ್ಥಿಗಳು ಹೇಳಿಕೊಂಡಿದ್ದಾರೆ.

'ಪಕ್ಷದ ಚುನಾವಣೆಯು ಯಾವುದೇ ರೀತಿಯಲ್ಲಿಯೂ ಪಕ್ಷದ ಸಂಘಟನೆಯನ್ನು ಬಲಪಡಿಸುತ್ತದೆ ಎಂಬುದು ನನಗೆ ಮನವರಿಕೆ ಆಗಿಲ್ಲ. ಚುನಾವಣೆಯು ವ್ಯಕ್ತಿಗತ ಉದ್ದೇಶಗಳನ್ನು ಈಡೇರಿಸಬಹುದು. ಆದರೆ, ಸಾಮೂಹಿಕ ಸ್ಫೂರ್ತಿಯನ್ನು ಹೆಚ್ಚಿಸುತ್ತದೆ ಎಂಬುದು ಅನುಮಾನಾಸ್ಪದ' ಎಂದು ಪಕ್ಷದ ಸಂವಹನ ವಿಭಾಗದ ಮುಖ್ಯಸ್ಥ ಜೈರಾಮ್ ರಮೇಶ್ ಹೇಳಿದ್ದಾರೆ.

10ನೇ ಪುಟ ನೋಡಿ

ಕಾರಾಗೃಹದಿಂದಲೇ ನೇಮಕ ಮಾಡಿದ ಮುರುಘಾ ಶ್ರೀ

ಬಸವಪ್ರಭು ಸ್ವಾಮೀಜಿ ಮಠದ ಉಸ್ತುವಾರಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಮುರುಘಾ ಮಠದ ಪೂಜಾ ಕೈಂಕರ್ಯ ಹಾಗೂ ದೈನಂದಿನ ಚಟುವಟಿಕೆಯ ಉಸ್ತುವಾರಿಗೆ ದಾವಣಗೆರೆಯ ವಿರಕ್ತ ಮಠದ ಬಸವಪ್ರಭು ಸ್ವಾಮೀಜಿ ಅವರನ್ನು ಶಿವಮೂರ್ತಿ ಮುರುಘಾ ಶರಣರು ನೇಮಕ ಮಾಡಿದ್ದಾರೆ.

ಹೈಕೋರ್ಟ್‌ನ ಅನುಮತಿ ಪಡೆದು ಕಾರಾಗೃಹದಲ್ಲಿ ಈ ಪ್ರಕ್ರಿಯೆ ಶನಿವಾರ ಪೂರ್ಣಗೊಳಿಸಲಾಗಿದೆ. ಈ ಬಗ್ಗೆ ಮಠವು ಭಾನುವಾರ ಪ್ರಕಟಣೆ ನೀಡಿದೆ. ಈ ನೇಮಕ ತಾತ್ಕಾಲಿಕ ಅವಧಿಗೆ ಸೀಮಿತವಾಗಿದೆ. ಹೆಬ್ಬಾಳು ವಿರಕ್ತ ಮಠದ ಮಹಾಂತ ರುದ್ರೇಶ್ವರ ಸ್ವಾಮೀಜಿ ಈವರೆಗೆ ಪ್ರಭಾರ ಪೀಠಾಧ್ಯಕ್ಷರಾಗಿದ್ದರು.

ಬಸವಪ್ರಭು ಸ್ವಾಮೀಜಿ

ಪೋಕ್ಸೊ ಪ್ರಕರಣದಲ್ಲಿ ಬಂಧಿತರಾಗಿ ಕಾರಾಗೃಹದಲ್ಲಿರುವ ಮುರುಘಾ ಶರಣರು ಮಠದ ಉಸ್ತುವಾರಿ ನೇಮಕಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಮೊರೆ ಹೋಗಿದ್ದರು. ಅ.12ರಂದು ನ್ಯಾಯಾಲಯದ ಅನುಮತಿ ಪಡೆದು ಕಾರಾಗೃಹ ಅಧೀಕ್ಷಕರನ್ನು ಸಂಪರ್ಕಿಸಲಾಗಿತ್ತು. ಕಾನೂನು ಪ್ರಕಾರ ಉಸ್ತುವಾರಿ ನೇಮಕದ ಪ್ರಕ್ರಿಯೆ ಪೂರ್ಣಗೊಳಿಸಲು ಅ.15ರಂದು ಕಾಲಾವಕಾಶ ನಿಗದಿಪಡಿಸಲಾಗಿತ್ತು.

> **ಮಠದ ಜವಾಬ್ದಾರಿಯನ್ನು ಶರಣರು ಮೌಖಿಕವಾಗಿ ನೀಡಿದ್ದರು. ಏಕಾಏಕಿ ಮತ್ತೊಬ್ಬರನ್ನು ನೇಮಕ ಮಾಡಿರುವುದು ಬೇಸರ ಮೂಡಿಸಿದೆ**
>
> **ಮಹಾಂತ ರುದ್ರೇಶ್ವರ ಸ್ವಾಮೀಜಿ**
> ದಾವಣಗೆರೆ ಹೆಬ್ಬಾಳು ಶಾಖಾ ಮಠ

4ನೇ ಪುಟ ನೋಡಿ

ಸಿಬಿಐ ಕಚೇರಿಗೆ ಇಂದು ಹಾಜರಾಗುವಂತೆ ಸೂಚನೆ

ಸಿಸೋಡಿಯಾಗೆ ಸಮನ್ಸ್

ನವದೆಹಲಿ (ಪಿಟಿಐ): ಅಬಕಾರಿ ನೀತಿ ಜಾರಿಯಲ್ಲಿ ಅಕ್ರಮ ಆರೋಪದ ಪ್ರಕರಣದಲ್ಲಿ, ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರಿಗೆ ಸಿಬಿಐ ಸಮನ್ಸ್ ನೀಡಿದೆ. ತನಿಖೆಗಾಗಿ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಿಬಿಐ ಕೇಂದ್ರ ಕಚೇರಿಗೆ ಹಾಜರಾಗುವಂತೆ ಸೂಚಿಸಿದೆ.

'ನನ್ನ ಮನೆಯಲ್ಲಿ ಸಿಬಿಐ ಅಧಿಕಾರಿಗಳು 14 ತಾಸು ಶೋಧ ನಡೆಸಿದ್ದರು. ಅವರಿಗೆ ಏನೂ ಸಿಕ್ಕಿರಲಿಲ್ಲ. ನನ್ನ ಬ್ಯಾಂಕ್ ಲಾಕರ್ ತೆರೆದು ಪರಿಶೀಲಿಸಿದ್ದಾರೆ. ಅಲ್ಲಿಯೂ ಏನೂ ಸಿಕ್ಕಿಲ್ಲ. ನನ್ನ ಗ್ರಾಮದಲ್ಲಿ ಶೋಧ ನಡೆಸಿದ್ದಾರೆ. ಈಗ ನನ್ನನ್ನು ಸಿಬಿಐ ಕೇಂದ್ರ ಕಚೇರಿಗೆ ಕರೆದಿದ್ದಾರೆ. ನಾನು ಹೋಗುತ್ತೇನೆ, ತನಿಖೆಗೆ ಪೂರ್ಣ ಸಹಕಾರ ನೀಡುತ್ತೇನೆ' ಎಂದು ಸಿಸೋಡಿಯಾ ಅವರು ಟ್ವೀಟ್ ಮಾಡಿ ಪ್ರತಿಕ್ರಿಯಿಸಿದ್ದಾರೆ.

ಈ ಪ್ರಕರಣದಲ್ಲಿ ಹಲವು ಜನರನ್ನು ಸಿಬಿಐ ತನಿಖೆಗೆ ಒಳಪಡಿಸಿದೆ. ಇಂಡೊ ಸ್ಪಿರಿಟ್ಸ್ ಮಾಲೀಕ ಸಮೀರ್ ಮಹೇಂದ್ರು, ಗುರುಗ್ರಾಮದ ಬಡಿ ರಿಟೇಲ್ ಪ್ರೈವೆಟ್ ಲಿ.ನ ನಿರ್ದೇಶಕ ಅಮಿತ್ ಅರೋರಾ, ಇಂಡಿಯಾ ಅಹೆಡ್ ನ್ಯೂಸ್‌ನ ಮೂತಾ ಗೌತಮ್ ಅವರು ತನಿಖೆಗೆ ಒಳಗಾಗಿದ್ದಾರೆ.

9ನೇ ಪುಟ ನೋಡಿ

'ಸಿಸೋಡಿಯಾ ಅವರು ಭಗತ್ ಸಿಂಗ್'

ಮನೀಷ್ ಸಿಸೋಡಿಯಾ ಮತ್ತು ಜೈಲಿನಲ್ಲಿರುವ ಸಚಿವ ಸತ್ಯೇಂದ್ರ ಜೈನ್ ಅವರು ಈ ಕಾಲದ ಭಗತ್ ಸಿಂಗ್. ಕೇಂದ್ರದ ವಿರುದ್ಧ ತಮ್ಮ ಸರ್ಕಾರ ನಡೆಸುತ್ತಿರುವ ಸಂಘರ್ಷವು ಎರಡನೇ ಸ್ವಾತಂತ್ರ್ಯ ಸಮರ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಸಿಸೋಡಿಯಾ ಅವರನ್ನು ಸಿಬಿಐ ಸೋಮವಾರ ಬಂಧಿಸಲಿದೆ ಎಂದು ಎಎಪಿ ಹೇಳಿಕೊಂಡಿದೆ. ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಎಎಪಿ ನೇರ ಸ್ಪರ್ಧೆ ಒಡ್ಡಿರುವುದೇ ಇದಕ್ಕೆ ಕಾರಣ ಎಂದಿದೆ.

'ಜೈಲಿನ ಕಂಬಿಗಳು ಮತ್ತು ನೇತಾಡುತ್ತಿದ್ದ ಕುಣಿಕೆ ಭಗತ್ ಸಿಂಗ್ ಅವರನ್ನು ಅವರ ಉದ್ದೇಶದಿಂದ ಹಿಂದೆ ಸರಿಯುವಂತೆ ಮಾಡಲಿಲ್ಲ. ಬಡವರಿಗೆ ಉತ್ತಮ ಶಿಕ್ಷಣ ನೀಡಿದ ಶಿಕ್ಷಣ ಸಚಿವರೊಬ್ಬರು 75 ವರ್ಷಗಳ ಬಳಿಕ ದೇಶಕ್ಕೆ ಸಿಕ್ಕಿದ್ದಾರೆ. ಭವ್ಯ ಭವಿಷ್ಯದ ಭರವಸೆಯನ್ನು ಜನರಲ್ಲಿ ಮೂಡಿಸಿದ್ದಾರೆ. ಕೋಟ್ಯಂತರ ಜನರ ಪ್ರಾರ್ಥನೆಗಳು ನಿಮ್ಮ ಜೊತೆಗಿವೆ' ಎಂದು ಕೇಜ್ರಿವಾಲ್ ಟ್ವೀಟ್ ಮಾಡಿದ್ದಾರೆ.

ಬಳ್ಳಾರಿ: ಎರಡನೇ ದಿನವೂ ಕುಂದದ ಉತ್ಸಾಹ

ಬಳ್ಳಾರಿ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಕೈಗೊಂಡಿರುವ 'ಭಾರತ್ ಜೋಡೊ ಯಾತ್ರೆ'ಗೆ ಜಿಲ್ಲೆಯಲ್ಲಿ ಭಾನುವಾರವೂ ಬೆಂಬಲ ವ್ಯಕ್ತವಾಯಿತು. ಜನರು ಅತ್ಯುತ್ಸಾಹದಿಂದ ಪಾದಯಾತ್ರೆಯಲ್ಲಿ ಪಾಲ್ಗೊಂಡರು. 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಎಂಬಿಬಿಎಸ್ ಹಿಂದಿ ಪಠ್ಯ ಬಿಡುಗಡೆ

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ಸರ್ಕಾರವು ಹಿಂದಿ ಭಾಷೆಯಲ್ಲಿ ವೈದ್ಯಕೀಯ ಶಿಕ್ಷಣ ನೀಡುವ ಮಹಾತ್ವಾಕಾಂಕ್ಷಿ ಯೋಜನೆಯನ್ನು ಕಾರ್ಯಗತಗೊಳಿಸುವ ದಿಸೆಯಲ್ಲಿ ಮೊದಲ ಹೆಜ್ಜೆ ಇಟ್ಟಿದೆ.

ಮೆಡಿಕಲ್ ಬಯೋಕೆಮಿಸ್ಟ್ರಿ, ಅನಾಟಮಿ ಮತ್ತು ಮೆಡಿಕಲ್ ಸೈಕಾಲಜಿ ವಿಷಯಗಳ ಪುಸ್ತಕಗಳನ್ನು ಹಿಂದಿಯಲ್ಲೇ ಸಿದ್ಧಪಡಿಸಲಾಗಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಅವುಗಳನ್ನು ಬಿಡುಗಡೆ ಮಾಡಿದ್ದಾರೆ.

ಬಳಿಕ ಮಾತನಾಡಿದ ಅವರು, 'ಇದೊಂದು ಐತಿಹಾಸಿಕ ದಿನ. ಹಿಂದಿಯಲ್ಲಿ ಎಂಬಿಬಿಎಸ್ ಕೋರ್ಸ್ ಆರಂಭಿಸಿದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಮಧ್ಯಪ್ರದೇಶ ಭಾಜನವಾಗಿದೆ' ಎಂದಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು ಜಾಗತಿಕ ವೇದಿಕೆಗಳಲ್ಲಿ ಹಿಂದಿಯಲ್ಲೇ ಮಾತನಾಡುತ್ತಾರೆ. ಆ ಮೂಲಕ ಹಿಂದಿಯ ಮಹತ್ವವನ್ನು ವಿಶ್ವಕ್ಕೆ ಸಾರುತ್ತಿದ್ದಾರೆ. ಪ್ರಧಾನಿಯವರ ಈ ನಡೆಯಿಂದಾಗಿ ದೇಶದ ಯುವಕರ ಆತ್ಮವಿಶ್ವಾಸ ಇಮ್ಮಡಿಗೊಳ್ಳಲಿದೆ' ಎಂದು ತಿಳಿಸಿದ್ದಾರೆ.

'21ನೇ ಶತಮಾನದಲ್ಲಿ ಕೆಲವರು 'ಪ್ರತಿಭಾ ಪಲಾಯನ' ಸಿದ್ಧಾಂತ ಅಳವಡಿಸಿಕೊಂಡಿದ್ದರೆ, ಮೋದಿ ಅವರು ಇದನ್ನು 'ಪ್ರತಿಭಾ ಪೋಷಣೆ' ಸಿದ್ಧಾಂತವನ್ನಾಗಿ ರೂಪಾಂತರಗೊಳಿಸಿದ್ದಾರೆ. ಈ ದಿನ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದ್ದು. ಮಧ್ಯಪ್ರದೇಶದ ಬಿಜೆಪಿ ಸರ್ಕಾರವು ಮೋದಿ ಅವರ ಕನಸು ಸಾಕಾರಗೊಳಿಸಿರುವುದು ಹೆಮ್ಮೆಯ ವಿಚಾರ' ಎಂದು ಹೇಳಿದ್ದಾರೆ.

'ಭಾರತದ ಇತರ ಎಂಟು ಭಾಷೆಗಳಲ್ಲಿ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ನೀಡುವ ಕೆಲಸ ಆರಂಭವಾಗಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ ಹಿಂದಿಯಲ್ಲಿ ಎಂಬಿಬಿಎಸ್ ಕೋರ್ಸ್ ಶುರುಮಾಡಲಾಗಿದೆ. ಇತರ ಭಾಷೆಗಳಲ್ಲೂ ಶೀಘ್ರವೇ ಎಂಬಿಬಿಎಸ್ ಕೋರ್ಸ್ ಆರಂಭಿಸಲಾಗುತ್ತದೆ' ಎಂದು ತಿಳಿಸಿದ್ದಾರೆ.

'ತಮಗೆ ಇಂಗ್ಲಿಷ್ ಬರುವುದಿಲ್ಲ ಎಂಬ ಕೀಳರಿಮೆ ಇನ್ನು ಮುಂದೆ ನಮ್ಮ ದೇಶದ ವಿದ್ಯಾರ್ಥಿಗಳಲ್ಲಿ ಇರುವುದಿಲ್ಲ. ಅವರು ಹೆಮ್ಮೆಯಿಂದಲೇ ತಾವು ಮಾತನಾಡುವ ಭಾಷೆಯಲ್ಲಿ ಶಿಕ್ಷಣ ಪಡೆಯಬಹುದು' ಎಂದಿದ್ದಾರೆ.

ಹಿಂದಿ ಹೇರಿಕೆ ವಿರುದ್ಧ ಮೋದಿಗೆ ಸ್ಟಾಲಿನ್ ಪತ್ರ 9

ತೀರ್ಥ ಪ್ರೋಕ್ಷಣೆ ಮಾಡಿಕೊಂಡ ಮುಖ್ಯಮಂತ್ರಿ ಬೊಮ್ಮಾಯಿ

'ತ್ರಿವೇಣಿ ಸಂಗಮ: 12 ವರ್ಷಕ್ಕೊಮ್ಮೆ ಕುಂಭಮೇಳ'

ಪ್ರಜಾವಾಣಿ ವಾರ್ತೆ

ತ್ರಿವೇಣಿ ಸಂಗಮ (ಮಂಡ್ಯ ಜಿಲ್ಲೆ): 'ಕಾವೇರಿ–ಹೇಮಾವತಿ–ಲಕ್ಷ್ಮಣತೀರ್ಥ ನದಿಗಳು ಕೂಡುವ ತ್ರಿವೇಣಿ ಸಂಗಮದಲ್ಲಿ ಪ್ರತಿ 12 ವರ್ಷಕ್ಕೊಮ್ಮೆ ಸರ್ಕಾರದಿಂದಲೇ ಕುಂಭ ಮೇಳ ಆಚರಿಸಲು ಶೀಘ್ರ ಆದೇಶ ಹೊರಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಕೆ.ಆರ್.ಪೇಟೆ ತಾಲ್ಲೂಕಿನ ಅಂಬಿಗರಹಳ್ಳಿ–ಸಂಗಾಪುರ–ಪುರದಲ್ಲಿರುವ ತ್ರಿವೇಣಿ ಸಂಗಮದಲ್ಲಿ ಭಾನುವಾರ ನಡೆದ ಕುಂಭಮೇಳದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸಂಗಮ ಸ್ಥಳವನ್ನು ತೀರ್ಥಕ್ಷೇತ್ರವನ್ನಾಗಿ ಅಭಿವೃದ್ಧಿಗೊಳಿಸಲು ಎಲ್ಲಾ ರೀತಿಯ ನೆರವು ನೀಡಲಾಗುವುದು. ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಗೊಳಿಸಲು ವಿಶೇಷ ಯೋಜನೆ ರೂಪಿಸಲಾಗುವುದು. ನದಿ ತೀರದಲ್ಲಿ ಸ್ನಾನಘಟ್ಟ ಸೇರಿದಂತೆ ಮೂಲ ಸೌಲಭ್ಯ ಒದಗಿಸಲು ಶೀಘ್ರ ಅನುದಾನ ಒದಗಿಸಲಾಗುವುದು' ಎಂದು ಭರವಸೆ ನೀಡಿದರು.

ತ್ರಿವೇಣಿ ಸಂಗಮದಲ್ಲಿ ಗಂಗಾ ಪೂಜೆ ನೆರವೇರಿಸಿದ ಮುಖ್ಯಮಂತ್ರಿ ತೀರ್ಥ ಪ್ರೋಕ್ಷಣೆ ಮಾಡಿಕೊಂಡರು. ನಾಡಿನ ವಿವಿಧೆಡೆಯಿಂದ ಬಂದಿದ್ದ ಸ್ವಾಮೀಜಿಗಳೊಂದಿಗೆ, ನದಿ ತಟದಲ್ಲಿ ನೂತನವಾಗಿ ನಿರ್ಮಿಸಿರುವ ಮಲೆ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು.

ಏಳು ನದಿಗಳಿಂದ ಕುಂಭಗಳಲ್ಲಿ ತರಲಾಗಿದ್ದ ತೀರ್ಥವನ್ನು ತ್ರಿವೇಣಿ ಸಂಗಮಕ್ಕೆ ಸಮರ್ಪಿಸಲಾಯಿತು. ಮುಖ್ಯಮಂತ್ರಿಯೂ ನದಿಗೆ ತೀರ್ಥ ಕುಂಭ ಸಮರ್ಪಿಸಿದರು. ಇದಾದ ನಂತರ, ಪುಣ್ಯಸ್ನಾನಕ್ಕೆ ಜನರಿಗೆ ಅವಕಾಶ ಮಾಡಿಕೊಡಲಾಯಿತು.

ಕುಂಭಮೇಳದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗಂಗಾಪೂಜೆ ನೆರವೇರಿಸಿ ತೀರ್ಥ ಪ್ರೋಕ್ಷಣೆ ಮಾಡಿಕೊಂಡರು. ನಿರ್ಮಲಾನಂದನಾಥ ಸ್ವಾಮೀಜಿ, ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಕೆ.ಸಿ.ನಾರಾಯಣಗೌಡ, ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಜಿಲ್ಲಾಧಿಕಾರಿ ಎಸ್‌.ಅಶ್ವತಿ ಇದ್ದಾರೆ —ಪ್ರಜಾವಾಣಿ ಚಿತ್ರ

ಬಾಣಸವಾಡಿ ಕೆರೆ: ಏಳು ವರ್ಷಗಳ ಹಿಂದೆ ತೆರವು, ಇದೀಗ ಮತ್ತೆ ಕಟ್ಟಡಗಳ ನಿರ್ಮಾಣ

ತೆರವಾದ ಸ್ಥಳದಲ್ಲೇ ಮತ್ತೆ ಒತ್ತುವರಿ

• ಆರ್. ಮಂಜುನಾಥ್

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ಕೆರೆ–ಕಾಲುವೆ ಒತ್ತುವರಿ ತೆರವು ಮಾಡುವುದೇ ದೊಡ್ಡ ಕಾರ್ಯ. ಇಂತಹ ಸಾಧನೆಯನ್ನು ಮಾಡಿದ ಮೇಲೆ ಅದನ್ನು ಉಳಿಸಿಕೊಳ್ಳದೆ ಹೋದರೆ ಮತ್ತೆ ಅತಿಕ್ರಮವಾಗುತ್ತದೆ. ಇದಕ್ಕೆ ಸ್ಪಷ್ಟ ಉದಾಹರಣೆ ಬೆಂಗಳೂರು ಪೂರ್ವ ವಲಯದಲ್ಲಿರುವ ಬಾಣಸವಾಡಿ ಕೆರೆ ಅಂಗಳ.

ಬೆಂಗಳೂರು ಪೂರ್ವ ತಾಲ್ಲೂಕು ಕೃಷ್ಣರಾಜಪುರ ಬಾಣಸವಾಡಿ ಸರ್ವೆ ನಂ. 211ರಲ್ಲಿ 40 ಎಕರೆ 20 ಗುಂಟೆಯಲ್ಲಿದ್ದ ಕೆರೆಯ ವ್ಯಾಪ್ತಿಯಲ್ಲಿ ಸರ್ಕಾರ ಮತ್ತು ಬಿಡಿಎ ಒತ್ತುವರಿ ಮಾಡಿಕೊಂಡಿರುವ ಪ್ರದೇಶ 22 ಎಕರೆ 19 ಗುಂಟೆ. ಬಿಡಿಎ ರಸ್ತೆ ಮಾಡಿ, ಕಲ್ಯಾಣನಗರ ಅಭಿವೃದ್ಧಿಪಡಿಸಿ ನಿವೇಶನಗಳನ್ನು ಹಂಚಿದೆ. ಖಾಸಗಿ ಒತ್ತುವರಿ 2 ಎಕರೆ 1 ಗುಂಟೆ. ಇದನ್ನು 2015ರಲ್ಲಿ ತಾಲ್ಲೂಕು ಆಡಳಿತ ತೆರವು ಮಾಡಿತ್ತು. ಆದರೆ ಅದಕ್ಕೊಂದು ಬೇಲಿ ಹಾಕಿ, ರಕ್ಷಿಸುವಲ್ಲಿ ಬಿಡಿಎ ಹಾಗೂ ಬಿಬಿಎಂಪಿ ವಿಫಲವಾಗಿರುವುದರಿಂದ ಅಲ್ಲಿ ಮತ್ತೆ ಅಕ್ರಮವಾಗಿ ದೇವಸ್ಥಾನ, ಹಲವು ರೀತಿಯ ಷೋರೂಂ, ಸರ್ವೀಸ್ ಸೆಂಟರ್, ಖಾಸಗಿ ನರ್ಸರಿಗಳು ತಲೆಎತ್ತಿವೆ.

ಹಿಂದೆಯೂ ನಡೆದಿತ್ತು ಸರ್ವೆ: ವಿಧಾನಸಭೆ ಸದನ ಸಮಿತಿ ಸೂಚನೆಯಂತೆ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಆಯುಕ್ತರ ಆದೇಶದಂತೆ 2015ರಲ್ಲಿ ಬಾಣಸವಾಡಿ ಕೆರೆಯ ಸರ್ವೆ ನಡೆದಿತ್ತು. ಈ ಸರ್ವೆಯನ್ನು ಪೂರ್ವ ತಾಲ್ಲೂಕಿನ ಭೂದಾಖಲೆ ಅಧಿಕಾರಿಗಳು ಹಾಗೂ ಬಿಡಿಎ ಅಧಿಕಾರಿ ಕೂಡ ಅನುಮೋದಿಸಿದ್ದರು. ತೆರವು ಕಾರ್ಯವು ನಡೆದಿತ್ತು. ಆದರೆ ಈ ಸರ್ವೆಯಂತೆ ಎಲ್ಲ ಒತ್ತುವರಿ ತೆರವಾಗಿಲ್ಲ. ಸದನ ಸಮಿತಿಗೆ ತಪ್ಪುಮಾಹಿತಿ ನೀಡಿದಂತಾಗುವುದಿಲ್ಲವೇ ಎಂಬುದು ಸ್ಥಳೀಯರ ಪ್ರಶ್ನೆ. ಕೆರೆ ಒತ್ತುವರಿ ಬಗ್ಗೆ ಶಾಸಕ ಕೆ.ಜೆ.ಜಾರ್ಜ್ ಪ್ರಸ್ತಾಪಿಸಿದ್ದರು.

ಮೂಲೆಗೆ ಬಿದ್ದಿರುವ ಸೂಚನೆ: 'ಬಾಣಸವಾಡಿ ಗ್ರಾಮದ ಸ.ನಂ. 211ರ 42 ಎಕರೆ 38 ಗುಂಟೆ ಸರ್ಕಾರಿ ಕೆರೆ ಅಂಗಳ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ. ಅತಿಕ್ರಮ ಪ್ರವೇಶ ನಿಷೇಧಿಸಲಾಗಿದೆ' ಎಂಬ ನಗರ ಜಿಲ್ಲಾಧಿಕಾರಿಯವರ ಆದೇಶದ ಸೂಚನಾ ಫಲಕ ಅಳವಡಿಸಿದ್ದ ಸ್ಥಳದಿಂದ ಬಹಳಷ್ಟು ಹಿಂದೆ ಸರಿದು ಮೂಲೆ ಸೇರಿದೆ. ಹಾಕಿದ್ದ ಬೇಲಿ ಕೂಡ ಕತ್ತರಿಸಿ ಖಾಸಗಿಯವರು ಬಳಸಿಕೊಳ್ಳುತ್ತಿದ್ದಾರೆ. ಸರ್ಕಾರಿ ಜಮೀನು ಎಂಬ ಫಲಕವಿದ್ದರೂ ನಿತ್ಯವೂ ಒತ್ತುವರಿ ಹೆಚ್ಚಾಗುತ್ತಿರುವುದು ಅಧಿಕಾರಿಗಳ ಕಾರ್ಯವೈಖರಿಗೆ ಹಿಡಿದ ಕನ್ನಡಿ ಎಂಬುದು ಸ್ಥಳೀಯ ವಾಸಿಗಳ ಆರೋಪ.

ಕಸ ವಿಂಗಡಣೆಗೆ ಬಳಕೆ: ಕೆರೆ ಅಭಿವೃದ್ಧಿ ಮಾಡುವ ಜವಾಬ್ದಾರಿ ಹೊತ್ತಿರುವ ಬಿಬಿಎಂಪಿ, ಮುಖ್ಯ ಆಯುಕ್ತರ ಸೂಚನೆಯನ್ನೂ ಧಿಕ್ಕರಿಸಿ ಕೆರೆ ಅಂಗಳದಲ್ಲಿರುವ ಒತ್ತುವರಿ ತೆರವು ಮಾಡುವಲ್ಲಿ ವಿಫಲರಾಗಿದ್ದಾರೆ. ಕೆರೆ ಅಂಗಳದಲ್ಲೇ ಕಸ ವಿಂಗಡಣೆ ಮಾಡುತ್ತಾರೆ. ತ್ಯಾಜ್ಯವನ್ನು ಕೆರೆಗೇ ಸುರಿಯುತ್ತಿದ್ದಾರೆ. ಬೆಂಕಿಯನ್ನೂ ಹಚ್ಚುತ್ತಿದ್ದಾರೆ. ಇನ್ನು, ಗಣೇಶ ಹಬ್ಬದ ಸಂದರ್ಭದಲ್ಲಿ ಮೂರ್ತಿಗಳ ವಿಸರ್ಜನೆಗೆ ಕೆರೆಯಲ್ಲಿ ಒಂದಷ್ಟು ಜಾಗ ಮಾಡಿ ನೀರು ತುಂಬಲಾಗಿತ್ತು. ಸ್ಥಳೀಯರ ಮುಖಂಡರಿಗೆ ಆಗ ಮಾತ್ರ ಕೆರೆ ಇಲ್ಲಿದೆ ಎಂಬ ನೆನಪಾಗಿತ್ತು. ನಂತರ, ಕೆರೆ ತ್ಯಾಜ್ಯದ ಗುಂಡಿಯಾಗಿರುವುದು ಯಾರ ಗಮನಕ್ಕೂ ಬಂದಿಲ್ಲ.

ತ್ಯಾಜ್ಯದ ಗುಂಡಿಯಾಗಿರುವ ಬಾಣಸವಾಡಿ ಕೆರೆ

'ಒತ್ತುವರಿಗೆ ಅಧಿಕಾರಿಗಳ ನೆರವು'

'ಲಿಂಗರಾಜಪುರ ಕೆರೆ ಒತ್ತುವರಿಯನ್ನು ತೆರವುಗೊಳಿಸಲು ಹೋರಾಡಿ, ಅದನ್ನು ಉಳಿಸಿ ಸುಮಾರು 10 ಸಾವಿರ ಚದರ ಅಡಿಯಲ್ಲಿ ಆಸ್ಪತ್ರೆ ಕಟ್ಟಲು ನೆರವಾಗಿದ್ದೇವೆ. ಆದರೆ, ಅದೇ ರೀತಿ ಬಾಣಸವಾಡಿ ಕೆರೆ ಒತ್ತುವರಿಯನ್ನೂ ತೆರವು ಮಾಡಲಾಗಿತ್ತು. ಅದಕ್ಕೆ ಸೂಕ್ತ ಬೇಲಿ, ಯೋಜನೆ ತರದೆ ಬಿಡಿಎ, ಬಿಬಿಎಂಪಿ ಅಧಿಕಾರಿಗಳು ಹಾಗೂ ತಾಲ್ಲೂಕು ಆಡಳಿತದ ಅಧಿಕಾರಿಗಳು ಮತ್ತೆ ಒತ್ತುವರಿಯಾಗಲು ನೆರವಾಗಿದ್ದಾರೆ' ಎಂದು ಸ್ಥಳೀಯ ಮುಖಂಡ ಮುರಳೀಧರ್ ದೂರಿದರು.

'ಆಯುಕ್ತರ ಸೂಚನೆಗೂ ಬೆಲೆ ಇಲ್ಲ'

'ಬಿಬಿಎಂಪಿ ಆಯುಕ್ತರು 'ವಲಯದ ಕಡೆಗೆ ಆಯುಕ್ತರ ನಡೆ' ಎಂಬ ಹೆಸರಿನಲ್ಲಿ ಜುಲೈನಲ್ಲಿ ಈ ಭಾಗದಲ್ಲಿ ನಾಗರಿಕರ ಅಹವಾಲು ಆಲಿಸಿದ್ದರು. ಆಗ ಬಾಣಸವಾಡಿ ಕೆರೆ ಅಂಗಳದ ಒತ್ತುವರಿಯನ್ನು ಗಮನಕ್ಕೆ ತಂದಾಗ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ವಿಶೇಷ ಆಯುಕ್ತ, ಜಂಟಿ ಆಯುಕ್ತರಾದ ಶಿಲ್ಪಾ ಸೇರಿ ಎಲ್ಲ ಅಧಿಕಾರಿಗಳಿಗೆ ಸೂಚಿಸಿದ್ದರು. ಮೂರು ತಿಂಗಳಾದರೂ ಒಬ್ಬ ಅಧಿಕಾರಿ ಇತ್ತ ಸುಳಿದಿಲ್ಲ. ಸ್ಥಳೀಯ ಅಧಿಕಾರಿಗಳು, ಯಾರು ಸೂಚನೆ ನೀಡಿದರೂ ಕೆಲಸ ಮಾಡುತ್ತಿಲ್ಲ. ಎಲ್ಲರೂ ಒತ್ತುವರಿದಾರರ ಜೊತೆಗೆ ಶಾಮೀಲಾಗಿದ್ದಾರೆ' ಎಂದು ಬಾಣಸವಾಡಿ ನಿವಾಸಿ ಗೋಪಾಲ ರೆಡ್ಡಿ ಆರೋಪಿಸಿದರು.

ಜಂಟಿ ಸರ್ವೆ ಅಗತ್ಯ: ತಹಶೀಲ್ದಾರ್

'ಬಾಣಸವಾಡಿ ಕೆರೆಯ ಅಂಗಳದಲ್ಲಿ ಒತ್ತುವರಿಯನ್ನು ಒಂದು ಬಾರಿ ತಾಲ್ಲೂಕು ಆಡಳಿತ ತೆರವು ಮಾಡಿದೆ. ಮತ್ತೆ ಒತ್ತುವರಿಯಾಗಿರುವುದೂ ನಿಜ. ನಾವು ಒತ್ತುವರಿ ತೆರವು ಮಾಡಿದ ಮೇಲೆ ರಕ್ಷಣೆ ಮಾಡಿಕೊಳ್ಳುವುದು ಬಿಡಿಎ ಅಥವಾ ಬಿಬಿಎಂಪಿ ಜವಾಬ್ದಾರಿ. ಅದಾಗದಿರುವುದರಿಂದ ಮತ್ತೆ ಅತಿಕ್ರಮವಾಗಿದೆ. ಈ ಕೆರೆ ಅಂಗಳವನ್ನು ಬಿಡಿಎ, ಬಿಬಿಎಂಪಿಯೊಂದಿಗೆ ಜಂಟಿ ಸರ್ವೆ ಮಾಡಬೇಕಾಗಿದೆ. ಅವರಿಗೆ ತಿಳಿಸಲಾಗಿದೆ. ಅಲ್ಲಿಂದ ಉತ್ತರ ಬಂದಿಲ್ಲ. ಎಲ್ಲರೂ ಸೇರಿ ಜಂಟಿ ಸರ್ವೆ ಮಾಡಿದರೆ ಎಲ್ಲ ಒತ್ತುವರಿಯನ್ನೂ ತೆರವು ಮಾಡಬಹುದು' ಎಂದು ಬೆಂಗಳೂರು ಪೂರ್ವ ತಾಲ್ಲೂಕು ತಹಶೀಲ್ದಾರ್ ಎಸ್. ಅಜಿತ್‌ಕುಮಾರ್ ರೈ ತಿಳಿಸಿದರು.



ಬಾಣಸವಾಡಿ ಕೆರೆ ಒತ್ತುವರಿಯ ಸರ್ವೆ ನಕ್ಷೆ

ಯಾರಿಂದ ಒತ್ತುವರಿ?

ದೇವಸ್ಥಾನ– *6.12* ಗುಂಟೆ, ಪೆಟ್ರೋಲ್ ಬಂಕ್ ಮತ್ತು ಕಟ್ಟಡಗಳು– *1* ಎಕರೆ *28.9* ಗುಂಟೆ, ಬಿಡಿಎ– ನಿವೇಶನ *12* ಎಕರೆ *33* ಗುಂಟೆ, ರಸ್ತೆ– *7* ಎಕರೆ *31* ಗುಂಟೆ, ಚರಂಡಿ– *24.08* ಗುಂಟೆ... ಇತ್ಯಾದಿಗಳಿಗೆ ಒತ್ತುವರಿಯಾಗಿದೆ ಎಂದು ಬಿಬಿಎಂಪಿ ವರದಿ ಮಾಡಿದೆ.

ಬಾಣಸವಾಡಿ ಕೆರೆ ಅಂಗಳದಲ್ಲಿ ಅತಿಕ್ರಮವಾಗಿರುವ ಮಳಿಗೆಗಳು, ದೇವಸ್ಥಾನ, ಸರ್ವೀಸ್ ಸೆಂಟರ್

'ಸರ್ಕಾರಿ ಕೆರೆ ಅಂಗಳ ಅತಿಕ್ರಮ ಪ್ರವೇಶ ನಿಷೇಧಿಸಲಾಗಿದೆ' ಎಂದು ಸಾರುವ ಫಲಕದ ಸ್ಥಿತಿ (ಎಡಚಿತ್ರ). ಬಾಣಸವಾಡಿ ಕೆರೆ ಅಂಗಳದಲ್ಲಿ ಅತಿಕ್ರಮವಾಗಿರುವ ಮಳಿಗೆಗಳು

ಸುದ್ದಿ 2 ನಿಮಿಷ

ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಪುಸ್ತಕಗಳಿಗೆ ವಿಶೇಷ ರಿಯಾಯಿತಿ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಉದಯಭಾನು ಕಲಾಸಂಘವು ವಿವಿಧ ಕೃತಿಗಳಿಗೆ ವಿಶೇಷ ರಿಯಾಯಿತಿ ಘೋಷಿಸಿದೆ.

₹ 3,750 ಮುಖಬೆಲೆಯ 'ಬೆಂಗಳೂರು ದರ್ಶನ' ಗ್ರಂಥ ಹಾಗೂ ₹ 2,500 ಬೆಲೆಯ 'ಕರ್ನಾಟಕ ವಿಜ್ಞಾನ ತಂತ್ರಜ್ಞಾನ ದರ್ಶನ' ಪುಸ್ತಕವನ್ನು ತಲಾ ₹ 2 ಸಾವಿರಕ್ಕೆ ನೀಡಲಾಗುವುದು. 'ಬೆಂಗಳೂರು ದರ್ಶನ' ಖರೀದಿಸಿದವರಿಗೆ ಹೆಚ್ಚುವರಿ 3 ಡಿವಿಡಿ ಒದಗಿಸಲಾಗುವುದು.

ಕನ್ನಡ ನಾಡಿನ 50 ಮಂದಿ ಸಾಧಕರ 50 ಕೃತಿಗಳು ಮತ್ತು ಇತರ ಪುಸ್ತಕಗಳನ್ನು ಶೇ 50 ರಷ್ಟು ರಿಯಾಯಿತಿಯಲ್ಲಿ ನೀಡಲಾಗುವುದು ಎಂದು ಸಂಘದ ಗೌರವ ಕಾರ್ಯದರ್ಶಿ ಎಂ. ನರಸಿಂಹ ತಿಳಿಸಿದ್ದಾರೆ.

ಈ ರಿಯಾಯಿತಿ ನ.30ರವರೆಗೆ ಇರಲಿದೆ. ಅಂಚೆ ವೆಚ್ಚ ಪ್ರತ್ಯೇಕ ಪಾವತಿಸಬೇಕು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸಂಪರ್ಕಕ್ಕೆ: 080 26609343 ಅಥವಾ 9980218516

ಕಾರ್ಮಿಕರಿಗೆ ಸೌಲಭ್ಯ ವಿತರಣೆ

ಬೆಂಗಳೂರು: ಬಿಜಿಎಸ್ ಕ್ರೀಡಾಂಗಣದಲ್ಲಿ ಕಾರ್ಮಿಕ ಇಲಾಖೆ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಕಟ್ಟಡ ಕಾರ್ಮಿಕರಿಗೆ ವಿವಿಧ ಸೌಲಭ್ಯ ವಿತರಣಾ ಸಮಾರಂಭಕ್ಕೆ ಸಚಿವ ವಿ.ಸೋಮಣ್ಣ ಚಾಲನೆ ನೀಡಿದರು.

ಕಟ್ಟಡ ಕಾರ್ಮಿಕರಿಗೆ, ಅಸಂಘಟಿತ ಕಾರ್ಮಿಕರಿಗೆ 45 ಕಿ.ಮೀ ಉಚಿತ ಬಸ್ ಪ್ರಯಾಣಕ್ಕೆ ಅವಕಾಶ ಕಲ್ಪಿಸಿದ್ದೇವೆ. ಮುಂದಿನ ದಿನಗಳಲ್ಲಿ 100 ಕಿ.ಮೀ ವರೆಗಿನ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಸಚಿವರು ಹೇಳಿದರು.

ಮದುವೆಯಾದ ಬಡ ದಂಪತಿಗೆ ₹ 50 ಸಾವಿರ ಸಹಾಯಧನ, ಉಚಿತ ಆರೋಗ್ಯ ಸೇವೆ ಸೌಲಭ್ಯ ನೀಡಲಾಗುತ್ತಿದ್ದು, ವೈದ್ಯಕೀಯ ವೆಚ್ಚಕ್ಕಾಗಿ ₹ 2 ಲಕ್ಷ ನೀಡಲಾಗುತ್ತಿದೆ ಎಂದರು.

ಶಾಸಕ ಎನ್. ಮಹೇಶ್, ಗೋವಿಂದರಾಜನಗರ ಮಂಡಲ ಬಿ.ಜೆ.ಪಿ. ಅಧ್ಯಕ್ಷ ವಿಶ್ವನಾಥಗೌಡ, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ರಾಮಪ್ಪ, ವಾಗೇಶ್, ದಾಸೇಗೌಡ ಮತ್ತು ರಾಜ್ಯ ಕಟ್ಟಡ ನಿರ್ಮಾಣ ಮತ್ತು ಕಾರ್ಮಿಕರ ಒಕ್ಕೂಟದ ರಾಜ್ಯ ಅಧ್ಯಕ್ಷ ಬಿ.ದೇವರಾಜ್, ಕಾರ್ಯಾಧ್ಯಕ್ಷ ಆರ್. ಶ್ರೀನಿವಾಸ್ ಹಾಜರಿದ್ದರು.

'ಗಂಧದ ಗುಡಿ' ಪ್ರಚಾರಕ್ಕೆ ಬೈಕ್ ರ್‍ಯಾಲಿ

ಬೆಂಗಳೂರು: 'ಪ್ರಕೃತಿ ಮತ್ತು ಮನುಷ್ಯನ ನಡುವಿನ ಗಾಢ ಸಂಬಂಧವನ್ನು ನಟ ಪುನೀತ್ ರಾಜಕುಮಾರ್ ತಮ್ಮ ಜೀವಿತಾವಧಿಯಲ್ಲಿ ತೋರಿಸಿ, ಮಾದರಿಯಾಗಿ ಹೋಗಿದ್ದಾರೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ನೆನಪಿಸಿಕೊಂಡರು.

ಅರಣ್ಯ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ 'ಗಂಧದ ಗುಡಿ' ಸಿನಿಮಾ ಪ್ರಚಾರದ ಬೈಕ್ ರ್‍ಯಾಲಿ ಉದ್ಘಾಟಿಸಿ, ಮತ್ತು ಸಸಿ ನೆಡುವಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಅರಣ್ಯ ಭವನದಿಂದ ಕಾವೇರಿ ಚಿತ್ರಮಂದಿರದವರೆಗೆ ಬೈಕ್ ಚಾಲನೆ ಮಾಡಿ ರ್‍ಯಾಲಿ ಉದ್ಘಾಟಿಸಿದರು.

'ಈ ಸಿನಿಮಾದ ಟೀಸರ್ ಬಿಡುಗಡೆಗೆ ಪ್ರಧಾನಿ ನರೇಂದ್ರ ಮೋದಿ ಅವರೂ ಟ್ವಿಟರ್ ಮೂಲಕ ಹಾರೈಸಿದ್ದಾರೆ. ಈ ಸಿನಿಮಾ ಕನ್ನಡ ನಾಡಿನ ನಿಸರ್ಗ ವೈಭವವನ್ನು ಸೆರೆಹಿಡಿದಿದೆ' ಎಂದು ಅವರು ಬಣ್ಣಿಸಿದರು.

'ಇತ್ತೀಚೆಗೆ ಹವಾಮಾನ ಬದಲಾವಣೆ ದೊಡ್ಡ ಸಮಸ್ಯೆ ಆಗಿದೆ. ನಮ್ಮಲ್ಲಿ ಕೂಡ ಇತ್ತೀಚೆಗೆ ಅಕಾಲಿಕ ಮಳೆ ವಿಪರೀತವಾಗಿದೆ. ಪ್ರಕೃತಿಯನ್ನು ಗೌರವಿಸುವುದೇ ಇದಕ್ಕೆ ಪರಿಹಾರ' ಎಂದೂ ಸಚಿವರು ಹೇಳಿದರು.

'ಸುಸ್ಥಿರ ಅಭಿವೃದ್ಧಿ ಸಾಧಿಸುವುದು ನಮ್ಮ ಗುರಿ ಆಗಬೇಕು. ಜತೆಗೆ, ಪ್ರತಿಯೊಂದು ವಿಚಾರದಲ್ಲೂ ಸಾಮಾಜಿಕ ಬದ್ಧತೆ ಇರಬೇಕು. ಇದೇ ಪುನೀತ್ ಅವರಿಗೆ ಸಲ್ಲಿಸುವ ಗೌರವ' ಎಂದರು. ಅಶ್ವಿನಿ ಪುನೀತ್ ರಾಜಕುಮಾರ್, ಚಿತ್ರದ ನಿರ್ದೇಶಕ ಜೆ.ಎಸ್. ಅಮೋಘವರ್ಷ ಇದ್ದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಶನ್ ಸಂಸ್ಥೆಯು ಗ್ರಾಮೀಣ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ 2022–23ನೇ ಸಾಲಿನ ವಿದ್ಯಾರ್ಥಿ ವೇತನ ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಿದೆ.

ಸಣ್ಣ, ಅತಿ ಸಣ್ಣ ರೈತರ ಮಕ್ಕಳು, ವ್ಯವಸಾಯ ಕೂಲಿ ಕಾರ್ಮಿಕ ಮಕ್ಕಳು ಈ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿದ್ದು, ಪಿಯುಸಿ, ಸ್ನಾತಕ, ವೃತ್ತಿಪರ ಸ್ನಾತಕ, ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಶೇ 80ರಷ್ಟು ಅಂಕ ಗಳಿಸಿದ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕೆ ಈ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಆಸಕ್ತರು ಅರ್ಜಿಯನ್ನು www.ksfkarnataka.com ವೆಬ್‌ಸೈಟ್‌ನಲ್ಲಿ ಪಡೆದುಕೊಂಡು ಅಕ್ಟೋಬರ್ 31ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 080–25202299, 9481903019ಗೆ ಸಂಪರ್ಕಿಸಿ.

ನಗರದಲ್ಲಿ ಇಂದು

ಕ್ರೀಡಾ ಪುರಸ್ಕಾರ: ಅತಿಥಿಗಳು: ಜಯಕರ್ ಎಸ್.ಎಂ., ಮಹೇಶ ಬಾಬು, ಅಜಿತ್ ಕುಮಾರ್ ಹೆಗಡೆ, ಡಾ.ಎಚ್.ಸುಧಾಕರ್, ಎಂ.ಉದಯ್ ಕುಮಾರ್, ಸಿ.ಆರ್.ಮಹೇಶ, ಎಲ್.ಎನ್.ಮಂಜುನಾಥ್, ಪಿ.ಸಿ.ಕೃಷ್ಣಸ್ವಾಮಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ವಿಶ್ವ ಆಹಾರ ದಿನಾಚರಣೆ: ಉದ್ಘಾಟನೆ: ಡಾ.ಕೆ.ಸಿ.ನಾರಾಯಣಸ್ವಾಮಿ, ಅತಿಥಿಗಳು: ಎಸ್.ಎಲ್.ಜಗದೀಶ್, ಅಧ್ಯಕ್ಷತೆ: ಕೆ. ನಾರಾಯಣ ಗೌಡ, ಆಯೋಜನೆ: ಕೃಷಿ ವಿಶ್ವವಿದ್ಯಾಲಯ ಬೆಂಗಳೂರು, ವಿಸ್ತರಣಾ ನಿರ್ದೇಶನಾಲಯ ರೈತ ತರಬೇತಿ ಸಂಸ್ಥೆ ಮತ್ತು ಸಿಬ್ಬಂದಿ ತರಬೇತಿ ಘಟಕ, ಸ್ಥಳ: ರೈತ ತರಬೇತಿ ಸಂಸ್ಥೆ, ಜಿಕೆವಿಕೆ, ಮಧ್ಯಾಹ್ನ 2

ಉಚಿತ ಆರೋಗ್ಯ ತಪಾಸಣಾ ಶಿಬಿರ

ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಸಂಸದ ಡಿ.ವಿ.ಸದಾನಂದಗೌಡ ಚಾಲನೆ ನೀಡಿದರು

ಬೆಂಗಳೂರು: ನಂದಿನಿ ಲೇಔಟ್ ವಾರ್ಡ್ ಕಂಠೀರವ ನಗರದ ಮುಳುಗಲ್ ವ್ಯಾಲಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸದಾ ಸ್ಮಿತಾ ಫೌಂಡೇಷನ್ ವತಿಯಿಂದ ಎಂ.ಎಸ್. ರಾಮಯ್ಯ ಆಸ್ಪತ್ರೆ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಶಸ್ತ್ರಚಿಕಿತ್ಸಾ ಶಿಬಿರ ನಡೆಯಿತು. ಸಂಸದರಾದ ಡಿ.ವಿ.ಸದಾನಂದಗೌಡ ಅವರು ಚಾಲನೆ ನೀಡಿದರು.

ಕಣ್ಣಿನ ತಪಾಸಣೆ, ರಕ್ತದೊತ್ತಡ, ಆರ್ಥೋಪೆಡಿಕ್, ಚರ್ಮರೋಗ, ಇಎನ್‌ಟಿ, ಇಸಿಜಿ, ದಂತ ಪರೀಕ್ಷೆ ಸೇರಿದಂತೆ ಹಲವು ಚಿಕಿತ್ಸೆಗಳು ಲಭ್ಯವಿವೆ. ನಂದಿನಿ ಲೇಔಟ್ ವಾರ್ಡ್, ಮಹಾಲಕ್ಷ್ಮಿ ಲೇಔಟ್‌ನ ಸಾರ್ವಜನಿಕರು ಪಾಲ್ಗೊಂಡು ಶಿಬಿರದ ಪ್ರಯೋಜನ ಪಡೆಯಬೇಕು ಎಂದು ಸದಾನಂದ ಗೌಡ ಹೇಳಿದರು.

ಶಿಬಿರಕ್ಕೆ ಬಂದ ಸಾರ್ವಜನಿಕರ ಕುಶಲೋಪರಿ ವಿಚಾರಿಸಿ ಇಂದಿನ ಒತ್ತಡ ಜೀವನದಲ್ಲಿ ಆರೋಗ್ಯದ ಕಡೆ ಗಮನ ನೀಡುವಂತೆ ಅವರು ಕರೆ ನೀಡಿದರು.

ಬಿಬಿಎಂಪಿ ಮಾಜಿ ಉಪ ಮೇಯರ್ ಎಸ್. ಹರೀಶ್, ಸದಸ್ಯರಾದ ಕೆ.ವಿ. ರಾಜೇಂದ್ರ ಕುಮಾರ್, ಸ್ಥಳೀಯ ಮುಖಂಡರಾದ ಪ್ರಸನ್ನ ಮುನಿರಾಜು, ಲಕ್ಷಣ ಪೂಜಾರಿ, ಡಿ.ವಿ.ಕಾರ್ತಿಕ್ ಗೌಡ, ಅವಿನ್ ಆರಾಧ್ಯ ಹಾಜರಿದ್ದರು.

'ಪ್ರತ್ಯೇಕ ರಾಜ್ಯಕ್ಕೆ ಬೇಡಿಕೆ ಬಂದರೆ ಮಟ್ಟಹಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡಕ್ಕಿರುವ ಗೌರವವನ್ನು ದುರ್ಬಳಕೆ ಮಾಡಿಕೊಂಡು ಕೆಲವರು ಲಾಭ ಪಡೆಯುವ ಕೆಲಸ ಮಾಡುತ್ತಿದ್ದಾರೆ' ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರು ಬೇಸರ ವ್ಯಕ್ತಪಡಿಸಿದರು.

ಕನ್ನಡ ಜನಶಕ್ತಿ ಕೇಂದ್ರದಿಂದ ಭಾನುವಾರ ನಡೆದ 'ಕನ್ನಡವೆಂದರೆ ಬರಿ ನುಡಿಯಲ್ಲ' ಎರಡು ದಿನಗಳ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

'ಕನ್ನಡವನ್ನು ಸಂವಿಧಾನ ಗೌರವಿಸಿ ಮಾನ್ಯತೆ ನೀಡಿದೆ. ಕರ್ನಾಟಕ ಹಾಗೂ ಕನ್ನಡಕ್ಕೆ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಎಂಬ ಭೇದಭಾವ ಇಲ್ಲ. ಕನ್ನಡಿಗರಲ್ಲಿ ಹರಿಯುವ ರಕ್ತ ಒಂದೇ. ಆದರೆ, ಕೆಲವರು ಪ್ರಾದೇಶಿಕ ಭಿನ್ನತೆ ವ್ಯಕ್ತಪಡಿಸುತ್ತಿದ್ದಾರೆ' ಎಂದು ಹೇಳಿದರು.

'ಪ್ರತ್ಯೇಕ ರಾಜ್ಯಕ್ಕೆ ಬೇಡಿಕೆ ಬಂದರೆ ಆರಂಭದಲ್ಲಿಯೇ ಮಟ್ಟಹಾಕಬೇಕು' ಎಂದು ಸಲಹೆ ನೀಡಿದರು. 'ಕನ್ನಡದ ಪಂಡಿತ ನಾನು ಅಲ್ಲ. ಆದರೆ, ನಾನು ಕನ್ನಡದ ಅಪ್ಪಟ ಅಭಿಮಾನಿ' ಎಂದೂ ಸಂತೋಷ ಹೆಗ್ಡೆ ನುಡಿದರು.

'ಕನ್ನಡವೆಂದರೆ ಬರಿ ನುಡಿಯಲ್ಲ' ಸಮಾರೋಪ ಸಮಾರಂಭದಲ್ಲಿ ಎ.ಎಚ್. ರಾಮರಾವ್ (ಎಡದಿಂದ ಮೂರನೆಯವರು) ಮತ್ತು ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ (ಬಲಗಡೆಯವರು) ಚರ್ಚಿಸಿದರು. ನಾಗರಾಜ ರೆಡ್ಡಿ, ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಇದ್ದರು –ಪ್ರಜಾವಾಣಿ ಚಿತ್ರ

'1956ರಲ್ಲಿ ಭಾಷಾವಾರು ಪ್ರಾಂತ್ಯಗಳ ಆಧರಿಸಿ ರಾಜ್ಯಗಳ ವಿಂಗಡನೆ ಮಾಡಲಾಯಿತು. ಅದಕ್ಕೆ ಸಂವಿಧಾನದ ಸಮ್ಮತಿ ಸಿಕ್ಕಿತು. ಎರಡು ದಿನದ ಜನಶಕ್ತಿ ಕಾರ್ಯಕ್ರಮದಲ್ಲಿ ಕನ್ನಡದ ಬಗ್ಗೆ ಚರ್ಚಿಸಲಾಗಿದೆ. ಪಂಡಿತರು ಪರಿಹಾರ ಹುಡುಕಿದ್ದಾರೆ. ಅವುಗಳ ಅನುಷ್ಠಾನಕ್ಕೆ ತರಬೇಕು' ಎಂದರು.

'ಕನ್ನಡವನ್ನು ನಮ್ಮ ರಾಜ್ಯ ಭಾಷೆಯಾಗಿ ಬಳಸಿಕೊಳ್ಳೋಣ. ಕನ್ನಡಕ್ಕೆ ಕರ್ನಾಟಕದಲ್ಲಿ ಪ್ರಾಮುಖ್ಯತೆ ನೀಡಬೇಕು' ಎಂದು ನುಡಿದರು.

ನ್ಯಾಷನಲ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಎ.ಎಚ್.ರಾಮರಾವ್, ಕಾರ್ಯದರ್ಶಿ ನಾಗರಾಜ ರೆಡ್ಡಿ, ವೇದಿಕೆ ಅಧ್ಯಕ್ಷ ಸಿ.ಕೆ.ರಾಮೇಗೌಡ, ಪಿ.ಮಲ್ಲಿಕಾರ್ಜುನಪ್ಪ ಹಾಜರಿದ್ದರು.

ಕಾರ್ಯಕ್ರಮದಲ್ಲಿ ಬೇಸಾಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಎಸ್‌.ಬಿ. ಯೋಗಾನಂದ ಅವರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ವಿತರಿಸಲಾಯಿತು. ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ.ಸಿ.ನಾರಾಯಣ ಸ್ವಾಮಿ, ಕುಲಸಚಿವ ಡಾ.ಬಸವೇಗೌಡ, ಸಂಶೋಧನಾ ನಿರ್ದೇಶಕ ಡಾ.ಕೆ.ಬಿ.ಉಮೇಶ್, ವಿಸ್ತರಣಾ ನಿರ್ದೇಶಕ ಡಾ.ಕೆ.ನಾರಾಯಣಗೌಡ ಇದ್ದರು.

'2030ಕ್ಕೆ ಆಹಾರ ಕೊರತೆ ಸಾಧ್ಯತೆ'

ಯಲಹಂಕ: 'ದೇಶದಲ್ಲಿ ಪ್ರಸ್ತುತ 10 ಲಕ್ಷ ಮೆಟ್ರಿಕ್ ಟನ್ ಆಹಾರ ಉತ್ಪಾದನೆಯಾಗುತ್ತಿದ್ದರೂ ಶೇ 22ರಷ್ಟು ಜನಸಂಖ್ಯೆ ಅಪೌಷ್ಟಿಕತೆಯಿಂದ ಮತ್ತು ಶೇ 20ರಷ್ಟು ಮಂದಿ ಅಧಿಕ ತೂಕದಿಂದ ಬಳಲುತ್ತಿದ್ದಾರೆ. ಇದೇ ರೀತಿ ಮುಂದುವರಿದರೆ 2030ಕ್ಕೆ ಶೇ23ರಷ್ಟು ಆಹಾರ ಕೊರತೆಯಾಗಲಿದೆ' ಎಂದು ಹೈದರಾಬಾದ್‌ನ 'ಮ್ಯಾನೇಜ್' ಸಂಸ್ಥೆಯ ಮಹಾನಿರ್ದೇಶಕ ಡಾ.ಪಿ. ಚಂದ್ರಶೇಖರ್ ಕಳವಳ ವ್ಯಕ್ತಪಡಿಸಿದರು.

ಜಿಕೆವಿಕೆಯಲ್ಲಿ ಆಯೋಜಿಸಿದ್ದ ಕೃಷಿ ವಿಶ್ವವಿದ್ಯಾಲಯದ 57ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, 'ಹವಾಮಾನ ವೈಪರಿತ್ಯ ಹಾಗೂ ತಾಂತ್ರಿಕತೆಗಳ ಅಸಮರ್ಪಕ ಬಳಕೆಯು ಇದಕ್ಕೆ ಮುಖ್ಯ ಕಾರಣವಾಗಿದೆ. ಇದನ್ನು ನಿರ್ಮೂಲನೆ ಮಾಡಲು ಆಹಾರ ಪೋಷಕಾಂಶಗಳ ಸಂರಕ್ಷಣೆ, ಕೃಷಿ ಆದಾಯ ಭದ್ರತೆ, ಮೌಲ್ಯವರ್ಧನೆ ಮತ್ತು ಗುಣಮಟ್ಟದ ಮಾನವಸಂಪನ್ಮೂಲ ಬಳಕೆ ಅತ್ಯಗತ್ಯ' ಎಂದರು.

ಕೃಷಿ ವಿಶ್ವವಿದ್ಯಾಲಯ ಕುಲಪತಿ ಡಾ.ಕೆ.ಸಿ.ನಾರಾಯಣಸ್ವಾಮಿ ಮಾತನಾಡಿ, 'ಸಂಸ್ಥಾಪನಾ ದಿನಾಚ ರಣೆಯು ಮಹತ್ತರವಾಗಿದ್ದು, ಮುಂದಿನ ಸವಾಲುಗಳನ್ನು ನಿರ್ವಹಿಸಲು ವೇದಿಕೆಯನ್ನು ಒದಗಿಸುತ್ತದೆ' ಎಂದು ಅವರು ಹೇಳಿದರು.

ಅತ್ಯುತ್ತಮ ಸೇವೆ ಸಲ್ಲಿಸಿದ ಶಿಕ್ಷಕರು, ವಿಜ್ಞಾನಿಗಳು ಮತ್ತು ಸಿಬ್ಬಂದಿಗೆ ವಿವಿಧ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಯಿತು.

ಕೃಷಿ ವಿಶ್ವವಿದ್ಯಾಲಯದ ಕುಲಸಚಿವ ಡಾ.ಬಸವೇಗೌಡ, ಸಂಶೋಧನಾ ನಿರ್ದೇಶಕ ಡಾ.ಕೆ.ಬಿ. ಉಮೇಶ್, ವಿಸ್ತರಣಾ ನಿರ್ದೇಶಕ ಡಾ.ಕೆ. ನಾರಾಯಣಗೌಡ ಇದ್ದರು.

ವಿದ್ಯುತ್ ಗುತ್ತಿಗೆದಾರರ ಸಂಘಕ್ಕೆ ನೇಮಕ

ರಾಜರಾಜೇಶ್ವರಿನಗರ: ರಾಜ್ಯ ಅನು ಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಮಾಧ್ಯಮ ವಕ್ತಾರರಾಗಿ ರೇಣುಕಾಪ್ರಸಾದ್ ಅವರನ್ನು ರಾಜ್ಯ ಅಧ್ಯಕ್ಷ ಸಿ.ರಮೇಶ್ ಅವರು ನೇಮಕ ಮಾಡಿದ್ದಾರೆ ಕೇಂದ್ರ ಸಮಿತಿ ಪ್ರಧಾನ ಕಾರ್ಯ ದರ್ಶಿ ಎಚ್.ವಿ.ಚಂದ್ರಬಾಬು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹರಿವರಾಸನಂ ಶತಮಾನೋತ್ಸವ: ಕುಮ್ಮನಂ ರಾಜಶೇಖರನ್ ಅಭಿಮತ

ಶಬರಿಮಲೈ: ಸಮಾಜ ಸುಧಾರಣೆಯ ಭಕ್ತಿ ತಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಬರಿಮಲೈ ಅಯ್ಯಪ್ಪಸ್ವಾಮಿ ಭಕ್ತರು ಕೈಗೊಳ್ಳುವ ವ್ರತವು ಭಕ್ತಿ ಆಂದೋಲನದ ಸ್ವರೂಪವಾಗಿದೆ. ಸಮಾಜ ಸುಧಾರಣೆಯ ಭಕ್ತಿ ಆಂದೋಲನ ಇದಾಗಿದೆ' ಎಂದು ಮಿಜೋರಾಂನ ಮಾಜಿ ರಾಜ್ಯಪಾಲ ಕುಮ್ಮನಂ ರಾಜಶೇಖರನ್ ಪ್ರತಿಪಾದಿಸಿದರು.

ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂ (ಎಸ್‌ಎಎಸ್‌ಎಸ್) ಭಾನುವಾರ ಆಯೋಜಿಸಿದ್ದ 'ಹರಿವರಾಸನಂ ಶತಮಾನೋತ್ಸವ' ಸಮಾರಂಭದಲ್ಲಿ ಅವರು, 'ನಾವೆಲ್ಲರೂ ಒಂದು ಎನ್ನುವ ಸಂದೇಶ ಸಾರುವುದೇ ಶಬರಿಮಲೈ ಆಶಯ' ಎಂದು ಹೇಳಿದರು.

'ಶಬರಿಮಲೈ ಇಂದು ಎಲ್ಲ ವರ್ಗಗಳನ್ನು ಒಗ್ಗೂಡಿಸುವ ಪವಿತ್ರ ತಾಣವಾಗಿದೆ. ಏಕತೆಯ ಸಂದೇಶ ಸಾರುವುದೇ ಭಕ್ತಿ ಆಂದೋಲನ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲೂ ಭಕ್ತಿ ಆಂದೋಲನವು ಪ್ರಮುಖ ಪಾತ್ರ ವಹಿಸಿದೆ' ಎಂದು ವಿವರಿಸಿದರು.

'ನಾವೆಲ್ಲರೂ ಒಂದು. ಇಲ್ಲಿ ಯಾವುದೇ ರೀತಿಯ ವಿಭಜನೆಯೇ ಇಲ್ಲ. ಜಾತಿ, ವರ್ಗಗಳ ಭೇದಭಾವ ಇಲ್ಲ. ಶಬರಿಮಲೈ ದೇವಾಲಯವು ಹಲವು ಬಾರಿ ವಿಘ್ನಗಳನ್ನು ಎದುರಿಸಿದೆ. ದೇವಾಲಯದ 10 ಎಕರೆ ಜಾಗವೂ ಒತ್ತುವರಿ ಆಗಿತ್ತು' ಎಂದು ವಿವರಿಸಿದರು.

ಆರ್‌ಎಸ್‌ಎಸ್ ಮುಖಂಡ ಎ.ಆರ್. ಮೋಹನನ್ ಅವರು, 'ಭಾರತ ವಿಶ್ವಗುರುವಾಗಬೇಕು ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ನಾವು ಹಿಂದೆ ವಿಶ್ವಗುರುವಾಗಿದ್ದೆವು. ಮತ್ತೆ ವಿಶ್ವಗುರುವಾಗಲು ಒಗ್ಗೂಡಿ ಶ್ರಮಿಸಬೇಕಾಗಿದೆ' ಎಂದು ಹೇಳಿದರು.

'ಭಾರತ ಸದಾ ವಿಶ್ವಶಾಂತಿ ಪ್ರತಿಪಾದಿಸಿದೆ. ಭಾರತೀಯರ ಚಿಂತನೆಗಳು ಎಂದಿಗೂ ಸ್ವಾರ್ಥದಿಂದ ಕೂಡಿಲ್ಲ. ಸನಾತನ ಧರ್ಮ ಮತ್ತು ಹಿಂದೂತ್ವದಿಂದ ಮಾತ್ರ ಶಾಂತಿ ಸ್ಥಾಪಿಸಲು ಸಾಧ್ಯ' ಎಂದು ಪ್ರತಿಪಾದಿಸಿದರು.

ನಿವೃತ್ತ ನ್ಯಾಯಮೂರ್ತಿ ಕುಮಾರ್, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್, ರಾಷ್ಟ್ರೀಯ ಅಧ್ಯಕ್ಷ ಟಿ.ಬಿ. ಶೇಖರ್, ರಾಷ್ಟ್ರೀಯ ಕಾರ್ಯದರ್ಶಿ ಈರೋಡು ಎನ್. ರಾಜನ್ ಇದ್ದರು.

'ಹರಿವರಾಸನಂ ಶತಮಾನೋತ್ಸವ' ಉದ್ಘಾಟನಾ ಸಮಾರಂಭದಲ್ಲಿ 'ಶಬರಿಮಲೆ ಅಯ್ಯಪ್ಪ ಸೇವಾ ಸಮಾಜಂ' (ಎಸ್‌ಎಎಸ್‌ಎಸ್) ಟ್ರಸ್ಟಿ ಮತ್ತು ರಾಷ್ಟ್ರೀಯ ಅಧ್ಯಕ್ಷ ಟಿ.ಬಿ.ಶೇಖರ್ ಅವರನ್ನು ಗೌರವಿಸಲಾಯಿತು. (ಎಡದಿಂದ) ಮಿಜೋರಾಂ ಮಾಜಿ ರಾಜ್ಯಪಾಲ ಕುಮ್ಮಣಂ ರಾಜಶೇಖರನ್, ಎಸ್‌ಎಎಸ್‌ಎಸ್ ಅಧ್ಯಕ್ಷ ಡಾ.ಎನ್. ಜಯರಾಮ್, ಅನ್ನದಾನ ಸಮಿತಿ ರಾಷ್ಟ್ರೀಯ ಅಧ್ಯಕ್ಷ ವಿ.ಕೃಷ್ಣಪ್ಪ, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ತುಮಕೂರಿನ ಚಿಕ್ಕತೊಟ್ಲುಕೆರೆಯ ಶಿವಲಿಂಗ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಎಸ್‌ಎಎಸ್‌ಎಸ್ ರಾಜ್ಯ ಉಪಾಧ್ಯಕ್ಷ ಡಾ.ಎಂ.ಮುನಿರಾಜು ಇದ್ದರು. – ಪ್ರಜಾವಾಣಿ ಚಿತ್ರ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿ–2 (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ
ನಂ. 14/3, ಸಿ.ಎಫ್.ಸಿ.ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು – 560 001.
ಸಂಖ್ಯೆ:ಕೆಐಎಡಿಬಿ/ಎಲ್ಎಕ್ಯೂ/147/2022–23 ದಿನಾಂಕ:13.10.2022

ಪತ್ರಿಕಾ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಅರವನಹಳ್ಳಿ, ದೊಡ್ಡಗೊಲ್ಲಹಳ್ಳಿ, ಚಪ್ಪರದಹಳ್ಳಿ ಮತ್ತು ಬೈರದೇನಹಳ್ಳಿ ಗ್ರಾಮಗಳಲ್ಲಿ ಒಟ್ಟು 867–37 ಎಕರೆ ವಿಸ್ತೀರ್ಣದ ಜಮೀನನ್ನು ಕೆಐಎಡಿ ಕಾಯ್ದೆ 1966 ಕಲಂ 28(4)ರಂತೆ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 116 ಎಸ್‌ಪಿಕ್ಯೂ (ಇ) 2022 ದಿನಾಂಕ 25.05.2022 ರಾಜ್ಯಪತ್ರ ಪ್ರಕಟಿತ ದಿನಾಂಕ 26.05.2022 ರನ್ವಯ ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಈ ಜಮೀನುಗಳಿಗೆ ಕೆ.ಐ.ಎ.ಡಿ.ಕಾಯ್ದೆ ಕಲಂ 29(2)ರನ್ವಯ ಪರಿಹಾರ ನಿಗದಿಪಡಿಸಲು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲ್ಲೂಕು ಇವರ ಅಧ್ಯಕ್ಷತೆಯಲ್ಲಿ **ದಿನಾಂಕ 19.10.2022 ರಂದು ಬೆಳಿಗ್ಗೆ 11.00 ಘಂಟೆಗೆ** ಈ ಕೆಳಕಂಡ ವಿಳಾಸದಲ್ಲಿ ಭೂದರ ಸಲಹಾ ಸಮಿತಿ ಸಭೆ ಕರೆಯಲಾಗಿದೆ.

ಕೃಷ್ಣೋದಯ ಕಲ್ಯಾಣ ಮಂಟಪ
ಶ್ರೀ ಕೃಷ್ಣ ಪ್ಯಾಲೇಸ್, ಸರ್ವೆ ನಂ.50/6, ಚನ್ನಕೆಂಪನಹಳ್ಳಿ
ಕುಂದಾಣ ಸರ್ಕಲ್, ಚಪ್ಪರದಕಲ್ಲು ಪೊಲೀಸ್ ಸ್ಟೇಷನ್ ರಸ್ತೆ
ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110

ಆದುದರಿಂದ ನೋಟೀಸ್ ತಲುಪದ ಖಾತೆದಾರರು ಈ ಪ್ರಕಟಣೆಯನ್ನೇ ನೋಟೀಸ್ ಎಂದು ತಿಳಿದುಕೊಂಡು **ದಿನಾಂಕ 19.10.2022 ರಂದು** ನಡೆಯುವ ಸಲಹಾ ಸಮಿತಿ ಸಭೆಗೆ ಭೂಮಾಲೀಕರು ಮಾತ್ರ ಹಾಜರಾಗಲು ತಿಳಿಯಪಡಿಸಿದೆ.

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನೃಪತುಂಗ ರಸ್ತೆ, ಬೆಂಗಳೂರು

ಮೀನು ತಳಿಗಳ ಪರಿಚಯ • ಮೀನುಗಾರಿಕೆ ಇಲಾಖೆಯ ಯೋಜನೆಗಳ ಮಾಹಿತಿ

ಮತ್ಸ್ಯ ಪ್ರಪಂಚ ತೆರೆದಿಟ್ಟ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಟಿಯಸ್ ಕರ್ನಾಟಿಕಸ್, ಕೋಯಿ ಕಾರ್ಪ್, ಫಿದರ್ ಬ್ಯಾಕ್, ಮಹಶೀರ್, ಗಿಫ್ಟ್ ತಿಲಾಪಿಯಾ, ಡೆನಿಸೋನಿ ಬಾರ್ಬ್, ಡಾಕ್ಟರ್ ಗಾರ್ರಾ , ಗೈನ್‌ತೇರಿ, ಸಿಂಘಿ, ಸ್ನೇಕ್ ಹೆಡ್...

ಇವು ವಿಭಿನ್ನ ಮೀನು ತಳಿಗಳ ಹೆಸರು. ಮೀನುಗಾರಿಕೆ ಇಲಾಖೆ ಹಾಗೂ ಫ್ರೀಡಂ ಆ್ಯಪ್ ಸಹಯೋಗದಲ್ಲಿ ನಗರದ ಅರಮನೆ ಮೈದಾನದಲ್ಲಿ ಭಾನುವಾರ ನಡೆದ 'ಒಳನಾಡು ಮೀನು ಉತ್ಪಾದಕರ ಸಮಾವೇಶ-2022'ದಲ್ಲಿ ಮೀನು ತಳಿಗಳ ಪರಿಚಯ ಮಾಡಿಸಲಾಯಿತು.

ವಿವಿಧ ಜಿಲ್ಲೆಗಳಿಂದ ಬಂದಿದ್ದ ಮೀನು ಕೃಷಿಕರು ಭಾಗವಹಿಸಿದ್ದರು. ಇಲಾಖೆಯ ಯೋಜನೆಗಳ ಜೊತೆಗೆ, ಒಳನಾಡಿನಲ್ಲಿ ಸಾಕಬಹುದಾದ ಮೀನುಗಳ ತಳಿಗಳ ಬಗ್ಗೆ ತಜ್ಞರು ಮಾಹಿತಿ ಒದಗಿಸಿದರು.

ಮೀನು ಸಾಕಣೆ ಕ್ರಮ, ಆಹಾರ ಪದ್ಧತಿ, ಆಮ್ಲಜನಕ ವ್ಯವಸ್ಥೆ, ಮಾರುಕಟ್ಟೆ ಹಾಗೂ ಸರ್ಕಾರದ ಯೋಜನೆಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು. ಮಾಹಿತಿ ಫಲಕಗಳನ್ನು ಪ್ರದರ್ಶಿಸಿದರು.

ಮೀನು ಕೃಷಿಕರು, ಯುವಸಮೂಹ, ಮಕ್ಕಳು ಸೇರಿದಂತೆ ಹೆಚ್ಚಿನ ಸಂಖ್ಯೆಯ ಸಭಿಕರು, ಅಕ್ವೇರಿಯಂನಲ್ಲಿ ಇರಿಸಿದ್ದ ಮೀನುಗಳನ್ನು ನೋಡಿ ಅವುಗಳ ಬಗ್ಗೆ ಮಾಹಿತಿ ಪಡೆದರು.

ಒಡಿಶಾದ ಕೇಂದ್ರೀಯ ಸಿಹಿ ನೀರು ಜಲಕೃಷಿ ಸಂಸ್ಥೆಯ ಮಳಿಗೆಯೂ ಇತ್ತು. ಸಮಗ್ರ ಮೀನು ಕೃಷಿ ಭಾಗವಾಗಿ ಮುತ್ತು ಉತ್ಪಾದನೆ ಹಾಗೂ ಇತರೆ ಪರ್ಯಾಯ ಉತ್ಪನ್ನಗಳ ಬಗ್ಗೆ ತಜ್ಞರು ವಿವರಿಸಿದರು.

ಮೀನುಗಾರಿಕೆ ಇಲಾಖೆ, ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳ, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಮಳಿಗೆಗಳು ಗಮನಸೆಳೆದವು.

ಕಡಿಮೆ ಜಾಗದಲ್ಲಿ ಮೀನು ಸಾಕಬಹುದಾದ ಬಯೋಫ್ಲಾಕ್, ಅಕ್ವಾಪೋನಿಕ್ಸ್ ಹಾಗೂ ಪಂಜರದಲ್ಲಿ ಮೀನು ಕೃಷಿ ಬಗ್ಗೆಯೂ ತಜ್ಞರು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿದರು.

ಸ್ಥಳದಲ್ಲೇ ಮೀನು ಖಾದ್ಯದ ಮಳಿಗೆಗಳೂ ಇದ್ದವು. ವೀಕ್ಷಕರು ತಮ್ಮಿಷ್ಟದ ಮೀನುಗಳ ರುಚಿ ಸವಿದರು.

ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮಾವೇಶ ಉದ್ಘಾಟಿಸಿದರು.

ಮೀನುಗಾರಿಕೆ ಮತ್ತು ಬಂದರು ಸಚಿವ ಎಸ್.ಅಂಗಾರ, ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಬೈರತಿ ಬಸವರಾಜ, ಕೋಟ ಶ್ರೀನಿವಾಸ್ ಪೂಜಾರಿ, ಬಿ.ಸಿ.ನಾಗೇಶ್, ಮೀನುಗಾರಿಕೆ ಇಲಾಖೆ ಕಾರ್ಯದರ್ಶಿ ಸಲ್ಮಾ ಕೆ. ಫಹೀಮ್ ಹಾಗೂ ಇಂಡಿಯನ್ ಮನಿ ಡಾಟ್ ಕಾಮ್ ಸಂಸ್ಥಾಪಕ ಸಿ.ಎಸ್. ಸುಧೀರ್ ಇದ್ದರು.

ಮೀನುಗಳನ್ನು ಗಾಜಿನ ಬಾಟಲಿಗೆ ಹಾಕುವ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಮಾವೇಶ ಉದ್ಘಾಟಿಸಿದರು. ಸಚಿವರಾದ ಎಸ್‌.ಅಂಗಾರ, ಭೈರತಿ ಬಸವರಾಜು, ಡಾ.ಸಿ.ಎನ್‌.ಅಶ್ವತ್ಥನಾರಾಯಣ, ಕೋಟ ಶ್ರೀನಿವಾಸ್ ಪೂಜಾರಿ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರಿನಲ್ಲಿ ಬಿಬಿಎಂಪಿ ವಾರ್ಡ್‌ವಾರು ಮೀನು ಆಹಾರ ಮಳಿಗೆಯನ್ನು ತೆರೆಯುವ ಯೋಜನೆ ಇದೆ. ಇದು ಯಶಸ್ವಿಯಾದರೆ, ರಾಜ್ಯದೆಲ್ಲೆಡೆ ವಿಸ್ತರಿಸಲಾಗುವುದು

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಸಚಿವ ನಾಗೇಶ್ ಮೇಲೆ ಸಿ.ಎಂ ಗರಂ

ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಷಣದ ವೇಳೆ, ವೇದಿಕೆಯಲ್ಲಿದ್ದ ಶಿಕ್ಷಣ ಸಚಿವ ನಾಗೇಶ್ ಪಕ್ಕದಲ್ಲಿದ್ದವರ ಜೊತೆ ಮಾತನಾಡುತ್ತಿದ್ದರು. ಅದನ್ನು ಕಂಡು ಸಿಟ್ಟಾದ ಸಿ.ಎಂ, 'ನಾಗೇಶ್, ಮಾತಾಡೋದು ಇದ್ದರೆ ನೀವು ಹೊರಗೆ ಕರೆದುಕೊಂಡು ಹೋಗಿ ಮಾತಾಡಬಹುದು' ಎಂದು ಹೇಳಿ ಸುಮ್ಮನಾಗಿಸಿದರು.

'ಮನೆ ಬಾಗಿಲಿಗೆ ತಾಜಾ ಮೀನು'

ಸೀಫುಡ್ಸ್ ಆ್ಯಂಡ್ ಲಾಜಿಸ್ಟಿಕ್ಸ್ ಸಂಸ್ಥೆಯು ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಗ್ರಾಹಕರ ಮನೆ ಬಾಗಿಲಿಗೆ ತಾಜಾ ಮೀನು ಮತ್ತು ಮೀನಿನ ಉತ್ಪನ್ನಗಳನ್ನು ತಲುಪಿಸುವ ಯೋಜನೆ ಹಮ್ಮಿಕೊಂಡಿದೆ.

'ಮಂಗಳೂರು ಮತ್ತು ಮಲ್ಪೆಯಿಂದ ತಾಜಾ ಮೀನನ್ನು ವಿಮಾನದ ಮೂಲಕ ಬೆಂಗಳೂರಿಗೆ ತಂದು, 243 ಬಿಡಿ ಮಳಿಗೆ ಮತ್ತು ಆ್ಯಪ್ ಮೂಲಕ ತಲುಪಿಸಲಾಗುವುದು' ಎಂದು ಸಂಸ್ಥೆಯ ಪಾಲುದಾರರಾದ ಸುಭೀಷ್ ವಾಸುದೇವ್ ಮತ್ತು ಪ್ರಿಯೇಶ್ ನಾಯ್ಕ್ ತಿಳಿಸಿದ್ದಾರೆ.

ಮಲ್ಪೆ ಮಹಿಳೆಯರ ವಿಶೇಷ ಮಳಿಗೆ

ಮೀನು ಖಾದ್ಯಗಳ ಮಾರಾಟಕ್ಕೆ ಸ್ವಂತ ಕಂಪನಿ ಕಟ್ಟಿಕೊಂಡಿರುವ ಮಲ್ಪೆ ಮೀನುಗಾರರ ಕುಟುಂಬದ ಮಹಿಳೆಯರು ತೆರೆದಿದ್ದ ಮಳಿಗೆ ಗಮನ ಸೆಳೆಯಿತು.

50ಕ್ಕೂ ಹೆಚ್ಚು ಮಹಿಳೆಯರು 'ಮಲ್ಪೆ ಮೀನುಗಾರರ ಉತ್ಪಾದಕರ ಕಂಪನಿ' ಆರಂಭಿಸಿದ್ದು, ಮೀನಿನ ಚಕ್ಕುಲಿ, ಉಂಡೆ, ಚಟ್ನಿ, ಉಪ್ಪಿನಕಾಯಿ ಸೇರಿ ಹಲವು ಖಾದ್ಯ ತಯಾರಿಸುತ್ತಿದ್ದಾರೆ. ಪರ್ಯಾಯ ಉದ್ಯೋಗ ಕಂಡುಕೊಂಡಿದ್ದಾರೆ.

'ನಮ್ಮೂರಲ್ಲೇ ಮೀನು ಖಾದ್ಯ ಮಾರುತ್ತಿದ್ದೆವು. ಜಲಾನಯನ ಅಭಿವೃದ್ಧಿ ಇಲಾಖೆ, ಮೀನುಗಾರಿಕೆ ಇಲಾಖೆ, ಶಿರಸಿಯ ಸ್ಕೊಡ್ವೆಸ್ ಸಂಸ್ಥೆ ಸಹಯೋಗದಲ್ಲಿ ಈಗ ಕಂಪನಿ ಆರಂಭಿಸಿದ್ದೇವೆ' ಎಂದು ಕಂಪನಿಯ ಅಧ್ಯಕ್ಷೆ ವನಜಾ 'ಪ್ರಜಾವಾಣಿ'ಗೆ ತಿಳಿಸಿದರು.

'ನೇರವಾಗಿ ಕುಲಪತಿ ಭೇಟಿಯಾಗಬೇಡಿ'

ವಿದ್ಯಾರ್ಥಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ ಸೂಚನೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕ, ಸ್ನಾತಕೋತ್ತರ, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಕುಲಪತಿ ಮತ್ತು ಕುಲಸಚಿವರನ್ನು ನೇರವಾಗಿ ಭೇಟಿ ಮಾಡಲು ಬರುತ್ತಿರುವುದು ಶಿಷ್ಟಾಚಾರದ ಉಲ್ಲಂಘನೆಯಾಗಿದೆ ಎಂದು ಸುತ್ತೋಲೆ ಹೊರಡಿಸಲಾಗಿದೆ.

ತಮ್ಮ ಅಹವಾಲುಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಮೊದಲು ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿಯಾಗಬೇಕು ಎಂದು ಸೂಚಿಸಲಾಗಿದೆ.

ವಿಭಾಗಮಟ್ಟದಲ್ಲಿ ಆಯಾ ವಿಭಾಗದ ಅಧ್ಯಕ್ಷರು, ವಿದ್ಯಾರ್ಥಿ ನಿಲಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಕ್ಷೇಮಪಾಲಕರು ಅಥವಾ ನಿರ್ದೇಶಕರನ್ನು ಸಂಪರ್ಕಿಸಬೇಕು. ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗದವರೊಂದಿಗೆ ಹಾಗೂ ಶಿಷ್ಯವೇತನ ಮತ್ತು ಇತರೆ ಸೌಲಭ್ಯಗಳ ಬಗ್ಗೆ ವಿಶೇಷಾಧಿಕಾರಿಗಳು, ಪರಿಶಿಷ್ಟ ಜಾತಿ, ಪಂಗಡ ಘಟಕ ಮತ್ತು ಹಿಂದುಳಿ ವರ್ಗದ ಕೋಶ ಇವರ ಮೂಲಕ ಮಾತ್ರವೇ ಪೂರ್ವಾನುಮತಿ ಪಡೆದುಕೊಂಡು ಕಚೇರಿಯ ಸಮಯದಲ್ಲಿ ಕುಲಪತಿ ಅಥವಾ ಕುಲಸಚಿವರನ್ನು ಭೇಟಿಯಾಗುವಂತೆ ತಿಳಿಸಲಾಗಿದೆ.



ಸೈಕ್ಲೊಥಾನ್

ವಿಶ್ವಆಘಾತ ದಿನದ ಪ್ರಯುಕ್ತ ಸ್ಪರ್ಶ್ ಆಸ್ಪತ್ರೆ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಸೈಕ್ಲೊಥಾನ್‌ನಲ್ಲಿ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ರಸ್ತೆ ಅಪಘಾತದಿಂದ ಉಂಟಾಗುವ ಮರಣ ಮತ್ತು ಅಂಗವಿಕಲತೆ ಬಗ್ಗೆ ಜಾಗೃತಿ ಮೂಡಿಸಿದರು

ಹೊತ್ತಿ ಉರಿದ ಮೊಬೈಲ್ ಮಳಿಗೆ

ಬೆಂಗಳೂರು: ನಗರದ ಎಸ್.ಪಿ. ರಸ್ತೆಯ 1ನೇ ಅಡ್ಡರಸ್ತೆಯಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಮೊಬೈಲ್ ದುರಸ್ತಿ ಹಾಗೂ ಬಿಡಿಭಾಗ ಮಾರಾಟ ಮಳಿಗೆಯೊಂದು ಹೊತ್ತಿ ಉರಿದಿದೆ.

'ಬಹುಮಹಡಿ ಕಟ್ಟಡದಲ್ಲಿ 5ಕ್ಕೂ ಹೆಚ್ಚು ಮಳಿಗೆಗಳಿವೆ. ಈ ಪೈಕಿ ಮೂರನೇ ಮಹಡಿಯಲ್ಲಿರುವ ಮಳಿಗೆಯಲ್ಲಿ ಭಾನುವಾರ ಮಧ್ಯಾಹ್ನ ಬೆಂಕಿ ಕಾಣಿಸಿಕೊಂಡಿತ್ತು. ಕೆಲ ನಿಮಿಷಗಳಲ್ಲಿ ಬೆಂಕಿ ಕೆನ್ನಾಲಿಗೆ ಇಡೀ ಮಹಡಿಯನ್ನು ಆವರಿಸಿತ್ತು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

'ಎಸ್.ಪಿ. ರಸ್ತೆಯಲ್ಲಿ ಇಕ್ಕಟ್ಟಿನ ಜಾಗದಲ್ಲಿ ಅಂಗಡಿಗಳಿವೆ. ಅಗ್ನಿ ಸುರಕ್ಷತಾಕ್ರಮಗಳನ್ನು ಯಾರೂ ಅಳವಡಿಸಿಕೊಂಡಿಲ್ಲ. ಹೀಗಾಗಿ, ಅಕ್ಕ-ಪಕ್ಕದ ಮಳಿಗೆಗಳಿಗೂ ಬೆಂಕಿ ಹೊತ್ತಿಕೊಳ್ಳುವ ಭೀತಿ ಇತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿ ದ್ದಾರೆ. ಅವಘಡದಿಂದಾಗಿ ಮೊಬೈಲ್ ಬಿಡಿಭಾಗಗಳು ಹಾಗೂ ಇತರೆ ವಸ್ತುಗಳು ಸುಟ್ಟಿವೆ' ಎಂದೂ ತಿಳಿಸಿದರು.

ಅಗ್ನಿಶಾಮಕ ದಳದ ಸಿಬ್ಬಂದಿ, 'ಬೆಂಕಿ ಹೊತ್ತಿಕೊಳ್ಳಲು ಕಾರಣ ಗೊತ್ತಾಗಿಲ್ಲ. ಮಾಲೀಕರಿಂದ ಹೇಳಿಕೆ ಪಡೆಯಬೇಕಿದೆ' ಎಂದರು.

ಹೈಕೋರ್ಟ್ ಸೂಚನೆ: ಓಲಾ, ಉಬರ್ ದರ ಇಳಿಕೆ

ಬೆಂಗಳೂರು: ನ್ಯಾಯಯುತ ದರ ನಿಗದಿಪಡಿಸುವಂತೆ ಹೈಕೋರ್ಟ್ ಸೂಚನೆ ನೀಡಿದ್ದ ಬೆನ್ನಲ್ಲೇ, ಮೊಬೈಲ್ ಆ್ಯಪ್ ಆಧರಿತ ಆಟೊ ರಿಕ್ಷಾ ಪ್ರಯಾಣ ದರವನ್ನು ಓಲಾ ಹಾಗೂ ಉಬರ್ ಕಂಪನಿಗಳು ಇಳಿಕೆ ಮಾಡಿವೆ.

ಸಾರಿಗೆ ಇಲಾಖೆ ನಿಯಮಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿದ್ದ ಕಂಪನಿಗಳು, ಸಾರ್ವಜನಿಕರಿಂದ ಹೆಚ್ಚಿನ ಪ್ರಯಾಣ ದರ ವಸೂಲಿ ಮಾಡುತ್ತಿದ್ದ ಬಗ್ಗೆ ದೂರುಗಳು ಬಂದಿದ್ದವು. ಎರಡೂ ಕಂಪನಿಗಳ ಕಾರ್ಯಾಚರಣೆ ಸ್ಥಗಿತಗೊಳಿಸುವಂತೆ ಸಾರಿಗೆ ಇಲಾಖೆ ಅಧಿಕಾರಿಗಳು ನೋಟಿಸ್ ನೀಡಿದ್ದರು. ಇದನ್ನು ಪ್ರಶ್ನಿಸಿ ಕಂಪನಿಗಳು ಹೈಕೋರ್ಟ್ ಮೆಟ್ಟಿಲೇರಿವೆ. ಅರ್ಜಿ ವಿಚಾರಣೆ ನಡೆಸಿ ವಾದ–ಪ್ರತಿವಾದ ಆಲಿಸಿದ್ದ ಹೈಕೋರ್ಟ್, ನ್ಯಾಯಯುತ ದರ ನಿಗದಿ ಮಾಡುವಂತೆ ಓಲಾ ಹಾಗೂ ಉಬರ್ ಕಂಪನಿಗಳಿಗೆ 15 ದಿನಗಳ ಕಾಲಾವಕಾಶ ನೀಡಿತ್ತು. ಅದಕ್ಕೂ ಮುನ್ನವೇ ಎಚ್ಚೆತ್ತ ಕಂಪನಿಗಳು, ಪ್ರಯಾಣ ದರ ಇಳಿಕೆ ಮಾಡಿವೆ.

'1.80 ಕಿ.ಮೀ ದೂರಕ್ಕೆ ₹ 35 ದರ ನಿಗದಿ ಮಾಡಲಾಗಿದೆ. ನಂತರ, ಪ್ರತಿ ಕಿ.ಮೀ.ಗೆ 15 ನಿಗದಿಪಡಿಸಲಾಗಿದೆ. ಇಷ್ಟಾದರೂ ಓಲಾ ಹಾಗೂ ಉಬರ್ ಕಂಪನಿಗಳು ಹೆಚ್ಚಿನ ದರ ವಸೂಲಿ ಮಾಡುತ್ತಿದ್ದವು. ಹೈಕೋರ್ಟ್ ಸೂಚನೆ ನೀಡುತ್ತಿದ್ದಂತೆ ಕಂಪನಿಗಳು ದರ ಇಳಿಕೆ ಮಾಡಿವೆ' ಎಂದು ಗ್ರಾಹಕ ಲೋಕೇಶ್ ತಿಳಿಸಿದರು.

'ಈ ಹಿಂದೆ ಪ್ರತಿ ಕಿ.ಮೀ.ಗೆ ₹ 50ರಿಂದ ₹100ವಸೂಲಿ ಮಾಡಲಾಗುತ್ತಿತ್ತು. ಇದೀಗ ದರ ಇಳಿಕೆ ಮಾಡಿರುವುದರಿಂದ, ಸರ್ಕಾರ ನಿಗದಿಪಡಿಸಿರುವ ದರವೇ ಆ್ಯಪ್‌ಗಳಲ್ಲಿ ತೋರಿಸುತ್ತಿವೆ. ಕೆಲ ಗ್ರಾಹಕರಿಗೆ ರಿಯಾಯಿತಿ ಸಹ ನೀಡಲಾಗುತ್ತಿದೆ' ಎಂದೂ ಹೇಳಿದರು.

ಸಾಲ ಪಡೆದು ನಾಪತ್ತೆ: ಕಾನ್‌ಸ್ಟೆಬಲ್ ವಿರುದ್ಧ ಪ್ರಕರಣ ದಾಖಲು

ಬೆಂಗಳೂರು: 'ನಗರ ಸಶಸ್ತ್ರ ಮೀಸಲು ಪಡೆಯಲ್ಲಿ (ಸಿಎಆರ್) ಸಹೋದ್ಯೋಗಿಯಾಗಿದ್ದ ಕಾನ್‌ಸ್ಟೆಬಲ್, ನನ್ನಿಂದ ₹ 8.30 ಲಕ್ಷ ಸಾಲ ಪಡೆದಿದ್ದು, ವಾಪಸು ನೀಡದೇ ನಾಪತ್ತೆಯಾಗಿದ್ದಾರೆ' ಎಂದು ಮಾಜಿ ಮಹಿಳಾ ಕಾನ್‌ಸ್ಟೆಬಲ್‌ವೊಬ್ಬರು ವಿಧಾನಸೌಧ ಠಾಣೆಗೆ ದೂರು ನೀಡಿದ್ದಾರೆ.

'ದೂರುದಾರ ಮಹಿಳಾ ಕಾನ್‌ಸ್ಟೆಬಲ್ ಹಾಗೂ ಆರೋಪಿತ ಕಾನ್‌ಸ್ಟೆಬಲ್, 2021ರ ಆಗಸ್ಟ್‌ನಲ್ಲಿ ಒಂದೇ ಕಡೇ ಕೆಲಸ ಮಾಡುತ್ತಿದ್ದರು. ತಮ್ಮ ತಾಯಿಗೆ ಹುಷಾರಿಲ್ಲವೆಂದು ಹೇಳಿದ್ದ ಕಾನ್‌ಸ್ಟೆಬಲ್, ₹ 13 ಲಕ್ಷ ಸಾಲ ಪಡೆದುಕೊಂಡಿದ್ದರು. ಇದಾದ ನಂತರ, ವೈಯಕ್ತಿಕ ಕಾರಣ ನೀಡಿ ಮಹಿಳಾ ಕಾನ್‌ಸ್ಟೆಬಲ್ ಸ್ವಯಂ ನಿವೃತ್ತಿ ತೆಗೆದುಕೊಂಡಿದ್ದರು.'

'₹ 4.70 ಲಕ್ಷ ವಾಪಸು ನೀಡಿದ್ದ ಕಾನ್‌ಸ್ಟೆಬಲ್, ಬಾಕಿ ₹ 8.30 ಲಕ್ಷ ಕೊಟ್ಟಿರಲಿಲ್ಲ. ಈ ಬಗ್ಗೆ ಮಹಿಳಾ ಕಾನ್‌ಸ್ಟೆಬಲ್ ಅವರು ಬಾರಿ ವಿಚಾರಿಸಿದ್ದರು. ಇದರ ನಡುವೆಯೇ ಕಾನ್‌ಸ್ಟೆಬಲ್, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ. ಕರ್ತವ್ಯಕ್ಕೂ ಗೈರಾಗಿದ್ದಾರೆ. ಅವರನ್ನು ಹುಡುಕಿ, ಹಣ ವಾಪಸು ಕೊಡಿಸುವಂತೆ ದೂರಿನಲ್ಲಿ ಕೋರಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

100 ರೋಗಿಗಳಿಗೆ ಅಂಗಾಂಗ ಕಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಅಂಗಾಂಗ ಕಸಿ ಯೋಜನೆಯಡಿ ಈವರೆಗೆ ಕಸಿ ಮಾಡಿಸಿಕೊಂಡವರ ಸಂಖ್ಯೆ ನೂರಕ್ಕೆ ತಲುಪಿದೆ.

ರಾಜ್ಯ ಸರ್ಕಾರವು ಬಿಪಿಎಲ್ ಕುಟುಂಬಗಳ ರೋಗಿಗಳಿಗಾಗಿ ಈ ಯೋಜನೆಯನ್ನು 2018ರಲ್ಲಿ ಆರಂಭಿಸಿತ್ತು. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಈ ಯೋಜನೆಯನ್ನು ನಿರ್ವಹಣೆ ಮಾಡುತ್ತಿದೆ. ಯೋಜನೆಯಡಿ ಯಕೃತ್ತು, ಮೂತ್ರಪಿಂಡ ಹಾಗೂ ಹೃದಯ ಸಮಸ್ಯೆ ಇರುವವರಿಗೆ ಕಸಿ ನಡೆಸಲಾಗುತ್ತದೆ. ಚಿಕಿತ್ಸಾ ವೆಚ್ಚವನ್ನು ಟ್ರಸ್ಟ್ ಭರಿಸುತ್ತಿದೆ.

ಮೂತ್ರಪಿಂಡ ಸಮಸ್ಯೆ ಎದುರಿಸುತ್ತಿದ್ದ 77 ರೋಗಿಗಳು, ಹೃದಯ ಸಮಸ್ಯೆ ಎದುರಿಸುತ್ತಿದ್ದ 15 ರೋಗಿಗಳು ಹಾಗೂ ಯಕೃತ್ತು ಸಮಸ್ಯೆ ಎದುರಿಸುತ್ತಿದ್ದ 8 ರೋಗಿಗಳು ಈ ಯೋಜನೆಯಡಿ ಕಸಿ ಮಾಡಿಸಿಕೊಂಡಿದ್ದಾರೆ. ಕಸಿ ಚಿಕಿತ್ಸೆಗೆ ಒಳಗಾದವರಿಗೆ ಇಮ್ಯುನೊಸಪ್ರೆಶನ್ ಔಷಧಗಳಿಗಾಗಿ ಪ್ರತಿವರ್ಷ ₹ 1 ಲಕ್ಷ ನೀಡಲಾಗುತ್ತದೆ.

'ಬಡವರಿಗೆ ಗಗನ ಕುಸುಮವಾಗಿದ್ದ ಅಂಗಾಂಗ ಕಸಿ ಚಿಕಿತ್ಸೆ ಈಗ ಸುಲಭವಾಗಿ ದೊರೆಯುತ್ತಿದೆ. ಇದಕ್ಕೆ ಕಾರಣೀಭೂತರಾದ ಅಂಗಾಂಗ ದಾನಿಗಳು ಹಾಗೂ 'ಜೀವಸಾರ್ಥಕತೆ' ತಂಡಕ್ಕೆ ಧನ್ಯವಾದಗಳು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

'ಭೂಮಿಯ ಋಣ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ವಿಮರ್ಶಕಿ ಎಂ.ಎಸ್. ಆಶಾದೇವಿ ಅಭಿಮತ

'ಹೆಣ್ಣು ಅಬಲೆ ಎನ್ನುವುದೇ ಹುನ್ನಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಣ್ಣು ಮಕ್ಕಳು ಸಬಲರು ಎಂದು ವ್ಯವಸ್ಥೆ ಮತ್ತು ಪ್ರಭುತ್ವ ಒಪ್ಪಿಕೊಳ್ಳುವ ಹಾಗೂ ಅದಕ್ಕೆ ಅಧಿಕೃತತೆಯನ್ನು ನೀಡುವ ಪ್ರಕ್ರಿಯೆಯೇ ಮಹಿಳಾ ಸಬಲೀಕರಣ' ಎಂದು ವಿಮರ್ಶಕಿ ಎಂ.ಎಸ್.ಆಶಾದೇವಿ ಅಭಿಪ್ರಾಯ ಪಟ್ಟರು.

'ಸಾಮಾಜಿಕ ನ್ಯಾಯಕ್ಕಾಗಿ ವಕೀಲರು' ಕರ್ನಾಟಕ ಸಂಘಟನೆ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಶೋಭಾ ಗುನ್ನಾಪೂರ ಅವರ 'ಭೂಮಿಯ ಋಣ' ಕೃತಿ ಬಿಡುಗಡೆ ಮಾಡಿ, ಮಾತನಾಡಿದರು.

'ಮಹಿಳಾ ಸಬಲೀಕರಣದ ಬಗ್ಗೆ ನಿರಂತರ ಅಪವ್ಯಾಖ್ಯಾನ ಮಾಡಲಾಗುತ್ತಿದೆ. ಅಬಲೆಯರು ಎಂದು ತಿಳಿಯುವುದರಲ್ಲಿಯೇ ಹುನ್ನಾರವಿದೆ. ಹೆಣ್ಣನ್ನು ಹಲವು ಪಾತ್ರದಲ್ಲಿ ಹಂಚಿ, ವಯಸ್ಸು ವಿಂಗಡಿಸಲಾಗುತ್ತದೆ. ನಾನು ಯಾರು ಎಂಬ ಪ್ರಶ್ನೆ ಆಕೆಗೆ ಕಾಡುತ್ತವೆ. ಅನೇಕ ಒತ್ತಡಗಳನ್ನೂ ಹೇರಲಾಗುತ್ತಿದೆ. ಅಬಲೆಯರೆಂದು ವ್ಯಾಖ್ಯಾನದ ಬದಲು, ಹೆಣ್ಣಿನ ಸಬಲತೆಯನ್ನು ವ್ಯವಸ್ಥೆ, ಪ್ರಭುತ್ವ ಒಪ್ಪಿಕೊಳ್ಳಬೇಕು' ಎಂದು ಹೇಳಿದರು.

'9ನೇ ತರಗತಿವರೆಗೆ ಕಲಿತಿರುವ ಶೋಭಾ ಅವರು, ಓದಿನ ಪ್ರೀತಿಯಿಂದ ತಮ್ಮ ಊರಿನ ಗ್ರಂಥಾಲಯದ ಎಲ್ಲ ಪುಸ್ತಕಗಳನ್ನು ಓದಿದರು. ಅವರ ಅಷ್ಟೂ ಕಥೆಗಳು ಸಾಂಸ್ಕೃತಿಕ ಸ್ತ್ರೀವಾದದ ಮೇಲೆ ಕೇಂದ್ರೀಕೃತವಾಗಿದೆ. ಅವರ ವ್ಯಕ್ತಿತ್ವ ಹಾಗೂ ಅವರ ಕೃತಿಗೆ ಇರುವ ಸಂಬಂಧ, ಇಂದಿನ ಮಹಿಳಾ ಸಂಕಥನವನ್ನು ಬಲಪಡಿಸಬೇಕಾದ ಆಧಾರ ನೀಡುತ್ತಿದೆ' ಎಂದರು.

ವಿಮರ್ಶಕ ನಟರಾಜ್ ಹುಳಿಯಾರ್, 'ಹಳ್ಳಿಯ ಜೀವನದ ಅನುಭಗಳನ್ನು ಶೋಭಾ ಅವರು ತಮ್ಮ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಸ್ತ್ರೀಯರ ಸಹನೆಯನ್ನು ಕಥೆಗಳು ಅನಾವರಣ ಮಾಡುತ್ತವೆ. ಇಲ್ಲಿನ ಪಾತ್ರಗಳು ನ್ಯಾಯಕ್ಕಾಗಿ ಹವಣಿಸುತ್ತಿವೆ' ಎಂದು ತಿಳಿಸಿದರು.

ಲೇಖಕಿ ಶೋಭಾ ಗುನ್ನಾಪೂರ, 'ನನ್ನ ಜೀವನದ ಸೂಕ್ಷ್ಮ ವಿಚಾರಗಳು ಅನೇಕ ಪ್ರಶ್ನೆಗಳನ್ನು ಮೂಡಿಸಿದ್ದವು. ಅಂತಹ ವಿಚಾರಗಳನ್ನು ಅಕ್ಷರದ ರೂಪದಲ್ಲಿ ತರುವ ಪ್ರಯತ್ನ ಮಾಡಿದ್ದೇನೆ' ಎಂದು ಹೇಳಿದರು.

ನಟರಾಜ್ ಹುಳಿಯಾರ್ ಅವರು (ಎಡದಿಂದ ನಾಲ್ಕನೆಯವರು) ಶೋಭಾ ಗುನ್ನಾಪೂರ (ಎಡದಿಂದ ಎರಡನೇಯವರು) ಅವರ 'ಭೂಮಿಯ ಋಣ' ಕಥಾಸಂಕಲನ ಲೋಕಾರ್ಪಣೆ ಮಾಡಿದರು. (ಎಡದಿಂದ) ಚಿತ್ರ ನಿರ್ದೇಶಕ ಬಿ.ಎಂ ಗಿರಿರಾಜ್, ವಿಮರ್ಶಕಿ ಎಂ.ಎಸ್. ಆಶಾದೇವಿ ಮತ್ತು ವೈಷ್ಣವಿ ಪ್ರಕಾಶನದ ಪ್ರಕಾಶಕ ಮುದಿರಾಜ್ ಬಾಣದ್ ಇದ್ದರು –ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

- **ಪುಸ್ತಕ:** 'ಭೂಮಿಯ ಋಣ'
- **ಲೇಖಕಿ:** ಶೋಭಾ ಗುನ್ನಾಪುರ
- **ಬೆಲೆ:** ₹100
- **ಪುಟಗಳು:** 120
- **ಪ್ರಕಾಶನ:** ವೈಷ್ಣವಿ ಪ್ರಕಾಶನ



ಮಾನ್ಯತಾ ಟೆಕ್ ಪಾರ್ಕ್ ಬಳಿಯ ಆಹಾರ ಮೇಳ ಸ್ಥಳ ಭಾನುವಾರ ಕೆಸರುಮಯವಾಗಿತ್ತು (ಎಡಚಿತ್ರ). ಮಳೆಯಲ್ಲಿಯೇ ಕಂಠೀರವ ಕ್ರೀಡಾಂಗಣ ರಸ್ತೆಯಲ್ಲಿ ನೀರು, ತಂಪು ಪಾನೀಯ ಬಾಟಲಿಗಳನ್ನು ಸಿಬ್ಬಂದಿ ಸಾಗಿಸಿದರು (ಮಧ್ಯಚಿತ್ರ). ರಾಜಾಜಿನಗರ ಹಳೆ ಪೊಲೀಸ್ ಠಾಣೆ ವೃತ್ತದಲ್ಲಿ ಧರೆಗೆ ಉರುಳಿದ ಬೃಹತ್ ಮರ –ಪ್ರಜಾವಾಣಿ ಚಿತ್ರಗಳು

ರಸ್ತೆಗಳಲ್ಲೇ ನಿಂತ ನೀರು • ಜನ, ವಾಹನ ಸಂಚಾರ ವ್ಯತ್ಯಯ • ಪರಿಹಾರ ಕ್ರಮಕ್ಕೆ ತಂಡಗಳ ರಚಿಸಲು ಎಎಪಿ ಆಗ್ರಹ

ಮುಂದುವರಿದ ಮಳೆ: ಗುಡುಗು– ಸಿಡಿಲಿನ ಅಬ್ಬರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬಿಡುವು ಕೊಡುತ್ತಲೇ ಮಳೆ ಸುರಿಯುತ್ತಿದ್ದು, ಭಾನುವಾರವೂ ಹಲವು ಪ್ರದೇಶಗಳಲ್ಲಿ ಧಾರಾಕಾರವಾಗಿ ಮಳೆ ಆಯಿತು.

ಶನಿವಾರವೂ ಬಹುತೇಕ ಪ್ರದೇಶಗಳಲ್ಲಿ ಜೋರು ಮಳೆ ಸುರಿದಿತ್ತು. ಭಾನುವಾರ ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಬೆಳಿಗ್ಗೆ 8 ಗಂಟೆಯಿಂದಲೇ ಹಲವು ಪ್ರದೇಶಗಳಲ್ಲಿ ತುಂತುರು ಮಳೆ ಸುರಿಯಲಾರಂಭಿಸಿತ್ತು. ರಾತ್ರಿಯವರೆಗೂ ಬಿಡುವು ಕೊಡುತ್ತಲೇ ಜೋರು ಮಳೆ ಆಯಿತು. ಗುಡುಗು– ಸಿಡಿಲಿನ ಅಬ್ಬರವೂ ಇತ್ತು.

ಭಾನುವಾರ ರಜೆ ದಿನವಾಗಿದ್ದರಿಂದ, ಬಹುತೇಕರು ಮಾರುಕಟ್ಟೆ ಹಾಗೂ ಮಾಲ್‌ಗಳಿಗೆ ಸುತ್ತಾಡಿದರು. ಇವರೆಲ್ಲರೂ ಮಳೆಯಿಂದಾಗಿ ತೊಂದರೆ ಅನುಭವಿಸಿದರು.

ಮಡಿವಾಳ, ಕೋರಮಂಗಲ, ಆಡುಗೋಡಿ, ಅಶೋಕನಗರ, ಹಲಸೂರು, ದುಮ್ಮಲೂರು, ಎಚ್‌ಎಎಲ್, ಬೈಯಪ್ಪನಹಳ್ಳಿ, ಬೆಳ್ಳಂದೂರು, ಮಾರತ್ತಹಳ್ಳಿ, ಶಿವಾಜಿನಗರ, ಕೆ.ಜಿ.ಹಳ್ಳಿ, ಪುಲಿಕೇಶಿನಗರ, ವಸಂತನಗರ, ಎಂ.ಜಿ. ರಸ್ತೆ, ಸಂಪಂಗಿರಾಮನಗರ, ಚಿಕ್ಕಪೇಟೆ, ಉಪ್ಪಾರಪೇಟೆ, ಗಾಂಧಿನಗರ, ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಆಯಿತು.

ಬಿ.ವಿ.ಕೆ. ಅಯ್ಯಂಗಾರ್ ರಸ್ತೆ, ಅವೆನ್ಯೂ ರಸ್ತೆ ಹಾಗೂ ಅಕ್ಕ–ಪಕ್ಕದ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ಈ ಭಾಗದಲ್ಲಿ ಕಾಮಗಾರಿ ನಡೆಯುತ್ತಿದ್ದು, ಅದಕ್ಕಾಗಿ ರಸ್ತೆ ಅಗೆಯಲಾಗಿದೆ. ಅಗೆದ ಜಾಗದಲ್ಲಿ ನೀರು ನಿಂತುಕೊಂಡಿತ್ತು. ಜೊತೆಗೆ, ರಸ್ತೆಯಲ್ಲಿ ಹರಿಡಿಕೊಂಡಿದ್ದ ಮಣ್ಣು ನೀರಿನೊಂದಿಗೆ ಸೇರಿ ಕೆಸರು ಹೆಚ್ಚಾಗಿತ್ತು.

ರಾಜರಾಜೇಶ್ವರಿ ನಗರ, ಕೆಂಗೇರಿ, ನಾಯಂಡನಹಳ್ಳಿ, ನಾಗರಬಾವಿ, ಚಂದ್ರಾಲೇಔಟ್, ಅತ್ತಿಗುಪ್ಪೆ, ಹಂಪಿನಗರ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಶೇಷಾದ್ರಿಪುರ, ಆರ್.ಟಿ. ನಗರ, ಹೆಬ್ಬಾಳ, ಶಾಂತಿನಗರ, ಲಾಲ್‌ಬಾಗ್, ವಿಲ್ಸನ್ ಗಾರ್ಡನ್ ಸೇರಿದಂತೆ ಹಲವು ಪ್ರದೇಶಗಳಲ್ಲೂ ಮಳೆ ಸುರಿಯಿತು.

'ಎಲ್ಲ ಪ್ರದೇಶಗಳಲ್ಲೂ ಮಳೆ ಆಗುತ್ತಿದೆ. ಕೆಲವೆಡೆ ಗಾಳಿ ಜೋರಾಗಿ ಬೀಸಿದ್ದರಿಂದ, ಮರದ ಕೊಂಬೆಗಳು ಬಿದ್ದಿರುವ ಬಗ್ಗೆ ದೂರುಗಳು ಬಂದಿವೆ. ಕೆಲ ರಸ್ತೆಗಳ ಮೇಲೆಯೇ ನೀರು ಹರಿದಿದ್ದು, ಅಲ್ಲಲ್ಲ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ಉಳಿದಂತೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಮುಖ್ಯಾಂಶಗಳು
- ಕಾಮಗಾರಿ ಸ್ಥಳದಲ್ಲಿ ನಿಂತಿರುವ ನೀರು
- ಜೋರು ಗಾಳಿಗೆ ಕೆಲವೆಡೆ ಬಿದ್ದಿರುವ ಮರದ ಕೊಂಬೆಗಳು

ನಗರದ ಅರಮನೆ ರಸ್ತೆಯಲ್ಲಿರುವ ಸಿಬಿಐ ಕಚೇರಿಯ ಗೋಡೆ ಮಳೆಯಿಂದಾಗಿ ನೆಲಕ್ಕೆ ಬಿದ್ದಿರುವ ದೃಶ್ಯ

ಎಎಪಿಯಿಂದ ಮುಖ್ಯಮಂತ್ರಿಗೆ ಪತ್ರ

ಕೆಲವು ದಿನಗಳ ಕಾಲ ದಕ್ಷಿಣ ಭಾರತದ ಹಲವೆಡೆ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಸೂಚಿಸಿದ್ದು, ಪರಿಹಾರ ಕ್ರಮಕ್ಕೆ ತಂಡಗಳ ರಚಿಸಬೇಕು ಎಂದು ಕೋರಿ ಆಮ್ ಆದ್ಮಿ ಪಕ್ಷದ ಅಧ್ಯಕ್ಷ ಪೃಥ್ವಿರೆಡ್ಡಿ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಹವಾಮಾನ ವೈಪರೀತ್ಯದ ಅಗತ್ಯ ಸಂದೇಶ, ಸೂಚನೆ ನೀಡಬೇಕು. ನೆರೆ ಹಾನಿಗೆ ತುತ್ತಾಗುವ ಸ್ಥಳಗಳ ವಿಚಾರ ಮತ್ತು ಸಮಗ್ರ ಮಾಹಿತಿ ಕಲೆ ಹಾಕಲು ಜಿಲ್ಲಾಡಳಿತಕ್ಕೆ ಸೂಚಿಸಿ, ಹಾನಿ ತಡೆಗೆ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಹಾನಿಗೀಡಾದ ಸ್ಥಳಗಳಲ್ಲಿ ಅಲ್ಲಿನ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು ಜವಾಬ್ದಾರಿ ಸರಿಯಾಗಿ ನಿರ್ವಹಿಸುತ್ತಿಲ್ಲ. ಅಲ್ಲಿನ ಸಾಮಾಜಿಕ ಕಳಕಳಿ ಹೊಂದಿರುವ ಸಂಘ–ಸಂಸ್ಥೆಗಳು, ಸ್ವಸಹಾಯ ಸಂಘಗಳು, ರೈತಪರ ಸಂಘಗಳು ಮತ್ತು ನಾಗರಿಕ ಸಂಘ ಸೇರಿಸಿಕೊಂಡು ಹಾನಿಗೀಡಾದ ಸ್ಥಳಗಳಲ್ಲಿ ಪರಿಹಾರ ಕಾರ್ಯ ನಿರಂತರವಾಗಿ ನಡೆಸಬೇಕು. ಕೇಂದ್ರ ಸರ್ಕಾರದ ಪರಿಹಾರ ಧನವನ್ನು ಕೂಡಲೇ ಪಡೆದು, ಹಾನಿಯಾದ ಸಂದರ್ಭದಲ್ಲಿ ತಕ್ಷಣಕ್ಕೆ ಹಣ ನೀಡುವ ಕ್ರಮ ವಹಿಸಬೇಕು ಎಂದು ಪೃಥ್ವಿರೆಡ್ಡಿ ಅವರು ಕೋರಿದ್ದಾರೆ.

ಮಳೆಯಲ್ಲೇ ಚಾಲನೆ– ಬೈಕ್ ಸವಾರ ಸಾವು

ಹೊರವರ್ತುಲ ರಸ್ತೆಯ ಲಗ್ಗೆರೆ ಬಳಿ ಶನಿವಾರ ತಡರಾತ್ರಿ ಸಂಭವಿಸಿದ ಅಪಘಾತದಲ್ಲಿ ಗುರುರಾಜ್ ಗದಗ (29) ಎಂಬುವರು ಮೃತಪಟ್ಟಿದ್ದಾರೆ.

'ಹುಬ್ಬಳ್ಳಿಯ ಗುರುರಾಜ್, ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಬಸವೇಶ್ವರನಗರದ ಹೌಸಿಂಗ್ ಬೋರ್ಡ್ ಬಳಿ ವಾಸವಿದ್ದರು' ಎಂದು ರಾಜಾಜಿನಗರ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಗುರುರಾಜ್ ದ್ವಿಚಕ್ರ ವಾಹನದಲ್ಲಿ ತಡರಾತ್ರಿ 12.30ರ ಸುಮಾರಿಗೆ ಮನೆಯತ್ತ ಹೊರಟಿದ್ದರು. ಇದೇ ಸಂದರ್ಭದಲ್ಲಿ ಜೋರು ಮಳೆ ಸುರಿಯುತ್ತಿತ್ತು. ಲಗ್ಗೆರೆ ಬಳಿ ಅತೀ ವೇಗವಾಗಿ ವಾಹನ ಚಲಾಯಿಸಿದ್ದರೆಂದು ಗೊತ್ತಾಗಿದೆ. ನಿಯಂತ್ರಣ ತಪ್ಪಿದ್ದ ವಾಹನವು ಪಾದಚಾರಿ ಮಾರ್ಗಕ್ಕೆ ನುಗ್ಗಿ, ರಸ್ತೆ ಪಕ್ಕದ ಮರಕ್ಕೆ ಡಿಕ್ಕಿ ಹೊಡೆದಿತ್ತು. ರಸ್ತೆಗೆ ಬಿದ್ದ ಗುರುರಾಜ್ ತಲೆಗೆ ಪೆಟ್ಟಾಗಿತ್ತು. ತೀವ್ರ ಗಾಯಗೊಂಡು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಪೊಲೀಸರು ತಿಳಿಸಿದರು.

ಚರ್ಮಗಂಟು ರೋಗ: ರಾಸುಗಳಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ 892 ರಾಸುಗಳಲ್ಲಿ ಚರ್ಮಗಂಟು ರೋಗ ಕಾಣಿಸಿಕೊಂಡಿದೆ. ಸೂಕ್ತ ಚಿಕಿತ್ಸೆ ಪರಿಣಾಮವಾಗಿ 647 ರಾಸುಗಳು ಗುಣಮುಖ ಹೊಂದಿವೆ ಎಂದು ವೈದ್ಯರು ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ 42,402 ರಾಸುಗಳಿಗೆ ಮುಂಜಾಗ್ರತೆಯಾಗಿ ಲಸಿಕೆ ಹಾಕಲಾಗಿದೆ. ಚರ್ಮಗಂಟು ರೋಗ ಕಾಣಿಸಿಕೊಂಡ 5 ಕಿ.ಮೀ ವ್ಯಾಪ್ತಿಯಲ್ಲಿ ಜಾನುವಾರುಗಳಿಗೆ ಲಸಿಕೆ ಹಾಕಲು ಪಶುಪಾಲನಾ ಇಲಾಖೆ ಮತ್ತು ಬೆಂಗಳೂರು ಹಾಲು ಒಕ್ಕೂಟದಿಂದ ಕ್ರಮವಹಿಸಲಾಗಿದೆ.

ಈ ರೋಗದಿಂದ ಮರಣ ಹೊಂದಿದ ಹಸುವಿಗೆ ₹ 20 ಸಾವಿರ, ಎತ್ತು ಅಥವಾ ಹೋರಿಗೆ ₹30 ಸಾವಿರ ಮತ್ತು ಕರುಗಳಿಗೆ ₹5 ಸಾವಿರದಂತೆ ಅವುಗಳ ಮಾಲೀಕರಿಗೆ ಪರಿಹಾರ ನೀಡಲಾಗುವುದು ಎಂದು ಪಶುಪಾಲನಾ ಇಲಾಖೆ ಉಪ ನಿರ್ದೇಶಕ ಡಾ.ಗೌ.ಮು.ನಾಗರಾಜು ತಿಳಿಸಿದರು.

ಭೀಮಾನದಿಯಲ್ಲಿ ಕೊಚ್ಚಿಹೋಗಿದ್ದ ವ್ಯಕ್ತಿ ಶವ ಪತ್ತೆ

ಕಲಬುರಗಿ: ಭೀಮಾ ನದಿಯಲ್ಲಿ ಕೊಚ್ಚಿ ಹೋಗಿದ್ದ ಬೆಂಗಳೂರಿನ ಜೆ.ಪಿ. ನಗರದ ಸುರೇಶ್ ಚೆನ್ನಿಂಗಯ್ಯ (40) ಅವರ ಮೃತದೇಹ ಶನಿವಾರ ಸಂಜೆ ದೇವಲಗಾಣಗಾಪುರದ ಭಾಗಿರತಿ ಸ್ನಾನ ತೀರ್ಥದ ಹತ್ತಿರ ಪತ್ತೆಯಾಗಿದೆ.

ಸುರೇಶ್ ಅವರು ಸೋಮವಾರ (ಅ.10) ಬೆಳಿಗ್ಗೆ ತಾಲ್ಲೂಕಿನ ಘತ್ತರಗಿ ಹತ್ತಿರ ಸ್ನಾನ ಮಾಡಲು ಹೋಗಿ ಕಾಲುಜಾರಿ ನದಿಯಲ್ಲಿ ಕೊಚ್ಚಿ ಹೋಗಿದ್ದರು. 5 ದಿನಗಳ ನಂತರ ಅವರು ಶವವಾಗಿ ಪತ್ತೆಯಾಗಿದ್ದಾರೆ.

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ.160/1,1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

CONNECT

ಪಂಚೆಗಳು
RAMRAJ
UATHAYAM
MINISTER WHITE®
DHOTIES, TOWELS & other Items
PRAKASH Corporation
Ph : 080 42156845
186, Prem Plaza, Chickpet
Bangalore - 560 053

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

REQUIRED DTP Designers with CorelDraw knowledge for an Advertising Agency walk-in-Interview on October 17 & 18th between 11:00 am- 02:00 pm, Adverto Advertising Pvt Ltd., No. 97, 2nd Floor, RV Road, Basavanagudi, Near Lalbagh Metro Stn, Ph: 26575020, Email: advertoalert@gmail.com

Architects

STRUCTURAL DRAUGHTSMAN minimum 2-Years experience. Contact- Mr.Suresh Kumar .P- 9844018163, info@svconsultants.org/ suresh.svcon@gmail.com

Multiple Vacancy

IMMEDIATE APPOINTMENT HRD,Administration, Accounts,Manager, Supervisor, Software,Hardware,Electronics,Mechanical,Electrical Engineers 7676760299/7676760399

General

PROSPECTIVE CAREER, Retired, VRS, Professionals, Senior Citizens, Business, Housewives. Substantial Income. International Recognition. 97400-90431/ 8884445665

Part-Time Jobs

GOVERNMENT RECOGNISED Data Entry Typing Work From Home, Daily Payment, No Target, No Accuracy, For details only call: 9742344447

DH DECCAN HERALD ಪ್ರಜಾವಾಣಿ
NAME CHANGE
BOOK YOUR NAME CHANGE AD IN DECCAN HERALD ALL KARNATAKA + PRAJAVANI BENGALURU ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

BUSINESS

Business Offers

Finance

NRI'S INVESTMENT And Finance 600Cr Available From Investor (security as property or viable huge projects) genuine parties Contact-7411265189

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

PUBLIC NOTICE

PUBLIC NOTICE

This public notice is issued for, on behalf of **Sri. H. Venugopal Reddy** S/o Late Hanuma Reddy, aged about 68 years, R/at Yarandahalli Village, Jigani Post, Anekal Taluk, Bangalore Urban District and his sisters namely Amaravathi, Kalavathi and Nirmala, bring to the notice of the Public at large that any person / persons / firms / company / institutions / Trusts / Societies or the like entering into any king of transaction/s with anyone. Public and my clients are used as a road, there is an interim orders in a pending suit in O.S. No 778/2020 on the file of Senior Civil Judge and JMFC Anekal to the aforesaid described in the schedule hereunder, would be doing so at his/ her. Their or its peril and risk, and that no such transaction or alienation will have any kind of legal effect or binding or the like on my aforementioned client named above.

The warrant and necessity for the caution and publication of this Public Notice are that my client has learnt with anguish and dismay that some disgruntled elements, land grabbers, real estate tycoons, supported by an busy body of politicians and self-styled agents have been spuriously and falsely representing to the public at large that they have right and title to the properties reserved by the government for public road and that they would enter into transaction with potential buyers. Land-developers, Lessors, Mortgagees, Etc., for encumbering the Government road, for their own selfish ends, and for their unjust enrichment at the cost of my client, and of my client named above. The public are therefore notified and warned against any such spurious, clandestine and surreptitious transaction/s being entered into by them, even if so lured to do, by any such disgruntled elements etc.

SCHEDULE PROPERTY

All that piece and parcel of road formed in Sy No. 46 measuring east to west 90 feet and North to south 40 feet the same is covered with site No. 100, formed by the government in Sy No. 46 situated at Yarandahalli Village, Jigani Post, Anekal Taluk, Bangalore Urban District bounded on **East by:** Property belongs to Venugopala Reddy, **West by:** Government road, **North by:** Site No belongs to Lokesh Reddy, **South by:** site No 101.

V. Naga Reddy, Advocate
No. 6/1, 1st Floor, 14th Cross, Cubbonpet, Bengaluru-02.

For Advt. Booking Contact : 9845114560

EDUCATIONAL

Admission

DIRECT FINAL Year Admission: LLB (Can Practice,No Age Limit) BTech/Diploma/MBA/MCA MSc/BCA/BBA/BSc/BCom DPharm/BPharm/BAMS BNYS. Govt Recognised courses. Asha Academy, Bangalore. Ph:9448460103/ 7676477541

PERSONAL

Change of Name

I, SHRUTI CHORGASTI, residing at #3/36, Hale Kanakapur, Ginigera, Koppal, Karnataka- 583228, now camped at Bangalore, have changed my name to SHRUTI MAHESH VALIKAR, vide affidavit dated 15.10.2022 before Notary L. Gopalakrishna, Bangalore. Henceforth I shall be known as SHRUTI MAHESH VALIKAR only.

I, JYOTHI N D/o. M Narayanaswamy residing at No.64, Near Chitrakoota School Road, Thimmaiah Thota, Jnanabharathi Post, Nagadevanahalli, Bangalore-560056 have changed my name to Dr. JANVI RAYALA vide affidavit 14/10/2022 before notary Ravi., Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಕುಂದು ಕೊರತೆ

ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

'ಗುಂಡಿಗಳನ್ನು ಮುಚ್ಚಿ'

ಕಾಮಾಕ್ಷಿಪಾಳ್ಯಕ್ಕೆ ಸಂಪರ್ಕ ಕಲ್ಪಿಸುವ ಮಾಗಡಿ ಮುಖ್ಯರಸ್ತೆಯು ಗುಂಡಿಗಳಿಂದ ಕೂಡಿದೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಗೋಳು ಕೇಳುವವರಿಲ್ಲದಂತಾಗಿದೆ. ಮಳೆ ಬಂದರೆ ಈ ರಸ್ತೆಯಲ್ಲಿ ಸಂಚಾರ ದುಸ್ತರವಾಗುತ್ತದೆ. ಗುಂಡಿ ಯಾವುದು, ರಸ್ತೆ ಯಾವುದು ಎಂಬುದು ಗೊತ್ತಾಗುವುದಿಲ್ಲ. ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ನೀಡಲಾಗಿದೆ. ಆದರೂ, ಇದುವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಕಾಮಾಕ್ಷಿಪಾಳ್ಯಕ್ಕೆ ಸಂಪರ್ಕ ಕಲ್ಪಿಸುವ ಮಾಗಡಿ ಮುಖ್ಯರಸ್ತೆ

ಗೋಪಾಲ್ ಜಿ., ಸ್ಥಳೀಯ ನಿವಾಸಿ

'ರಸ್ತೆ ದುರಸ್ತಿಗೊಳಿಸಿ'

ಬೇಗೂರಿನ ಮುಖ್ಯರಸ್ತೆ ಸಂಪೂರ್ಣ ಹಾಳಾಗಿದೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸವಾರರು ಸಂಚರಿಸುವುದು ಕಷ್ಟವಾಗಿದೆ. ರಸ್ತೆಯ ದೂಳು ಆರೋಗ್ಯವನ್ನು ಹಾಳು ಮಾಡುತ್ತಿದೆ. ರಸ್ತೆ ಬದಿಯ ಮೋರಿಗಳು ಸಂಪೂರ್ಣ ಮುಚ್ಚಿವೆ. ಮಳೆ ಬಂದರಂತೂ ನೀರು ಮನೆಗೆ ನುಗ್ಗುತ್ತದೆ. ಈ ಕುರಿತು ಸ್ಥಳೀಯ ಜನಪ್ರತಿನಿಧಿಗಳಿಗೆ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ.

ಬೇಗೂರು ರಸ್ತೆ

ಸಂತು, ಸ್ಥಳೀಯ ನಿವಾಸಿ

'ಮೇಲ್ಸೇತುವೆಗೆ ದೀಪ ಅಳವಡಿಸಿದ ಅಧಿಕಾರಿಗಳು'

ವರದಿ ಫಲಶ್ರುತಿ

ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಟಿನ್ ಫ್ಯಾಕ್ಟರಿ ಬಸ್ ನಿಲ್ದಾಣದ ಬಳಿ ಇರುವ ಮೇಲುಸೇತುವೆಯಲ್ಲಿ ಅಧಿಕಾರಿಗಳು ವಿದ್ಯುತ್ ದೀಪಗಳನ್ನು ಅಳವಡಿಸಿದ್ದು, ಈಗ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ. 'ಪ್ರಜಾವಾಣಿ'ಯ ಕುಂದು ಕೊರತೆ ವಿಭಾಗದಲ್ಲಿ ಸೆಪ್ಟೆಂಬರ್ 26ರಂದು 'ವಿದ್ಯುತ್ ದೀಪ ಅಳವಡಿಸಿ' ಎನ್ನುವ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು.

'ಬಿನ್ನಿಮಿಲ್ಸ್ ರಸ್ತೆಯಲ್ಲಿ ಗುಂಡಿಗಳು'

ಬಿನ್ನಿಮಿಲ್ಸ್‌ನಿಂದ ಮೈಸೂರುರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಗುಂಡಿಮಯವಾಗಿದೆ. ಪ್ರತಿನಿತ್ಯ ನೂರಾರು ವಾಹನಗಳು ಈ ರಸ್ತೆಯಲ್ಲಿ ಸಂಚರಿಸುತ್ತವೆ. ಇದರಿಂದ ವಾಹನಗಳು ಮತ್ತು ಜನ ಸಂಚಾರಕ್ಕೆ ಸಮಸ್ಯೆಯಾಗಿದೆ. ಈ ರಸ್ತೆಯಲ್ಲಿ ಸರಕು ಸಾಗಣೆ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತಿವೆ. ಗುಂಡಿಗಳು ಬಿದ್ದಿರುವುದರಿಂದ ವಾಹನ ಸಂಚಾರಕ್ಕೆ ಅಡಚಣೆಯಾಗಿದೆ. ರಸ್ತೆ ದುರಸ್ತಿಗೊಳಿಸಲು ಯಾರೊಬ್ಬರು ಗಮನಹರಿಸುತ್ತಿಲ್ಲ.

ಬಿನ್ನಿಮಿಲ್ಸ್‌ನಿಂದ ಮೈಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ

ಕರ್ಣ, ವಾಹನ ಸವಾರ



ಹನುಮಗಿರಿಯಲ್ಲಿ ಕೆಟ್ಟನಿಂತಿರುವ ಬೀದಿ ದೀಪಗಳು

ಹನುಮಗಿರಿ: ಕೆಟ್ಟು ನಿಂತ ಬೀದಿ ದೀಪ

ಇಟ್ಟಮಡು ಮುಖ್ಯರಸ್ತೆಯಿಂದ ಸಪ್ತಗಿರಿ ನಗರ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯಲ್ಲಿನ ಬೀದಿ ದೀಪಗಳು ಇಲ್ಲದೆ ಕತ್ತಲು ಆವರಿಸಿದೆ. ಮಾರ್ಸ್ ಮೌಂಟ್ ಅಪಾರ್ಟ್‌ಮೆಂಟ್ ಸಮುಚ್ಚಯ ದಾಟಿದ ಬಳಿಕ ರಸ್ತೆಯ ಒಂದು ಬದಿಗೆ ಅಳವಡಿಸಲಾಗಿದ್ದ ಅಪ್ಟೊ ಸೋಲಾರ್ ಲೈಟ್‌ಗಳು ಕೆಟ್ಟಿವೆ. ದಿ ಪ್ರೊಮೊಂಟ್ ಟಾಟಾ ಹೌಸಿಂಗ್ ಅಪಾರ್ಟ್‌ಮೆಂಟ್ ಸಮುಚ್ಚಯದ ಪ್ರವೇಶದ್ವಾರದವರೆಗೂ ರಸ್ತೆ ಕತ್ತಲುಮಯವಾಗಲಿದೆ. ಇದರಿಂದಾಗಿ, ಕಾನೂನುಬಾಹಿರ ಚಟುವಟಿಕೆಗಳು ಹೆಚ್ಚಾಗುತ್ತಿದ್ದು, ಮಹಿಳೆಯರು, ಮಕ್ಕಳು, ವೃದ್ಧರು ಭಯದಲ್ಲಿ ಸಾಗಬೇಕಾದ ಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ವೇಳೆ ವಾಹನಗಳು ವೇಗವಾಗಿ ಬರಲಿದ್ದು, ರಸ್ತೆ ತಿರುವು ಇರುವುದರಿಂದ ಅಪಘಾತವಾಗುವ ಸಾಧ್ಯತೆ ಇದೆ. ಸಂಬಂಧಪಟ್ಟ ಅಧಿಕಾರಿಗಳು ಆದಷ್ಟು ಬೇಗ ಬೀದಿ ದೀಪ ಸಮಸ್ಯೆ ನಿವಾರಿಸಬೇಕು.

ಕೆ.ಎಚ್.ವಿಶ್ವನಾಥ, ಹೊಸಕೆರೆಹಳ್ಳಿ

ಬೆಂಗಳೂರು ವಾರ್ಡ್ ಸಮಿತಿ ಬಳಗ ಸಮಾವೇಶದಲ್ಲಿ ತುಷಾರ್ ಗಿರಿನಾಥ್ ಎಚ್ಚರಿಕೆ

ಪರಿಹಾರ ವಿಳಂಬ, ಎಂಜಿನಿಯರ್‌ಗಳೇ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿಯ ಎಲ್ಲ ವಲಯದ ಆಯುಕ್ತರು ಮಧ್ಯಾಹ್ನದ ನಂತರ ಕಚೇರಿಯಲ್ಲಿ ಹಾಜರಿದ್ದು, ನಾಗರಿಕರ ಸಮಸ್ಯೆಗಳನ್ನು ಆಲಿಸಬೇಕು. ಈ ಸಮಸ್ಯೆಗಳು ನಿವಾರಣೆಯಾಗದಿದ್ದರೆ ವಿಭಾಗೀಯ ಮಟ್ಟದ ಎಂಜಿನಿಯರ್‌ಗಳನ್ನೇ ನೇರವಾಗಿ ಹೊಣೆ ಮಾಡಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಬೆಂಗಳೂರು ವಾರ್ಡ್ ಸಮಿತಿ ಬಳಗ ಆಯೋಜಿಸಿದ್ದ 'ಬೆಂಗಳೂರು ವಾರ್ಡ್ ಸಮಿತಿ ಬಳಗ ಸಮಾವೇಶ'ದಲ್ಲಿ ಭಾನುವಾರ ಅವರು ಮಾತನಾಡಿದರು.

'ವಾರ್ಡ್ ಸಮಿತಿ ಸಭೆಗಳಲ್ಲಿ ನಾಗರಿಕರು ಭಾಗವಹಿಸಬೇಕು ಎಂದು ವಿನಂತಿಸುತ್ತೇನೆ. ತ್ಯಾಜ್ಯ ವಿಂಗಡಣೆ, ಪೌರಕಾರ್ಮಿಕರ ಕಲ್ಯಾಣ, ಬೀದಿ ದೀಪಗಳು ಹಾಗೂ ಉದ್ಯಾನಗಳ ಸ್ಥಿತಿ ನೋಡಿದರೆ ಆ ವಾರ್ಡ್‌ನ ಸ್ವಚ್ಛತಾ ಗುಣಮಟ್ಟ ತಿಳಿಯುತ್ತದೆ' ಎಂದರು.

ಈ ಸಭೆಯಲ್ಲಿ ಹಲವಾರು ನಾಗರಿಕ ಸಂಘ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಾದ ಜನಾಗ್ರಹ, ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿ, ಸೆನ್ಸಿಂಗ್ ಲೋಕೇಲ್, ಚೇಂಜ್ ಮೇಕರ್ಸ್, ಕನಕಪುರ, ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್, ವೈಟ್‌ಫೀಲ್ಡ್ ರೈಸಿಂಗ್, ಸಿಟಿಜನ್ಸ್ ಫಾರ್ ಬೆಂಗಳೂರು, ಸಿಟಿಜನ್ ಪಾರ್ಟಿಸಿಪೇಷನ್ ಪ್ರೋಗ್ರಾಂ, ಎಪಿಎಸ್‌ಎ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಸರ್ಕಾರಿ ಕಲಾ ಕಾಲೇಜಿನ ಜಂಟಿ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

'ವಾರ್ಡ್ ಸಮಿತಿ ಸಭೆಗಳ ಗುಣಮಟ್ಟವನ್ನು ಹೇಗೆ ನಾವು ಇನ್ನು ಉತ್ತಮ ಮಟ್ಟದಲ್ಲಿ ಕೊಂಡೊಯ್ಯಬಹುದು ಎಂಬುದರ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮುಖ್ಯ ಆಯುಕ್ತರ ಗಮನಕ್ಕೆ ತರಲು ಕ್ರಮಕೈಗೊಳ್ಳಲಾಯಿತು' ಎಂದು ಜನಾಗ್ರಹ ಸಿಟಿಜನ್‌ಶಿಪ್ ಅಂಡ್ ಡೆಮಾಕ್ರಸಿ ಸಂಸ್ಥೆಯ ವ್ಯವಸ್ಥಾಪಕ ಸಂಪತ್ತಪುರ ಎಲ್. ಮಂಜುನಾಥ್ ಹೇಳಿದರು.

'ಪ್ರತಿಯೊಬ್ಬ ನಾಗರಿಕರು ವಾರ್ಡ್ ಸಮಿತಿಗಳಲ್ಲಿ ಭಾಗವಹಿಸಿ, ತಳಮಟ್ಟದ ಪ್ರಜಾಪ್ರಭುತ್ವವನ್ನು ಬಲಪಡಿಸುವ ಕೆಲಸ ಮಾಡಲು ನಾನು ವಿನಂತಿಸುತ್ತೇನೆ' ಎಂದು ಬಿ.ಕ್ಲಿಪ್‌ನ ರಾಘವೇಂದ್ರ ಎಚ್. ಎಸ್ ಬಿ. ಹೇಳಿದರು.

ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿ ಬಳಗವು ಅಂಗೀಕರಿಸಿದ ನಿರ್ಣಯಗಳನ್ನು ಎಲ್ಲ ರಾಜಕೀಯ ಪಕ್ಷಗಳಿಗೆ ಕಳುಹಿಸಿದ್ದು, ಪ್ರಣಾಳಿಕೆಯಲ್ಲಿ ಅಳವಡಿಸಿಕೊಳ್ಳುವಂತೆ ವಿನಂತಿಸುತ್ತೇವೆ ಜನಾಗ್ರಹ ಸಂಸ್ಥೆಯ ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥ ಶ್ರೀನಿವಾಸ ಅಲವಿಲ್ಲಿ ಹೇಳಿದರು.

ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಭಾನುವಾರ ನಡೆದ 'ಬೆಂಗಳೂರು ವಾರ್ಡ್ ಸಮಿತಿ ಸಮಾವೇಶ'ದಲ್ಲಿ ಜನಾಗ್ರಹ ಸಂಸ್ಥೆಯ ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥ ಶ್ರೀನಿವಾಸ ಅಲವಿಲ್ಲಿ ಮಾತನಾಡಿದರು

ಸಮಾವೇಶದ ನಿರ್ಣಯಗಳು

- ಬಿಬಿಎಂಪಿ ಚುನಾವಣೆ ಮುಗಿದ ಮೂರು ತಿಂಗಳಲ್ಲಿ ವಾರ್ಡ್ ಸಮಿತಿ ರಚಿಸಬೇಕು. ನಾಮನಿರ್ದೇಶನದ ಬದಲಿಗೆ ಸಾರ್ವಜನಿಕ ವಿಧಾನ ಅಳವಡಿಸಿಕೊಳ್ಳಬೇಕು.
- ತ್ಯಾಜ್ಯ ನಿರ್ವಹಣೆ, ರಸ್ತೆ, ಪಾದಚಾರಿ ಮಾರ್ಗ, ಬೀದಿದೀಪ, ಕೆರೆಗಳ ಮೇಲೆ ನಿಗಾವಹಿಸಲು ವಾರ್ಡ್ ಸಮಿತಿ ಸಲಹೆ ಪಾಲಿಸಬೇಕು.
- ಬಜೆಟ್, ಬಜೆಟ್ ಹಂಚಿಕೆಯಲ್ಲಿ ನಾಗರಿಕರನ್ನು ಸಕ್ರಿಯವಾಗಿ ಭಾಗಿ ಮಾಡಿಕೊಳ್ಳಬೇಕು. ವಾರ್ಡ್ ಸಮಿತಿ ನಿರ್ಣಯಗಳನ್ನು ಜಾರಿಗೊಳಿಸಬೇಕು. ಎಲ್ಲ ಇಲಾಖೆಯೊಂದಿಗೆ ಮಾಸಿಕ ಸಭೆ ನಡೆಸಬೇಕು.
- ಪ್ರತಿ ಮೊದಲ ಶನಿವಾರ ವಾರ್ಡ್ ಸಮಿತಿ ಸಭೆ ನಡೆಸಬೇಕು. ಚುನಾಯಿತ ಪಾಲಿಕೆ ಸದಸ್ಯರೇ ಈ ಸಮಿತಿ ಅಧ್ಯಕ್ಷರಾಗಿರಬೇಕು.

ಎಂಬ ನಿರ್ಣಯಗಳನ್ನು ಸಮಾವೇಶದಲ್ಲಿ ಕೈಗೊಳ್ಳಲಾಯಿತು.

ಭಾರತ–ಚೀನಾ ಗಡಿ ಪರಿಸ್ಥಿತಿ; ಮುಂದಿನ ವಾರ 17ನೇ ಸುತ್ತಿನ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ -ಚೀನಾ ಗಡಿಯಲ್ಲಿ ಸಹಜ ಸ್ಥಿತಿ ಸ್ಥಾಪನೆ ಕುರಿತು ಚರ್ಚಿಸಲು ಉಭಯ ದೇಶಗಳ ಸೇನೆಯ ಹಿರಿಯ ಕಮಾಂಡರ್‌ಗಳು ಮುಂದಿನವಾರ ಸಭೆ ಸೇರುವರು. ಗಡಿಭಾಗದಲ್ಲಿ ನಿಯೋಜಿಸಿರುವ ಸೇನೆ ವಾಪಸಿಗೆ ಭಾರತ ಸಭೆಯಲ್ಲಿ ಪಟ್ಟುಹಿಡಿಯುವ ಸಂಭವವಿದೆ.

ಗಡಿ ರೇಖೆಗೆ ಹೊಂದಿಕೊಂಡ ಗೋಗ್ರಾ ಹಾಟ್‌ಸ್ಪ್ರಿಂಗ್ ವಲಯದ ಗಸ್ತು ತಾಣ ಪಾಯಿಂಟ್ 15ರ ಬಳಿ ನಿಯೋಜಿಸಿದ್ದ ಸೇನೆ ವಾಪಸಿಗೆ ಕಳೆದ ತಿಂಗಳು ನಡೆದಿದ್ದ ಸಭೆಯಲ್ಲಿ ನಿರ್ಧರಿಸಿದ ನಂತರ ಪೂರ್ವ ಲಡಾಖ್‌ನಲ್ಲಿ ಸಹಜ ಸ್ಥಿತಿ ಮರಳುತ್ತಿದೆ ಎಂದು ಚೀನಾ ಪ್ರತಿಪಾದಿಸಿದೆ.

ಆದರೆ, ಚೀನಾದ ಈ ಪ್ರತಿಪಾದನೆಯನ್ನು ಭಾರತ ತಳ್ಳಿಹಾಕಿದೆ. 'ಗಡಿಯಲ್ಲಿ ಇನ್ನೂ ಹಲವು ಸಮಸ್ಯೆಗಳು ಉಳಿದಿವೆ. ಸಹಜ ಪರಿಸ್ಥಿತಿಯನ್ನು ಮರುಸ್ಥಾಪಿಸಲು ಹಲವು ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ' ಎಂದು ಭಾರತವು ಸ್ಪಷ್ಟವಾಗಿ ಹೇಳಿದೆ.

ಡೆಮ್‌ಚೋಕ್ ಮತ್ತು ಡೆಪ್ಸಾಂಗ್ ಪ್ರಾಂತ್ಯದಲ್ಲಿ ಹಲವು ಗಸ್ತು ತಾಣಗಳಿಗೆ ಭಾರತದ ಯೋಧರು ತೆರಳುವುದನ್ನು ಚೀನಾದ ಸೇನೆ ತಡೆಯುತ್ತಿದ್ದಿದೆ. ಹೀಗಾಗಿ, ಚೀನಾದ ಪ್ರತಿಪಾದನೆ 'ಸಹಜ ಸ್ಥಿತಿ ಮರಳುತ್ತಿದೆ' ಎಂದು ಒಪ್ಪಿಕೊಳ್ಳುವಂತೆ ಭಾರತದ ಮೇಲೆ ಒತ್ತಡ ಹೇರುವ ತಂತ್ರ ಎನ್ನಲಾಗಿದೆ.

ಉಭಯ ದೇಶಗಳ ರಾಜತಾಂತ್ರಿಕರ ನಡುವೆ ಕಳೆದ ಶುಕ್ರವಾರ ವಿಡಿಯೊ ಕಾನ್ಫರೆನ್ಸ್ ಸಭೆ ನಡೆದಿತ್ತು. ಆಗ ಸೇನೆಗಳ ಮುಖ್ಯಸ್ಥರ ಮಟ್ಟದಲ್ಲಿ ಸುತ್ತಿನ ಸಭೆ ನಡೆಸಬೇಕು ಎಂದು ನಿರ್ಧರಿಸಲಾಗಿತ್ತು. ಅದರಂತೆ, ಮುಂದಿನ ವಾರ ಸಭೆ ಸೇರಲಿದ್ದು, 17ನೇ ಸುತ್ತಿನ ಸಭೆ ಇದಾಗಿದೆ.

ಡೆಪ್ಸಾಂಗ್ ಮತ್ತು ಡೆಮ್‌ಚೋಕ್ ಪ್ರದೇಶದಲ್ಲಿ ಸೇನೆಗಳ ಮುಖಾಮುಖಿ ಆಗುವುದನ್ನು ತಪ್ಪಿಸಲು ಒಪ್ಪಂದಕ್ಕೆ ಬರುವ ಕುರಿತಂತೆ ಭಾರತ ಒತ್ತು ನೀಡಲಿದೆ ಎಂದು ಮೂಲಗಳು ತಿಳಿಸಿವೆ.

ಭ್ರಷ್ಟಾಚಾರ ಪ್ರಕರಣ: ಐಎಎಸ್ ಅಧಿಕಾರಿಗೆ ನಿರೀಕ್ಷಣಾ ಜಾಮೀನು

ಬೆಂಗಳೂರು: ಬಿಡಿಎ ಬಹುಮಹಡಿ ವಸತಿ ಯೋಜನೆ ಕಾಮಗಾರಿಯ ಗುತ್ತಿಗೆಯಲ್ಲಿ ಭ್ರಷ್ಟಾಚಾರ ನಡೆಸಿದ ಆರೋಪ ದಡಿ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ, ಇತರರ ವಿರುದ್ಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಪ್ರಕರಣದ ಏಳನೇ ಆರೋಪಿ, ಐಎಎಸ್ ಅಧಿಕಾರಿ ಜಿ.ಸಿ. ಪ್ರಕಾಶ್ ಅವರಿಗೆ ವಿಶೇಷ ನ್ಯಾಯಾಲಯ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಕರ್ನಾಟಕ ಆ್ಯಂಟಿ ಗ್ರಾಫ್ಟ್ ಮತ್ತು ಪರಿಸರ ವೇದಿಕೆ ಅಧ್ಯಕ್ಷ ಟಿ.ಜೆ. ಅಬ್ರಹಾಂ ಸಲ್ಲಿಸಿದ್ದ ಖಾಸಗಿ ದೂರಿನಲ್ಲಿರುವ ಆರೋಪಗಳ ಕುರಿತು ತನಿಖೆ ನಡೆಸಲು ಜನಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯವು ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿತ್ತು. ಸೆಪ್ಟೆಂಬರ್ 16 ರಂದು ಎಫ್‌ಐಆರ್ ದಾಖಲಿಸಿ, ಲೋಕಾಯುಕ್ತ ಪೊಲೀಸರು ತನಿಖೆ ಆರಂಭಿಸಿದ್ದರು.

ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರಿಗೆ ನೀಡುವುದಾಗಿ ಹೇಳಿ ಗುತ್ತಿಗೆದಾರ ಚಂದ್ರಕಾಂತ್ ರಾಮಲಿಂಗಂ ಅವರಿಂದ ₹ 12 ಕೋಟಿ ಲಂಚ ಪಡೆದ ಆರೋಪ ಹಿಂದೆ ಬಿಡಿಎ ಆಯುಕ್ತರಾಗಿದ್ದ ಪ್ರಕಾಶ್ ಮೇಲಿದೆ. ಈಗ ಮೈಸೂರು ಪ್ರಾದೇಶಿಕ ಆಯುಕ್ತರ ಹುದ್ದೆಯಲ್ಲಿರುವ ಅವರು, ನಿರೀಕ್ಷಣಾ ಜಾಮೀನು ಕೋರಿ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಆರೋಪಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಾರದು ಎಂದು ಲೋಕಾಯುಕ್ತದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ವಾದಿಸಿದ್ದರು. ಗುರುವಾರ ಆದೇಶ ಪ್ರಕಟಿಸಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ. ಜಯಂತ್ ಕುಮಾರ್, ಅಧಿಕಾರಿಗೆ ಷರತ್ತುಬದ್ಧ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ್ದಾರೆ.

ಬಂಧನದ ಅಗತ್ಯ ಕಂಡುಬಂದಲ್ಲಿ ತನಿಖಾಧಿಕಾರಿಯು ₹1 ಲಕ್ಷ ಮೊತ್ತದ ಬಾಂಡ್ ಹಾಗೂ ಅಷ್ಟೇ ಮೊತ್ತದ ವೈಯಕ್ತಿಕ ಭದ್ರತೆ ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು. ಆರೋಪಿಯು ತಲೆಮರೆಸಿಕೊಳ್ಳುವುದು ಮತ್ತು ಸಾಕ್ಷ್ಯನಾಶಕ್ಕೆ ಪ್ರಯತ್ನಿಸುವಂತಿಲ್ಲ. ತಿಂಗಳಲ್ಲಿ ಒಂದು ದಿನ ತನಿಖಾಧಿಕಾರಿ ಎದುರು ಹಾಜರಾತಿ ನೀಡಬೇಕು ಎಂದು ನ್ಯಾಯಾಲಯ ವು ಷರತ್ತು ವಿಧಿಸಿದೆ.

ಬೇಡ ಜಂಗಮ ಸಮುದಾಯದ ನಿಯೋಗದಿಂದ ಭೇಟಿ

ಪ್ರತಿಭಟನೆ ಕೈಬಿಡಿ: ಮುಖ್ಯಮಂತ್ರಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಡ ಜಂಗಮರಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ವಿತರಿಸುವ ಕುರಿತ ಗೊಂದಲಕ್ಕೆ ಸಂಬಂಧಿಸಿದಂತೆ ಕಾನೂನು ರೀತಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ.

ವಕೀಲ ಬಿ.ಡಿ. ಹಿರೇಮಠ ನೇತೃತ್ವದ ಬೇಡ ಜಂಗಮ ಸಮುದಾಯದ ನಿಯೋಗ ಮುಖ್ಯಮಂತ್ರಿ ಅವರನ್ನು ಭಾನುವಾರ ಭೇಟಿ ಮಾಡಿ ಚರ್ಚೆ ನಡೆಸಿತು.

ನಿಯೋಗದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಮುಖ್ಯಮಂತ್ರಿ, 'ಈ ಗೊಂದಲ ಸರಿಪಡಿಸಲು ಸಮಯಾವಕಾಶ ಅಗತ್ಯವಿದೆ. ಹೀಗಾಗಿ, ಇದೇ 18ರಂದು ವಿಧಾನಸೌಧ ಚಲೋ ಹಾಗೂ ಆತ್ಮಾರ್ಪಣೆ ಕಾರ್ಯಕ್ರಮವನ್ನು ಕೈಬಿಡಬೇಕು' ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ವಕೀಲ ಬಿ.ಡಿ. ಹಿರೇಮಠ ನೇತೃತ್ವದಲ್ಲಿ ಬೇಡ ಜಂಗಮ ಸಮುದಾಯದ ನಿಯೋಗ ಭಾನುವಾರ ಭೇಟಿ ಮಾಡಿತು

'ನಮ್ಮದು ನ್ಯಾಯಯುತ ಬೇಡಿಕೆ. ಸಮುದಾಯಕ್ಕೆ ಈಗಾಗಲೇ ಕೆಲವು ಕಡೆಗಳಲ್ಲಿ ಪರಿಶಿಷ್ಟ ಜಾತಿ ಪ್ರಮಾಣಪತ್ರ ವಿತರಿಸಲಾಗಿದೆ. ಕೋರ್ಟ್ ಆದೇಶ ಕೂಡಾ ಇದೆ. ಆದರೆ, ಈಗ ತಾಂತ್ರಿಕ ಕಾರಣ ಹೇಳಿ ಪ್ರಮಾಣಪತ್ರ ನೀಡಲು ನಿರಾಕರಿಸಲಾಗುತ್ತಿದೆ. ಕೂಡಲೇ ಸಭೆ ನಡೆಸುವ ಮೂಲಕ ಬೇಡ ಜಂಗಮರಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ನೀಡುವ ಕುರಿತ ಗೊಂದಲ ಬಗೆಹರಿಸಬೇಕು' ಎಂದು ಮುಖ್ಯಮಂತ್ರಿ ಬಳಿ ನಿಯೋಗ ಮನವಿ ಮಾಡಿತು.

'ಬೇಡ ಜಂಗಮ ಸಮುದಾಯಕ್ಕೆ ಸಂವಿಧಾನ ಈಗಾಗಲೇ ನೀಡಿರುವ ಕಾನೂನು ಬದ್ಧವಾದ ಮೀಸಲಾತಿಯನ್ನು ಕೇಳುತ್ತಿದ್ದೇವೆಯೇ ಹೊರತು ಬೇರೆಯವರ ಹಕ್ಕನ್ನು ಕಸಿದುಕೊಳ್ಳುತ್ತಿಲ್ಲ. ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದಿರುವ ಸಮುದಾಯಕ್ಕೆ ಮೀಸಲಾತಿಯ ಅಗತ್ಯವಿದೆ. ಹೆಚ್ಚು ಜನಸಂಖ್ಯೆ ಹೊಂದಿರುವ ಸಮುದಾಯಗಳಿಗೆ ಮೀಸಲಾತಿ ನೀಡುತ್ತಿರುವ ಸರ್ಕಾರ, ಅಲ್ಪಸಂಖ್ಯಾತರಾಗಿರುವ ಬೇಡ ಜಂಗಮ ಸಮುದಾಯಕ್ಕೆ ಮಾತ್ರ ಅನ್ಯಾಯ ಮಾಡುತ್ತಿದೆ' ಎಂದೂ ಮನವರಿಕೆ ಮಾಡಿತು.

ಬೇಡ ಜಂಗಮರಿಗೆ ಪರಿಶಿಷ್ಟ ಜಾತಿಪ್ರಮಾಣ ಪತ್ರ ನೀಡುವ ವಿಷಯವಾಗಿ ಚರ್ಚಿಸಲು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಇಲಾಖೆಯ ಅಧಿಕಾರಿಗಳ ಜೊತೆ ಇದೇ 12ರಂದು ವಿಧಾನಸೌಧದಲ್ಲಿ ಸಭೆ ನಡೆಸಲು ಸರ್ಕಾರ ಸುತ್ತೋಲೆ ಹೊರಡಿಸಿತ್ತು. ನಂತರ ಸಭೆಯನ್ನು ರದ್ದುಗೊಳಿಸಲಾಗಿದೆ. ಸರ್ಕಾರದ ಈ ಕ್ರಮ ವಿರೋಧಿಸಿ ಇದೇ 18ರಂದು ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಬೇಡ ಜಂಗಮ ಒಕ್ಕೂಟ ಮುಂದಾಗಿದೆ.

ಅಲ್ಯೂಮಿನಿಯಂ ಬೋಗಿಗಳಿಗೆ ಚಾಲನೆ

ನವದೆಹಲಿ (ಪಿಟಿಐ): ಭಾರತೀಯ ರೈಲ್ವೆಯು ಸರಕು ಸಾಗಣೆ ರೈಲಿನ ಅಲ್ಯೂಮಿನಿಯಂ ಬೋಗಿಗಳನ್ನು (ರೇಕ್) ದೇಶಿಯವಾಗಿ ಅಭಿವೃದ್ಧಿಪಡಿಸಿದ್ದು, ಇವುಗಳಿಗೆ ಭಾನುವಾರ ಚಾಲನೆ ನೀಡಲಾಯಿತು.

ಒಡಿಶಾದ ಭುವನೇಶ್ವರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಅಲ್ಯೂಮಿನಿಯಂ ಬೋಗಿಗಳ ಬಳಕೆಗೆ ಹಸಿರು ನಿಶಾನೆ ತೋರಿದರು.

'ಬೆಸ್ಕೊ ಲಿಮಿಟೆಡ್ ಹಾಗೂ ಹಿಂಡಾಲ್ಕೊ ಕಂಪನಿಗಳ ಸಹಯೋಗದಲ್ಲಿ ಈ ಬೋಗಿ ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇವು ಈ ಹಿಂದೆ ಇದ್ದ ಬೋಗಿಗಳಿಗಿಂತಲೂ ಹೆಚ್ಚು ಹಗುರವಾಗಿದ್ದು, ಅಧಿಕ ಸರಕು ಸಾಗಣೆ ಸಾಮರ್ಥ್ಯ ಹೊಂದಿವೆ' ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.

'ಈ ಹಿಂದೆ ಇದ್ದ ಉಕ್ಕಿನ ಬೋಗಿಗಳಿಗೆ ಹೋಲಿಸಿದರೆ ಈಗ ಅಭಿವೃದ್ಧಿಪಡಿಸಲಾಗಿರುವ ಅಲ್ಯೂಮಿನಿಯಂ ಬೋಗಿಗಳು ಹೆಚ್ಚುವರಿಯಾಗಿ ಪ್ರತಿ ಟ್ರಿಪ್‌ಗೆ 180 ಟನ್ ಸರಕು ಸಾಗಿಸುವ ಸಾಮರ್ಥ್ಯ ಹೊಂದಿವೆ. ಈ ಬೋಗಿಗಳು ತುಕ್ಕು ಹಿಡಿಯುವುದಿಲ್ಲ' ಎಂದು ಮಾಹಿತಿ ನೀಡಿದೆ.

ಚಿತ್ರಾವಳಿ

ಬೆಂಗಳೂರಿನ ಹಂಪಿನಗರ ನಗರ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ಭಾನುವಾರ ನಡೆದ ಪ್ರೊ.ಎನ್‌ವಿ.ಅಂಬಾಮಣಿಮೂರ್ತಿ ಅಭಿನಂದನಾ ಸಮಾರಂಭದಲ್ಲಿ 'ಶಿರೋಮಣಿ' ಅಭಿನಂದನಾ ಗ್ರಂಥವನ್ನು ಬಿಡುಗಡೆ ಮಾಡಿದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರು ಪ್ರತಿಯನ್ನು ಅರೆಮಾದನಹಳ್ಳಿ ಸುಜ್ಞಾನಪ್ರಭು ಪೀಠದ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಅವರಿಗೆ ನೀಡಿದರು. ಅಭಿನಂದನಾ ಗ್ರಂಥದ ಪ್ರಧಾನ ಸಂಪಾದಕ ಎಲ್‌.ಎನ್‌. ಮುಕುಂದರಾಜ್, ಪ್ರೊ.ಎನ್‌ವಿ.ಅಂಬಾಮಣಿಮೂರ್ತಿ, ಮನೋರೋಗ ತಜ್ಞ ಡಾ.ಸಿ.ಆರ್‌.ಚಂದ್ರಶೇಖರ್ ಮತ್ತು ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಇದ್ದರು

ವಿಶ್ರಾಂತಿ ಕೊಠಡಿ ಉದ್ಘಾಟನೆ

ಬೆಂಗಳೂರು: ಪೌರಕಾರ್ಮಿಕರು ನಗರವನ್ನು ಸ್ವಚ್ಛಗೊಳಿಸಲು ಪ್ರಮುಖ ಪಾತ್ರ ವಹಿಸುತ್ತಿದ್ದು, ವಿಶ್ರಾಂತಿ ಪಡೆಯಲು ಅನುಕೂಲಗಳಿಲ್ಲದೇ ತೊಂದರೆಗಳನ್ನು ಅನುಭವಿಸುತ್ತಿರುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ವಿಶ್ರಾಂತಿ ಕೊಠಡಿ ನಿರ್ಮಿಸಲಾಗಿದೆ ಎಂದು ಶಾಸಕ ಎಂ.ಕೃಷ್ಣಪ್ಪ ತಿಳಿಸಿದರು.

ಅತ್ತಿಗುಪ್ಪೆ ವಾರ್ಡ್ ಸುಬ್ಬಣ್ಣ ಗಾರ್ಡನ್‌ನಲ್ಲಿ ಪೌರಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ ಉದ್ಘಾಟಿಸಿ ಮಾತನಾಡಿದರು. ವಿಶ್ರಾಂತಿ ಪಡೆಯುವುದರ ಜೊತೆಗೆ ಸಮವಸ್ತ್ರ ಬದಲಾವಣೆ ಶೌಚಾಲಯ ಊಟ ಮಾಡಲು ಅನುಕೂಲ. ಹಲವಾರು ಸದುಪಯೋಗವನ್ನು ಪಡೆದುಕೊಳ್ಳಬಹುದು ಎಂದರು.

'ಭಾಷೆಯ ಉತ್ಕೃಷ್ಟ ಬಳಕೆ ಸಾಹಿತ್ಯದಲ್ಲಷ್ಟೇ ಸಾಧ್ಯ'

ಪ್ರಜಾವಾಣಿ ವಾರ್ತೆ



ವೆಂಕಟೇಶ ಮೂರ್ತಿ

ಬೆಂಗಳೂರು: 'ಲೋಕ ವ್ಯವಹಾರದಲ್ಲೂ ಭಾಷೆಯನ್ನು ಬಳಸುತ್ತೇವೆ. ಆದರೆ, ಸಾಹಿತ್ಯದಲ್ಲಷ್ಟೇ ಭಾಷೆಯನ್ನು ಉತ್ಕೃಷ್ಟವಾಗಿ ಬಳಸಲು ಸಾಧ್ಯ' ಎಂದು ಕವಿ ಎಚ್.ಎಸ್. ವೆಂಕಟೇಶಮೂರ್ತಿ ಹೇಳಿದರು.

ಅಂಕಿತ ಪುಸ್ತಕ ಪ್ರಕಾಶನ ಸಂಸ್ಥೆ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಪತ್ರಕರ್ತ ಜಿ.ಎನ್. ರಂಗನಾಥ ರಾವ್ ಅವರ 'ಪುಟ್ಟ ಪಾದಗಳ ಪುಳಕ', 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರ 'ರಾಜಕಾರಣದಲ್ಲಿ ನಿಂಬೆ ಹಾಗಲ' ಮತ್ತು ವೈ.ಎನ್. ಗುಂಡೂರಾವ್ ಅವರ ಸಂಪಾದಿತ ಕೃತಿ 'ಘಮ ಘಮ ಮಸಾಲೆ ದೋಸೆ' ಕೃತಿಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಸಾಹಿತ್ಯ ರಚನೆ ಒಂದು ವಿಶಿಷ್ಟ ಪ್ರಕ್ರಿಯೆ. ಅದು ಒಂದು ಪರಂಪರೆಯಾಗಿ ಮುಂದುವರಿಯುತ್ತಲೇ ಇರುತ್ತದೆ. ಹೊಸ ಕೃತಿಗಳು ಆ ಪರಂಪರೆಯನ್ನು ಸೇರಿಕೊಳ್ಳುತ್ತವೆ. ಬರಹಗಾರ ನಿತ್ಯವೂ ಜೀವ ತೇಯ್ದರೆ ಮಾತ್ರವೇ ಒಂದು ಕೃತಿಯನ್ನು ಹೊರತರಲು ಸಾಧ್ಯ' ಎಂದರು.

'ಕನ್ನಡ ಸಾಹಿತ್ಯ ಕ್ಷೇತ್ರವು ಅರಿಜೋನಾ ಕಣಿವೆಯಂತೆ ವಿಶಾಲವಾದುದು. ಒಳ್ಳೆಯ ಕೃತಿಗಳು ಕನ್ನಡ ಸಾಹಿತ್ಯ ಕ್ಷೇತ್ರದ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಪ್ರತಿಯೊಂದು ಕೃತಿಯೂ ಒಂದು ವಿಭಿನ್ನ ಭಾಷೆಯಂತೆ ಕೆಲಸ ಮಾಡುತ್ತದೆ. ರಾಮಾಯಣ, ಮಹಾಭಾರತ ಎಲ್ಲವೂ ಒಂದೊಂದು ಭಾಷೆಯೇ ಆಗಿವೆ' ಎಂದು ಹೇಳಿದರು.

'ಪತ್ರಕರ್ತರು ಸಾಹಿತ್ಯ ಕೃತಿಗಳನ್ನು ರಚಿಸುವುದು ಅಸಾಧ್ಯ ಎಂಬ ಮಾತಿದೆ. ಆದರೆ, ಅದಕ್ಕೆ ವಿರುದ್ಧವಾಗಿ ರಂಗನಾಥ ರಾವ್ ಮತ್ತು ರವೀಂದ್ರ ಭಟ್ಟ ಅವರು ಅತ್ಯುತ್ತಮವಾದ ಕೃತಿಗಳನ್ನು ನೀಡಿದ್ದಾರೆ' ಎಂದರು.

'ಪುಟ್ಟ ಪಾದಗಳ ಪುಳಕ' ಮತ್ತು 'ರಾಜಕಾರಣದಲ್ಲಿ ನಿಂಬೆ ಹಾಗಲ' ಕೃತಿಗಳನ್ನು ಕುರಿತು ಮಾತನಾಡಿದ ಬುಕ್ ಬ್ರಹ್ಮ ಸಂಸ್ಥಾಪಕ ಸತೀಶ್ ಚಪ್ಪರಿಕೆ, 'ರಾಜಕಾರಣದಲ್ಲಿ ನಿಂಬೆ ಹಾಗಲ ಕೃತಿಯು ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ದುರಂತದ ಚಿತ್ರಣವನ್ನು ಕಟ್ಟಿಕೊಡುತ್ತದೆ. ಪುಟ್ಟ ಪಾದಗಳ ಪುಳಕ ಕೃತಿಯಲ್ಲಿ ಓದುಗರನ್ನು ದೀರ್ಘವಾಗಿ ಕಾಡುವಂತಹ ಪ್ರಬಂಧಗಳಿವೆ' ಎಂದು ಹೇಳಿದರು.

ಕವಿ ಎಚ್. ಡುಂಡಿರಾಜ್ ಅವರು 'ಘಮ ಘಮ ಮಸಾಲೆ ದೋಸೆ' ಕೃತಿ ಕುರಿತು ಮಾತನಾಡಿದರು. ಜಿ.ಎನ್. ರಂಗನಾಥ ರಾವ್, ರವೀಂದ್ರ ಭಟ್ಟ, ವೈ.ಎನ್. ಗುಂಡೂರಾವ್ ಅಂಕಿತ ಪ್ರಕಾಶನದ ಪ್ರಕಾಶ್ ಕಂಬತ್ತಳ್ಳಿ ಉಪಸ್ಥಿತರಿದ್ದರು.

ಒತ್ತುವರಿ ತೆರವಿಗೆ ಕ್ರಮ: ಜಿಲ್ಲಾಧಿಕಾರಿ ಭರವಸೆ

ಯಲಹಂಕ: 'ಸುರಧೇನುಪುರ ಗ್ರಾಮದ ಎರಡು ಕೆರೆಗಳಿಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆ ಒತ್ತುವರಿ ಗುರುತಿಸಲಾಗಿದೆ. ಒತ್ತುವರಿ ತೆರವುಗೊಳಿಸಿ ಸರಾಗವಾಗಿ ನೀರು ಹರಿಯಲು ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ತಿಳಿಸಿದರು.

ಕಂದಾಯ ಇಲಾಖೆ ವತಿಯಿಂದ ಆಯೋಜಿಸಿದ್ದ 'ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆಗೆ' ಕಾರ್ಯಕ್ರಮದಲ್ಲಿ ರಾಜಕಾಲುವೆ ಒತ್ತುವರಿಯಾಗಿದೆ ಎಂಬ ಗ್ರಾಮಸ್ಥರ ಆರೋಪಕ್ಕೆ ಉತ್ತರಿಸಿದರು. 'ಈಗ ಸ್ಮಶಾನ ಮತ್ತು ಗುಂಡುತೋಪಿನ ಒತ್ತುವರಿ ತೆರವುಗೊಳಿಸಲಾಗಿದೆ. ರಾಜಕಾಲುವೆ ಸರ್ವೆ ಕಾರ್ಯ ನಡೆದಿದೆ' ಎಂದು ತಿಳಿಸಿದರು.

ಯಲಹಂಕ-ದೊಡ್ಡಬಳ್ಳಾಪುರ ಮುಖ್ಯರಸ್ತೆಗೆ(ರಾಜ್ಯ ಹೆದ್ದಾರಿ) ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ರೈಲ್ವೆ ಕೆಳಸೇತುವೆ ನಿರ್ಮಿಸಬೇಕು' ಎಂದು ಗ್ರಾಮಸ್ಥರು ಮನವಿ ಮಾಡಿದರು.

ಇದಕ್ಕೆ ಜಿಲ್ಲಾಧಿಕಾರಿ, 'ಶಾಸಕರು ಹಾಗೂ ರೈಲ್ವೆ ಹಿರಿಯ ಅಧಿಕಾರಿಗಳೊಂದಿಗೆ ಒಂದು ವಾರದಲ್ಲಿ ಸಭೆ ನಡೆಸಲಾಗುವುದು' ಎಂದು ತಿಳಿಸಿದರು.

ಬೆಂಗಳೂರು ಗಾಯನ ಸಮಾಜ ನಗರದಲ್ಲಿ ಭಾನುವಾರ ಆಯೋಜಿಸಿದ್ದ 52ನೇ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಂಗೀತ ವಿದ್ವಾಂಸ ವಿದ್ವಾನ್ ಡಿ. ಬಾಲಕೃಷ್ಣ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು 'ಕರ್ನಾಟಕ ಕಲಾಚಾರ್ಯ' ಪ್ರಶಸ್ತಿ ಪ್ರದಾನ ಮಾಡಿದರು. ಬೆಂಗಳೂರು ಗಾಯನ ಸಮಾಜದ ಉಪಾಧ್ಯಕ್ಷ ಅಚ್ಚುತ ರಾವ್ ಪದಕಿ ಹಾಗೂ ಅಧ್ಯಕ್ಷ ಎಂ.ಆರ್‌.ವಿ. ಪ್ರಸಾದ್ ಇದ್ದಾರೆ

ಬಿಐಎಸ್‌ನಿಂದ ವಿಶ್ವ ಗುಣಮಟ್ಟ ದಿನ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಗುಣಮಟ್ಟ ದಿನದ ಅಂಗವಾಗಿ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಭಾರತೀಯ ಮಾನಕ ಬ್ಯೂರೊ (ಬಿಐಎಸ್) ಬೆಂಗಳೂರು ಶಾಖೆ ವತಿಯಿಂದ ಆಯೋಜಿಸಿರುವ ಮೂರು ದಿನಗಳ ಮನೆ-ಮನೆ ಅಭಿಯಾನಕ್ಕೆ ಸಂಸ್ಥೆಯ ಬೆಂಗಳೂರು ಶಾಖೆ ನಿರ್ದೇಶಕ ಅಮಿತ್ ರಾಯ್ ಚಾಲನೆ ನೀಡಿದರು.

'ಬಿಐಎಸ್‌ಯಿಂದ ಪರವಾನಗಿ ಪಡೆದು ತಯಾರಿಸುವ ಮತ್ತು ಪ್ಯಾಕಿಂಗ್ ಮೇಲೆ ಐಎಸ್‌ಐ ಗುರುತು ಇರುವ ಉತ್ಪನ್ನಗಳ ಖರೀದಿಸುವುದು, ಉತ್ಪಾದನೆ, ಸಂಸ್ಕರಣೆ, ವಿತರಣೆ, ಸಾಗಾಣಿಕೆ, ಮಾರಾಟ ಹಂತಗಳಲ್ಲಿ ಸುರಕ್ಷತೆ ಕಾಪಾಡುವುದು, ರಾಸಾಯನಿಕ ಮತ್ತು ಕಲಬೆರಕೆ ವಸ್ತುಗಳ ಖರೀದಿಸದಂತೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ನಡೆಸುತ್ತಿದ್ದೇವೆ' ಎಂದು ಅವರು ಹೇಳಿದರು.

ಸ್ವಯಂ ಪ್ರೇರಿತವಾಗಿ ವಿದ್ಯಾರ್ಥಿಗಳು, ನಾಗರಿಕರು, ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಮನೆ ಮನೆಗೆ ತೆರಳಿ ಬಿಐಎಸ್ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುತ್ತಿದ್ದಾರೆ. ಪರಿಣಾಮಕಾರಿ ಕೆಲಸ ನಿರ್ವಹಿಸುವ ಯುವಕರಿಗೆ ಒಂದು ಸಾವಿರ ರೂಪಾಯಿ ಗೌರವಧನ ನೀಡಲಾಗುವುದು ಎಂದು ಅವರು ತಿಳಿಸಿದರು.

ಭಾರತೀಯ ಮಾನಕ ಬ್ಯುರೋ(ಬಿಐಎಸ್) ಆಯೋಜಿಸಿರುವ ಮನೆ-ಮನೆ ಅಭಿಯಾನಕ್ಕೆ ಬೆಂಗಳೂರು ಶಾಖೆ ನಿರ್ದೇಶಕ ಅಮಿತ್ ರಾಯ್ ಚಾಲನೆ ನೀಡಿದರು. ನೋಡಲ್ ಅಧಿಕಾರಿ ಪ್ರದೀಪ್ ಕುಮಾರ್ ಮತ್ತಿತರರಿದ್ದರು.

ಎಎಪಿಯಿಂದ ಪರಿಶೋಧನಾ ಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಪೇಟೆ ಕ್ಷೇತ್ರದ ಬಿಜೆಪಿ ಶಾಸಕ ಉದಯ ಗರುಡಾಚಾರ್ ಅವರು ಕ್ಷೇತ್ರಕ್ಕೆ ತಂದಿರುವ ಅನುದಾನ ಹಾಗೂ ಅಭಿವೃದ್ಧಿಯ ಲೆಕ್ಕ ನೀಡಬೇಕೆಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷ (ಎಎಪಿ) ಶನಿವಾರ ಪರಿಶೋಧನಾ ಯಾತ್ರೆ ನಡೆಸಿತು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿರೆಡ್ಡಿ, ಉಪಾಧ್ಯಕ್ಷ ಭಾಸ್ಕರ್ ರಾವ್ ನೇತೃತ್ವದಲ್ಲಿ ರಾಮಕೃಷ್ಣ ಆಶ್ರಮ ವೃತ್ತದಲ್ಲಿನ ವಿವೇಕಾನಂದ ಪ್ರತಿಮೆ ಬಳಿಯಿಂದ ಯಾತ್ರೆ ಹೊರಟಿತು. ಕ್ಷೇತ್ರದ ಹಲವು ರಸ್ತೆಗಳಲ್ಲಿ ಸಂಚರಿಸಿತು.

ಈ ವೇಳೆ ಮಾತನಾಡಿದ ಎಎಪಿ ಬೆಂಗಳೂರು ಯುವ ಘಟಕದ ಅಧ್ಯಕ್ಷ ಪ್ರಕಾಶ್ ನಾಗರಾಜ್, 'ಪರಿಶೋಧನಾ ಯಾತ್ರೆ ಸಂದರ್ಭದಲ್ಲಿ ಹಲವು ಸರ್ಕಾರಿ ಶಾಲೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಳಚೆ ಪ್ರದೇಶಗಳಿಗೆ ಭೇಟಿ ನೀಡಿದ್ದೇವೆ. ಎಲ್ಲಿಯೂ ಸೌಕರ್ಯ ಇಲ್ಲ. ಇವುಗಳನ್ನು ಗಮನಿಸಿದರೆ ಜನರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಶಾಸಕ ಉದಯ ಗರುಡಾಚಾರ್ ಸಂಪೂರ್ಣ ವಿಫಲರಾಗಿದ್ದಾರೆ' ಎಂದು ಹೇಳಿದರು.

ಎಎಪಿ ಕಾರ್ಯಕರ್ತರು ರಾಮಕೃಷ್ಣ ಆಶ್ರಮ ವೃತ್ತದ ವಿವೇಕಾನಂದ ಪ್ರತಿಮೆ ಬಳಿಯಿಂದ ಪರಿಶೋಧನಾ ಯಾತ್ರೆ ಆರಂಭಿಸಿದರು

'ತಮ್ಮ ಉದ್ಯಮಗಳನ್ನು ವಿಸ್ತರಿಸುವ ಕಾರ್ಯದಲ್ಲೇ ಮಗ್ನರಾಗಿರುವ ಶಾಸಕರಿಗೆ ಕ್ಷೇತ್ರದ ಜನರ ಕಷ್ಟಗಳು ಕಾಣಿಸುತ್ತಿಲ್ಲ. ಅವರ ಮಾವೆರಿಕ್ ಹೋಲ್ಡಿಂಗ್ಸ್ ರಿಯಲ್ ಎಸ್ಟೇಟ್ ಕಂಪನಿಗೆ ಲಾಭ ಮಾಡಿಕೊಳ್ಳಲು ಬಿಡಿಎ ವಸತಿ ಸಂಕೀರ್ಣಗಳನ್ನು ಲಪಟಾಯಿಸುತ್ತಿದ್ದಾರೆ. ಚುನಾವಣಾ ಆಯೋಗಕ್ಕೆ ಸುಳ್ಳು ಮಾಹಿತಿ ನೀಡಿದ ಆರೋಪದಲ್ಲಿ ಜೈಲು ಶಿಕ್ಷೆಗೆ ಒಳಗಾಗಿ ಜಾಮೀನಿನ ಮೇಲೆ ಹೊರಗಿದ್ದಾರೆ. ಇಂತಹ ಭ್ರಷ್ಟರನ್ನು ಮತ್ತೊಮ್ಮೆ ಗೆಲ್ಲಿಸಬೇಕೆ ಎಂಬುದನ್ನು ಜನ ಯೋಚಿಸಬೇಕಿದೆ' ಎಂದರು.

ಹೋರಾಟಗಾರರಿಗೆ ಮಧ್ಯರಾತ್ರಿ ನೋಟಿಸ್

ಮಂಗಳೂರು: ಸುರತ್ಕಲ್ ಎನ್‌ಐಟಿಕೆ ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿರುವ ಟೋಲ್‌ಗೇಟ್‌ಅನ್ನು ತೆರವುಗೊಳಿಸುವ ಹೋರಾಟದಲ್ಲಿ ತೊಡಗಿಸಿಕೊಂಡಿರುವವರ ಮನೆಗೆ ಶನಿವಾರ ಮಧ್ಯರಾತ್ರಿ ತೆರಳಿ ಪೊಲೀಸರು ನೋಟಿಸ್ ನೀಡಿದ್ದಾರೆ.

ಸುರತ್ಕಲ್ ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿಯ ಸಂಚಾಲಕ ಮುನೀರ್ ಕಾಟಿಪಳ್ಳ, ಈ ಹೋರಾಟದ ಮುಂಚೂಣಿಯಲ್ಲಿರುವ ಪ್ರತಿಭಾ ಕುಳಾಯಿ, ಪುರುಷೋತ್ತಮ ಚಿತ್ರಾಪುರ ಸೇರಿ 50ಕ್ಕೂ ಹೆಚ್ಚು ಜನರಿಗೆ ನೋಟಿಸ್ ಜಾರಿ ಮಾಡಲಾಗಿದ

ಗುಜರಾತಿನ ಅಹಮದಾಬಾದ್‌ನಲ್ಲಿ ನಡೆದ 36ನೇ ರಾಷ್ಟ್ರೀಯ ಯೋಗಾಸನಾ ಸ್ಪರ್ಧೆಯಲ್ಲಿ ಕೆ.ಆರ್‌ಪುರ ಸಮೀಪದ ಬಸವನಗರದ ಮೊಹಮ್ಮದ್ ಫಿರೋಜ್ ಶೇಕ್ ಮತ್ತು ಆದಿತ್ಯ ಪ್ರಕಾಶ್ ಜಂಗಂ ಜೋಡಿಯು ಚಿನ್ನದ ಪದಕ ಗಳಿಸಿತು

ಆನೇಕಲ್ ತಾಲ್ಲೂಕಿನಲ್ಲಿನ ತಾಣ • ವಾರಾಂತ್ಯದಲ್ಲಿ ಜನಜಾತ್ರೆ

ಮೈದುಂಬಿ ಹರಿಯುತ್ತಿದೆ ಮುತ್ಯಾಲಮಡುವು

ಪ್ರಜಾವಾಣಿ ವಾರ್ತೆ

ಆನೇಕಲ್: ಕೆಲ ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದ ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣ ಮುತ್ಯಾಲಮಡುವಿನಲ್ಲಿ ನೀರು ಬೋರ್ಗರೆಯುತ್ತಾ ಧುಮುಕುತ್ತಿದೆ. ಮುತ್ಯಾಲಮಡುವು ಜಲಪಾತ ವೀಕ್ಷಿಸಲು ಪ್ರವಾಸಿಗರ ದಂಡು ಆಗಮಿಸುತ್ತಿದೆ.

ವಾರಾಂತ್ಯ ಶನಿವಾರ ಮತ್ತು ಭಾನುವಾರವಂತೂ ಜನಜಾತ್ರೆ ಕಂಡು ಬರುತ್ತಿದೆ. ಮಳೆಯ ನಡುವೆ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ.

ಹಸಿರಿನ ಪ್ರಕೃತಿ ಸೌಂದರ್ಯದ ನಡುವೆ ಜಲಪಾತ ಭೋರ್ಗರೆಯುತ್ತಿದೆ. ಹೆಸರಿಗೆ ತಕ್ಕಂತೆ ಮುತ್ತಿನ ಹನಿಗಳಂತೆ ನೀರು ಧುಮುಕುತ್ತಿದೆ. ಜಲಪಾತದ ಸಮೀಪ ಬರುತ್ತಿದ್ದಂತೆ ಜುಳು ಜುಳು ನೀರಿನ ಶಬ್ದ ನಡುವೆ ನೀರಿನ ಝರಿ ಕೈ ಬೀಸಿ ಕರೆಯುತ್ತಿದೆ.

350ಕ್ಕೂ ಹೆಚ್ಚು ಮೆಟ್ಟಿಲು ಇಳಿಯುತ್ತಿದ್ದಂತೆ ಆಯಾಸ ದೂರವಾಗಿ ಮುತ್ಯಾಲಮಡುವು ಜಲಪಾತ ಪ್ರವಾಸಿಗರಲ್ಲಿ ಉತ್ಸಾಹ ಮೂಡಿಸುತ್ತದೆ. ಸಾರ್ವಜನಿಕರು ಜಲಪಾತದ ನೀರಿನಲ್ಲಿ ಮಿಂದೇಳುವ ದೃಶ್ಯ ಸಾಮಾನ್ಯವಾಗಿದೆ.

ಜಲಪಾತದಿಂದ ಒಂದೆರಡು ಕಿ.ಮೀ. ಅರಣ್ಯದಲ್ಲಿ ಕಾಲ್ನಡಿಗೆಯಲ್ಲಿ ಸಾಗಿದರೆ ಶಂಕು ಚಕ್ರ ಜಲಪಾತವಿದ್ದು, ಅದು ಕೂಡಾ ಜನಾಕರ್ಷಣೆ ಆಗಿದೆ. ಈ ಭಾಗದಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.

ಮುತ್ಯಾಲಮಡುವು ಸಮೀಪದ ಶಂಖು ಚಕ್ರ ಜಲಪಾತ ಮಳೆಯಿಂದಾಗಿ ಬೋರ್ಗರೆಯುತ್ತಿರುವುದು

ಹೈದರಾಬಾದ್ ರೇಸ್

ಐಸಿಕಲ್ ಗೆಲ್ಲುವ ನಿರೀಕ್ಷೆ

ಲ್ಯಾಂಡ್ ಆಫ್ ಗ್ಲೋರಿ ಪ್ಲೇಟ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಐಸಿಕಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.25ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ರೆಡ್ ರಿವರ್ 6, ನ್ಯೂ ಹಸ್ಲ್ 2, ಲೈಫ್ ಟೈಮ್ 5
2ನೇ ರೇಸ್: ಟಾಪ್ ಡೈಮಂಡ್ 2, ನ್ಯೂ ಮಿಲ್ಲೇನಿಯಮ್ 5, ಕ್ವಾಲಿಟಿ ವಾರಿಯರ್ 3
3ನೇ ರೇಸ್: ಟ್ರೂ ಮಾರ್ಷಲ್ 4, ಅವಾನ್ಸಿಯಾ 1, ಪ್ರೀಸಿಯಸ್ ಗಿಫ್ಟ್ 3
4ನೇ ರೇಸ್: ಸ್ಟ್ರಾಸ್ 1, ಪಿನಾಟುಬೊ 2, ಎಕ್ಸ್ಲೂಸಿವ್ 3
5ನೇ ರೇಸ್: ಐಸಿಕಲ್ 1, ಟ್ರೂ ಐಕಾನ್ 2, ಜಸ್ಟ್ ಇನ್‌ಕ್ರೆಡಿಬಲ್ 6
6ನೇ ರೇಸ್: ಬೆಡ್‌ಫೋರ್ಡ್ 4, ಟಾಪ್ ಇನ್ ಕ್ಲಾಸ್ 8, ರೈಸಿಂಗ್ ಕ್ವೀನ್ 3
7ನೇ ರೇಸ್: ಎಬೌವ್ ದಿ ಲಾ 5, ಕೆಬೆಲ್ಲೊ 2, ಇಂಡಿಯನ್ ಟೆಂಪಲ್ 6
8ನೇ ರೇಸ್: ಲಾ ಮಿರೇಜ್ 1, ಸಾರ್ಜೆಂಟ್ ರೆಕ್‌ಲೆಸ್ 2, ಮಿಸ್ ಸಾಲಿಟೇರ್ 7

ಉತ್ತಮ ಬೆಟ್: ಟ್ರೂ ಮಾರ್ಷಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಹಾಗೂ ಅದಮ್ಯ ಚೇತನ ವತಿಯಿಂದ ಭಾನುವಾರ ಗಿಡ ನೆಡುವ ಕಾರ್ಯಕ್ರಮ ನಡೆಯಿತು. ಕುಲಪತಿ ಡಾ.ಎಸ್‌.ಎಂ.ಜಯಕರ, ಅದಮ್ಯ ಚೇತನದ ತೇಜಸ್ವಿನಿ, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಎಚ್‌ಆರ್‌ರವೀಶ್ ಹಾಜರಿದ್ದರು

ಪ್ರಜಾವಾಣಿ 75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ
ಇನ್ನಷ್ಟು ಪ್ರತಿಕ್ರಿಯೆಗಳನ್ನು prajavani.net ನಲ್ಲಿ ಓದಬಹುದು...

ಅಭಿನಂದನೆಗಳು



ಕರ್ನಾಟಕದ ಅತಿ ಹಳೆಯ ದಿನಪತ್ರಿಕೆಗಳಲ್ಲಿ ಒಂದಾದ 'ಪ್ರಜಾವಾಣಿ'ಯ ಅಮೃತ ಮಹೋತ್ಸವದ ಸುಸಂದರ್ಭದಲ್ಲಿ ಪತ್ರಿಕೆಯ ಸಿಬ್ಬಂದಿ, ವರದಿಗಾರರು ಹಾಗೂ ಓದುಗರಿಗೆ ಹಾರ್ದಿಕ ಅಭಿನಂದನೆಗಳು. ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾದ ಪತ್ರಿಕೆಗಳು ಸಮಾಜದ ಕಣ್ಣುಗಳಾಗಿ ಕೆಲಸ ಮಾಡುತ್ತಿವೆ. ಪ್ರಜಾವಾಣಿ ಮತ್ತಷ್ಟು ಯಶಸ್ಸು ಸಾಧಿಸಲಿ ಎಂದು ಹಾರೈಸುತ್ತೇನೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಜನರ ದನಿ

ಅಮೃತ ಮಹೋತ್ಸವದ ಸಂಭ್ರಮದ ಹೊಸ್ತಿಲಲ್ಲಿರುವ ನಾಡಿನ ಹೆಸರಾಂತ ದಿನಪತ್ರಿಕೆ ಪ್ರಜಾವಾಣಿಯ ಆಡಳಿತ ವರ್ಗ ಹಾಗೂ ಎಲ್ಲ ಸಿಬ್ಬಂದಿಗೆ ಹೃತ್ಪೂರ್ವಕ ಅಭಿನಂದನೆಗಳು. ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿರುವ ಮಾಧ್ಯಮದಲ್ಲಿ ವೃತ್ತಪತ್ರಿಕೆಗಳ ಪಾತ್ರ ಮಹತ್ವದ್ದಾಗಿದ್ದು, ಜನರ ದನಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಜಾವಾಣಿಗೆ ಶುಭವಾಗಲಿ.

ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

ವಿಶ್ವಾಸಕ್ಕೆ ಹೆಸರು



ನನ್ನ ನೆಚ್ಚಿನ ಪ್ರಜಾವಾಣಿ 75ರ ಹರೆಯಕ್ಕೆ ಪದಾರ್ಪಣೆ ಮಾಡಿದೆ. ಚಿಕ್ಕಂದಿನಿಂದಲೂ ಪತ್ರಿಕೆಯ ಓದುಗನಾದ ನಾನು, ರಾಜಕೀಯಕ್ಕೆ ಇಳಿದ ನಂತರ ಹಲವು ಪತ್ರಿಕೆಗಳನ್ನು ಮನೆಗೆ ತರಿಸುತ್ತಿದ್ದರೂ ಇಂದಿಗೂ ನನ್ನ ಅಚ್ಚುಮೆಚ್ಚಿನ ಪತ್ರಿಕೆಯಿದು. ವಿಶ್ವಾಸಕ್ಕೆ ಮತ್ತೊಂದು ಹೆಸರು. 'ಗೆಜೆಟ್' ಎಂದೇ ಅನ್ವರ್ಥನಾಮವನ್ನು ಇಂದಿಗೂ ಉಳಿಸಿಕೊಂಡಿದೆ. ಪತ್ರಿಕೋದ್ಯಮ ಗುಣಮಟ್ಟ ಕಳೆದುಕೊಳ್ಳುತ್ತಿರುವ ಇಂದಿನ ದಿನದಲ್ಲೂ ಪ್ರಜಾವಾಣಿಯ ವಿಶ್ವಾಸ, ಗುಣಮಟ್ಟವನ್ನು ಕಾಯ್ದುಕೊಂಡಿದೆ. ನನ್ನ ನೆಚ್ಚಿನ ಪತ್ರಿಕೆಯು ಒತ್ತಡ, ಬೆದರಿಕೆಗೆ ಮಣಿಯದೆ ಸದಾ ರಾಜಮಾರ್ಗದಲ್ಲೇ ಮುಂದುವರಿಯಲಿ ಎಂದು ಆಶಿಸುತ್ತೇನೆ.

ಪಿ.ಸಿ.ಮೋಹನ್, ಸಂಸದ, ಬೆಂಗಳೂರು ಕೇಂದ್ರ

ಚಿಂತನೆ ರೂಪಿಸುವಲ್ಲಿ ಪಾತ್ರ

ನನ್ನ ಅಪ್ಪ ಅಗ್ರಾಳ ಪುರಂದರ ರೈ (1916–2001) ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಿಗೆ 1962ರಿಂದ 18 ವರ್ಷಗಳ ಕಾಲ ಪುತ್ತೂರಿನಿಂದ ಅರೆಕಾಲಿಕ ವರದಿಗಾರರಾಗಿದ್ದರು. ಎಂ.ಬಿ. ಸಿಂಗ್ ಮತ್ತು ಇ.ಆರ್.ಸೇತುರಾಮ್ ಬೆಂಗಳೂರಿನಿಂದ ಪುತ್ತೂರಿನ ನಮ್ಮ ಮನೆಗೆ ಬಂದು ವರದಿಗಾರರಾಗಲು ಅಪ್ಪನನ್ನು ಕೇಳಿಕೊಂಡಾಗ ನಾನು ಹತ್ತನೇ ತರಗತಿಯ ವಿದ್ಯಾರ್ಥಿ. ಅಂದಿನಿಂದ ಅರುವತ್ತು ವರ್ಷಗಳ ಕಾಲ ನಿರಂತರ ಪ್ರಜಾವಾಣಿ ಪತ್ರಿಕೆಯನ್ನು ಓದುತ್ತಾ ಬಂದಿದ್ದೇನೆ. ನನ್ನ ಚಿಂತನೆ, ಲೋಕಾನುಭವ, ಸಾಹಿತ್ಯಾಸಕ್ತಿ, ಬದುಕಿನ ದೃಷ್ಟಿಕೋನಗಳ ರೂಪುಗೊಳ್ಳುವಿಕೆಯಲ್ಲಿ ಪ್ರಜಾವಾಣಿಯ ಪಾತ್ರ ಸ್ಪಷ್ಟವಾಗಿ ಇದೆ.

ವಿದೇಶಗಳಲ್ಲಿ ಇದ್ದಾಗಲೂ ಅಂತರ್ಜಾಲದ ಮೂಲಕ ಪ್ರಜಾವಾಣಿಯ ಓದಿನಿಂದ ನನ್ನ ಬೆಳಗಿನ ಕಾಯಕದ ಆರಂಭ. ನಾನು ಬದುಕಿನ ಅಮೃತಮಹೋತ್ಸವವನ್ನು ಮುಗಿಸಿದ ಬೆನ್ನಿಗೆ 'ಪ್ರಜಾವಾಣಿ'ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಶುಭ ಹಾರೈಸುವುದು ನನ್ನ ಪಾಲಿಗೆ ಸಂತಸ ಮತ್ತು ಸಂಭ್ರಮ.

ಪ್ರೊ.ಬಿ.ಎ. ವಿವೇಕ ರೈ, ಸಾಹಿತಿ, ಮಂಗಳೂರು

ಜನಪರ, ಸತ್ಯನಿಷ್ಠ

'ಪ್ರಜಾವಾಣಿ' ಅಮೃತ ಮಹೋತ್ಸವಕ್ಕೆ ಕಾಲಿಟ್ಟಿರುವ ಸುದ್ದಿ ಓದಿ ಬಹಳ ಸಂತೋಷವಾಯಿತು. ಜನಪರ, ಸತ್ಯನಿಷ್ಠ ಹಾಗೂ ಸೃಜನಾತ್ಮಕ ಪತ್ರಿಕೋದ್ಯಮವನ್ನು ನಡೆಸುತ್ತ ಬಂದಿರುವ ಹಾಗೂ ಭಾರತೀಯ ಪತ್ರಿಕಾ ಕ್ಷೇತ್ರದಲ್ಲಿ ಕೀರ್ತಿ ಗಳಿಸಿರುವ ಪತ್ರಿಕೆಗೆ ಹಾರ್ದಿಕ ಅಭಿನಂದನೆಗಳು.



ಸುಧೀಂದ್ರ ಕುಲಕರ್ಣಿ, ಚಿಂತಕ, ಮುಂಬೈ

ಆತ್ಮೀಯ ನಂಟು

ಪ್ರಜಾವಾಣಿಗೂ ಮತ್ತು ನಮಗೂ ಬಹಳ ಹಳೆಯದಾದ ಆತ್ಮೀಯ ಸಂಬಂಧ. ಬೆಳಿಗ್ಗೆ ಪ್ರಜಾವಾಣಿ ಓದಿದ ನಂತರವೇ ಕಚೇರಿಗೆ ಹೋಗುತ್ತಿದ್ದೆ, ಅದರಲ್ಲೂ ಕ್ರೀಡಾ ಸುದ್ದಿಗಳನ್ನು ಓದುವುದೆಂದರೆ ಬಹಳ ಇಷ್ಟ. ಪತ್ರಿಕೆಯೊಂದಿಗೆ ಇವತ್ತಿಗೂ ನಮ್ಮ ನಂಟು ಉತ್ತಮವಾಗಿದೆ. ಇಂಥ ಉತ್ತಮವಾದ ಪತ್ರಿಕೆಯು ಅಮೃತ ಮಹೋತ್ಸವ ಆಚರಿಸುತ್ತಿರುವುದು ಅಪಾರ ಸಂತಸ ತಂದಿದೆ. ಪತ್ರಿಕಾ ಬಳಗದ ಪ್ರತಿಯೊಬ್ಬರಿಗೂ ನನ್ನ ಅಭಿನಂದನೆಗಳು. ಭವಿಷ್ಯದಲ್ಲಿಯೂ ಅದ್ಭುತವಾಗಿ ಈ ಪತ್ರಿಕೆ ಬೆಳೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಎಂ.ಪಿ. ಗಣೇಶ್, ಒಲಿಂಪಿಯನ್ ಹಾಕಿಪಟು, ಬೆಂಗಳೂರು

ಬೆಳಗಿನ ಸಂಗಾತಿ....

1980ರಲ್ಲಿ ಬ್ಯಾಂಕ್ ಸೇರಿದಂದಿನಿಂದ ನನ್ನ ದೈನಂದಿನ ಬೆಳಗಿನ ಸಂಗಾತಿ- ಪ್ರಜಾವಾಣಿ. (ನಡುವೆ ಏಳು ವರ್ಷ ಮುಂಬೈನಲ್ಲಿದ್ದಾಗ ಮಾತ್ರ ಸಂಜೆಯ ಸಂಗಾತಿ). ಒಟ್ಟಿನಲ್ಲಿ 42 ವರ್ಷಗಳಿಂದ ನನ್ನ ಪ್ರೀತಿಯ ಪತ್ರಿಕೆ ಇದೊಂದೇ.

ಪ್ರಜಾವಾಣಿ ನಿಜ ಅರ್ಥದಲ್ಲಿ ಕರ್ನಾಟಕದ, ಕನ್ನಡಿಗರ ಪ್ರಾತಿನಿಧಿಕ ದನಿ. ವಿಶ್ವಾಸಾರ್ಹ ಸುದ್ದಿ, ವಸ್ತುನಿಷ್ಠ ವಿಶ್ಲೇಷಣೆ, ಸಾಹಿತ್ಯ ಲೋಕದ ಎಲ್ಲ ತರಹ ತಲ್ಲಣಗಳಿಗೆ ಅದು ದನಿಯಾಗುತ್ತಿರುವ ರೀತಿ, ಅದರಲ್ಲಿ ಪ್ರಕಟವಾಗುತ್ತಿರುವ ಮೌಲಿಕ ಕಥೆ, ಕವನ, ಲೇಖನಗಳ ಕಾರಣದಿಂದ ನನಗಿಷ್ಟ. ನನ್ನ ಕೆಲವು ಕತೆ, ಕವನ, ಲೇಖನಗಳೂ ಅಲ್ಲಿ ಪ್ರಕಟವಾದದ್ದುಂಟು.

ಕನ್ನಡವನ್ನು ಕನ್ನಡಿಸುವ ಪತ್ರಿಕೆ



'ಪ್ರಜಾವಾಣಿ'ಯು ಕನ್ನಡ ಜನಜೀವನದಲ್ಲಿ ಹಾಸುಹೊಕ್ಕಾದ ಪತ್ರಿಕೆಯಾಗಿದೆ. ಸಮಾಜಮುಖಿಯಾದ ಧೋರಣೆ ಹಾಗೂ ಸಾಮಾಜಿಕ ಪ್ರಜ್ಞೆ ವಿಶೇಷವಾದುದು. ಕನ್ನಡವನ್ನು ಕನ್ನಡಿಸುವ ಪತ್ರಿಕೆ ಇದು. ಆದರ್ಶವಾದುದು. ಜೀವನ-ಜಗತ್ತನ್ನು ಕನ್ನಡಿಸುವ ಕೆಲಸವನ್ನು ನಿತ್ಯವೂ ಮಾಡುತ್ತಿದೆ. ಕನ್ನಡಿಗರೊಂದಿಗೆ ಸಮರ್ಥವಾದ ಸಂವಾದ-ಸಂವಹನವನ್ನು ಸ್ಥಾಪಿಸಿಕೊಂಡಿದೆ. 'ಪ್ರಜಾವಾಣಿ', 'ಮಯೂರ', 'ಸುಧಾ' ಆಧುನಿಕ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ ಕೊಟ್ಟಿವೆ. ಈ ಪತ್ರಿಕೆಯಲ್ಲಿ ಬರೆಯಲು ಶುರು ಮಾಡಿದವರು ದೊಡ್ಡ ಲೇಖಕರಾಗಿ ಹೊರಹೊಮ್ಮಿ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಹೀಗಾಗಿ, 'ಪ್ರಜಾವಾಣಿ'ಗೂ–ಸಾಹಿತ್ಯ ಕ್ಷೇತ್ರಕ್ಕೂ ಅವಿನಾಭಾವ ಸಂಬಂಧವಿದೆ. ವಸ್ತುನಿಷ್ಠ ಪತ್ರಿಕೆಯಾಗಿ, ಪ್ರಜೆಗಳ ವಾಣಿಯಾಗಿ, ಜನತೆಯ ಅಂತರ್ವಾಣಿಯೂ ಆಗಿದೆ. ಯಾವುದೇ ರಾಜಕೀಯ ಪಕ್ಷದ ಮುಖವಾಣಿಯಾಗಿಲ್ಲ. ಕಾಲಕಾಲಕ್ಕೆ ಆಧುನಿಕ ತಂತ್ರಜ್ಞಾನವನ್ನೂ ಅಳವಡಿಸಿಕೊಂಡು ಮುದ್ದಾಗಿ ಬರುತ್ತಿದೆ; ಜನರನ್ನು ಸೆಳೆಯುತ್ತಿದೆ. ಹೊಸ ಲೇಖಕರಿಗೆ ಅವಕಾಶ ಕೊಡುತ್ತಿದೆ. ನಾನು, ನಿತ್ಯವೂ ಈ ಪತ್ರಿಕೆ ಓದಿಯೇ ದಿನಚರಿ ಆರಂಭಿಸುತ್ತೇನೆ. ಶತಮಾನೋತ್ಸವವನ್ನು ಮೀರಿ ಮುನ್ನಡೆಯಲಿ ಎಂದು ಹಾರೈಸುತ್ತೇನೆ.

ಸಿಪಿಕೆ, ಸಾಹಿತಿ, ಮೈಸೂರು

ಇವತ್ತಿನವರೆಗೂ ಕನ್ನಡದ ಯಾವ ಪತ್ರಿಕೆಗೂ ಮೌಲಿಕತೆ, ಪತ್ರಿಕಾಧರ್ಮಕ್ಕೆ ತೋರುವ ಬದ್ಧತೆಯಲ್ಲಿ ಪ್ರಜಾವಾಣಿಯನ್ನು ಸರಿಗಟ್ಟಲು ಸಾಧ್ಯವಾಗಿಲ್ಲ ಅನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಕನ್ನಡದ ಎಲ್ಲ ಲೇಖಕರಿಗೆ, ಕಲಾವಿದರು, ಕವಿ, ಕತೆಗಾರರಿಗೆ ಸೂಕ್ತ ವೇದಿಕೆ ಒದಗಿಸುವಲ್ಲಿ ಕೂಡಾ ಪ್ರಜಾವಾಣಿಗೆ ಮುಂಚೂಣಿಯ ಸ್ಥಾನ!

ಪತ್ರಿಕೆಯೊಂದು ಯಶಸ್ವಿಯಾಗಿ 75 ವರ್ಷಕ್ಕೆ ಕಾಲಿಡುವುದು ಸಾಧಾರಣ ಸಂಗತಿಯಲ್ಲ. ಪ್ರಜಾವಾಣಿ ಅಂತಹ ಮಹತ್ಸಾಧನೆ ಮಾಡಿರುವುದು ಕನ್ನಡಿಗರೆಲ್ಲರೂ ಹೆಮ್ಮೆ ಪಡಬಹುದಾದ ವಿದ್ಯಮಾನ.

ಗಿರಿಧರ ಕಾರ್ಕಳ, ಬೆಂಗಳೂರು

ಸುದ್ದಿ 2 ನಿಮಿಷ

'ಕಾಲು ನೋವಿನಿಂದ ಸದನಕ್ಕೆ ಗೈರು'

ಶಹಾಪುರ (ಯಾದಗಿರಿ ಜಿಲ್ಲೆ): 'ನನಗೆ ಕಾಲು ನೋವು ಕಾಣಿಸಿಕೊಂಡಿದ್ದರಿಂದ ಸದನದಲ್ಲಿ ಭಾಗವಹಿಸಲು ಸಾಧ್ಯ ಆಗಿಲ್ಲ. ವಿಧಾನಸಭಾಧ್ಯಕ್ಷರು ನೋಟಿಸ್ ನೀಡಿರುವುದನ್ನು ಪತ್ರಿಕೆ ಮೂಲಕ ತಿಳಿದುಕೊಂಡೆ' ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಪ್ರತಿಕ್ರಿಯಿಸಿದರು.

ಶಹಾಪುರದಲ್ಲಿ ಭಾನುವಾರ ಪತ್ರಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ನೀಡಿರುವ ನೋಟಿಸ್ ನನಗೆ ತಲುಪಿಲ್ಲ. ತಲುಪಿದ ತಕ್ಷಣ ಉತ್ತರಿಸುವೆ' ಎಂದರು.

'1989ರಿಂದಲೂ ಒಮ್ಮೆಯೂ ವಿಧಾನಸಭೆ ಅಧಿವೇಶನಕ್ಕೆ ಗೈರಾಗಿಲ್ಲ. ಈಗ ಕಾಲು ನೋವು ಬಂದ ಕಾರಣ ಹಾಜರಾಗಿಲ್ಲ. ಆದರೆ, ಕಾಲು ನೋವು ಇರುವ ಬಗ್ಗೆ ವಿಧಾನಸಭಾಧ್ಯಕ್ಷರ ಅನುಮತಿ ಪಡೆಯಬೇಕಾಗಿತ್ತು. ಅದು ಪಡೆದಿಲ್ಲದ ಕಾರಣ ಅವರು ನೋಟಿಸ್ ನೀಡಿರಬಹುದು' ಎಂದರು.

ಮಳೆ: ರಾಜ್ಯದಲ್ಲಿ ಡೆಂಗಿ ಉಲ್ಬಣ

ಬೆಂಗಳೂರು: ಹವಾಮಾನದಲ್ಲಿ ವೈಪರೀತ್ಯ ಹಾಗೂ ಮಳೆಯಿಂದಾಗಿ ರಾಜ್ಯದಲ್ಲಿ ಡೆಂಗಿ ಪೀಡಿತರ ಸಂಖ್ಯೆ ಉಲ್ಬಣಗೊಂಡಿದ್ದು, ಒಂದೇ ತಿಂಗಳಲ್ಲಿ 987 ಪ್ರಕರಣಗಳು ದೃಢಪಟ್ಟಿವೆ.

ಈ ವರ್ಷ 1.45 ಲಕ್ಷಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 60 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಈವರೆಗೆ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 7,024 ಕ್ಕೆ ಏರಿಕೆಯಾಗಿದೆ. ಡೆಂಗಿ ಪೀಡಿತರಲ್ಲಿ ನಾಲ್ವರು ಮರಣ ಹೊಂದಿದ್ದಾರೆ. ಕಳೆದ ವರ್ಷ 7,189 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. ಜ್ವರ ಪೀಡಿತರಲ್ಲಿ ಐವರು ಮೃತಪಟ್ಟಿದ್ದರು.

ಈ ವರ್ಷ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 48,038 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 1,227 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಮೈಸೂರಿನಲ್ಲಿ 605, ಉಡುಪಿಯಲ್ಲಿ 471, ಚಿತ್ರದುರ್ಗದಲ್ಲಿ 328, ದಕ್ಷಿಣ ಕನ್ನಡದಲ್ಲಿ 316, ಕಲಬುರಗಿಯಲ್ಲಿ 278, ಬೆಳಗಾವಿಯಲ್ಲಿ 265, ಶಿವಮೊಗ್ಗದಲ್ಲಿ 263, ಮಂಡ್ಯದಲ್ಲಿ 249, ಚಿಕ್ಕಬಳ್ಳಾಪುರದಲ್ಲಿ 237 ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 200 ಕ್ಕಿಂತ ಕಡಿಮೆ ಇವೆ. 29 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 1,700 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ.

ಬಸವಪ್ರಭು ಸ್ವಾಮೀಜಿ ಮಠದ ಉಸ್ತುವಾರಿ

ಒಂದನೇ ಪುಟದಿಂದ...

'ಮಠದ ಆಡಳಿತ ಮಂಡಳಿ ಸದಸ್ಯರು, ವಕೀಲರು ಕಾರಾಗೃಹಕ್ಕೆ ತೆರಳಿ ಅಧೀಕ್ಷಕರ ಸಮ್ಮುಖದಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಏಕ ಸದಸ್ಯ ಟ್ರಸ್ಟ್‌ನಲ್ಲಿ ಮುರುಘಾ ಶರಣರಿಗೆ ಪರಮೋಚ್ಚ ಅಧಿಕಾರವಿದೆ. ಯಾರನ್ನಾದರೂ ನೇಮಕ ಮಾಡುವ ಸ್ವಾತಂತ್ರ್ಯವನ್ನು ಗುರುಗಳು ಹೊಂದಿದ್ದಾರೆ. ಅದರಂತೆ ಬಸವಪ್ರಭು ಸ್ವಾಮೀಜಿ ಅವರನ್ನು ನೇಮಕ ಮಾಡಲಾಗಿದೆ' ಎಂದು ಶರಣರ ಪರ ವಕೀಲ ಉಮೇಶ ಮಾಹಿತಿ ನೀಡಿದ್ದಾರೆ.

ಪೀಠತ್ಯಾಗಕ್ಕೆ ಮಹಾಸಭಾ ಆಗ್ರಹ: ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಬಂಧಿತರಾಗಿರುವ ಶಿವಮೂರ್ತಿ ಮುರುಘಾ ಶರಣರು ಮುರುಘಾ ಮಠದ ಪೀಠತ್ಯಾಗ ಮಾಡಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕ ನಿರ್ಣಯ ಕೈಗೊಂಡಿದೆ.

'ಗಂಭೀರ ಸ್ವರೂಪದ ಆರೋಪ ಎದುರಾಗಿರುವುದರಿಂದ ಶರಣರು ಪೀಠತ್ಯಾಗ ಮಾಡುವುದು ಸೂಕ್ತ. ಜಿಲ್ಲಾ ಕಾರ್ಯಕಾರಿಣಿಯ ಈ ನಿರ್ಣಯವನ್ನು ರಾಜ್ಯ ಹಾಗೂ ರಾಷ್ಟ್ರ ಘಟಕಕ್ಕೆ ರವಾನಿಸಲಾಗಿದೆ' ಎಂದು ಜಿಲ್ಲಾ ಘಟಕದ ಅಧ್ಯಕ್ಷ ಮಹಡಿ ಶಿವಮೂರ್ತಿ ತಿಳಿಸಿದ್ದಾರೆ.

ಮಳೆ: 25 ವರ್ಷಗಳ ಬಳಿಕ ತುಂಬಿದ ಮೇಲುಕೋಟೆಯ ಅಷ್ಟತೀರ್ಥಗಳು

ಮನೆಗಳಲ್ಲಿ ನೀರು, ಜನರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶನಿವಾರ ರಾತ್ರಿ ಮತ್ತು ಭಾನುವಾರ ಸುರಿದ ಮಳೆಯಿಂದಾಗಿ ಮನೆಗಳಿಗೆ ನೀರು ನುಗ್ಗಿದ್ದರಿಂದ ಜನರು ತೊಂದರೆ ಅನುಭವಿಸಿದರು. ಕೆಲವೆಡೆ ಮನೆಗಳಿಗೆ ಹಾನಿಯುಂಟಾದ ವರದಿಯಾಗಿದೆ.

ಮೈಸೂರು ನಗರ ಸೇರಿದಂತೆ ಜಿಲ್ಲೆಯ ಅಲ್ಲಲ್ಲಿ ಜೋರು ಮಳೆಯಾಗಿದ್ದು, ಹುಣಸೂರಿನ ಶಬ್ಬೀರ್ ನಗರ, ರಹಮತ್ ಮೊಹಲ್ಲಾ, ಮಂಜುನಾಥ ಬಡಾವಣೆ ಮತ್ತು ನಿಲುವಾಗಿಲು ಪ್ರದೇಶದಲ್ಲಿ ಮನೆಗಳಿಗೆ ನೀರು ನುಗ್ಗಿದ್ದರಿಂದ ಜನರು ತೊಂದರೆ ಅನುಭವಿಸಿದರು. ಚಾಮರಾಜ ನಗರದ ಜಿಲ್ಲೆಯ ವಿ.ಸಿ. ಹೊಸೂರಿನಲ್ಲಿ ಹಲವು ಮನೆಗಳು ಜಲಾವೃತವಾಗಿವೆ.

ವಿಜಯನಗರ ಜಿಲ್ಲೆಯ ಹೊಸಪೇಟೆ ನಗರದ ಎಸ್.ಆರ್. ನಗರ, ಚಿತ್ತವಾಡ್ಗಿ, ಇಂದಿರಾ ನಗರ, ಶಾಂತಿ ನಗರ, ಸಿದ್ದಲಿಂಗಪ್ಪ ಚೌಕಿ, ಚಪ್ಪರದಹಳ್ಳಿಯಲ್ಲಿ ಬಹುತೇಕ ಮನೆಗಳಿಗೆ ನೀರು ನುಗ್ಗಿದ್ದರಿಂದ ಜನ ತೀವ್ರ ತೊಂದರೆ ಅನುಭವಿಸಿದರು.

ಒಡೆದ ಕೆರೆ ಏರಿಗಳು: ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಬೆಕ್ಕರೆಯಲ್ಲಿ ದೊಡ್ಡ ಕೆರೆ ಏರಿ ಒಡೆದಿದ್ದು, ಕೃಷಿ ಜಮೀನುಗಳಿಗೆ ನೀರು ನುಗ್ಗಿ ಬೆಳೆ ಹಾನಿಯಾಗಿದೆ. ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನಲ್ಲಿ ಧಾರಾಕಾರ ಮಳೆಯಾಗಿದೆ. ದುಮ್ಮಿ-ಮಲ್ಲಾಪುರ ಕೆರೆ, ಕೊಳ್ಳಂಗಿ, ಹೆಬ್ಬಾಲೆ, ಬೆಳವಾಡಿ, ಬರಗೂರು, ಮುತ್ತಿಗೆ ಕೆರೆಗಳು ತುಂಬಿದ್ದು, ಜಮೀನುಗಳು ಜಲಾವೃತವಾಗಿವೆ. ಜಿಲ್ಲೆಯ ಕೊಣನೂರು ರಾಮನಾಥಪುರ ರಸ್ತೆ ಸಂಪರ್ಕ ಸ್ಥಗಿತವಾಗಿತ್ತು.

ಹಾಸನ ಜಿಲ್ಲೆಯ ಕೊಣನೂರು ರಾಮನಾಥಪುರ ನಡುವಿನ ರಸ್ತೆ ಸಂಪರ್ಕ ಸ್ಥಗಿತಗೊಂಡಿತ್ತು

ಹೊಸಪೇಟೆಯಲ್ಲಿ ಭಾರಿ ಮಳೆ: ಸಂಚಾರ ಸ್ಥಗಿತ

ಹೊಸಪೇಟೆ (ವಿಜಯನಗರ): ನಗರದಲ್ಲಿ ಭಾನುವಾರ ಸುರಿದ ಮಳೆಗೆ ನಗರ ವಾಸಿಗಳು ತೊಂದರೆ ಅನುಭವಿಸಿದರು. ಮಧ್ಯಾಹ್ನ 3ರಿಂದ 5ರ ವರೆಗೆ ಎಡೆಬಿಡದೆ ಸುರಿದ ಭಾರಿ ಮಳೆಗೆ ನಗರದ ಬಹುತೇಕ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿದು ರಾತ್ರಿವರೆಗೂ ಸಂಚಾರ ಸ್ಥಗಿತಗೊಂಡಿತ್ತು.

ಬಾಲಕನ ರಕ್ಷಣೆ: ಈಶ್ವರ ನಗರದಲ್ಲಿ ಉಕ್ಕಿ ಹರಿಯುತ್ತಿದ್ದ ಚರಂಡಿಯಲ್ಲಿ ಬಾಲಕನೊಬ್ಬ ಹರಿದು ಹೋಗುತ್ತಿದ್ದುದನ್ನು ಗಮನಿಸಿ ಸ್ಥಳೀಯರು ರಕ್ಷಿಸಿದರು. ಜಲಾವೃತವಾಗಿದ್ದ ಹಂಪಿ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಪಟೇಲ್ ನಗರ, ಸಿದ್ದಲಿಂಗಪ್ಪ ಚೌಕಿ, ರಾಣಿಪೇಟೆಯಲ್ಲಿ ಬುಡಸಮೇತ ಮರಗಳು ನೆಲಕ್ಕುರುಳಿ ರಸ್ತೆ ಮೇಲೆ ಬಿದ್ದದ್ದರಿಂದ ಸಂಚಾರ ಸ್ಥಗಿತಗೊಂಡಿತ್ತು. ನಗರದ ಬಹುತೇಕ ಕಡೆಗಳಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿತ್ತು. ನಿಗದಿತ ಸಮಯಕ್ಕೆ ಬಸ್‌ಗಳು ಸಂಚರಿಸಲು ಸಾಧ್ಯವಾಗಲಿಲ್ಲ. ಜಿಲ್ಲೆಯ ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಕೊಟ್ಟೂರಿನಲ್ಲೂ ಉತ್ತಮ ಮಳೆಯಾಗಿದೆ.

ಮಂಡ್ಯ ಜಿಲ್ಲೆಯ ಭಾರತೀನಗರದ ಮುಟ್ಟನಹಳ್ಳಿ ಬಳಿಯ ಸೂಳೆಕೆರೆ ದಕ್ಷಿಣ ನಾಲೆಯ ಅಕ್ವಾಡಕ್ಟ್ ಕೊಚ್ಚಿ ಹೋಗಿದ್ದು, ಬೆಳೆಗಳು ಜಲಾವೃತವಾಗಿವೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ, ಹನೂರು ತಾಲ್ಲೂಕುಗಳಲ್ಲಿ ಹೆಚ್ಚು ಮಳೆಯಾಗಿದೆ. ಯಳಂದೂರು ತಾಲ್ಲೂಕಿನಲ್ಲಿ ಸುವರ್ಣಾವತಿ ನದಿ ನೀರಿನ ಮಟ್ಟ ಹೆಚ್ಚಾಗಿದ್ದು, ಕೃಷಿ ಜಮೀನುಗಳು ಸತತ ಮೂರನೇ ದಿನವೂ ಮುಳುಗಡೆಯಾಗಿವೆ. ಕೊಳ್ಳೇಗಾಲ ತಾಲ್ಲೂಕಿನ ಅಣಗಳ್ಳಿಯಲ್ಲಿ ಕಬಿನಿ ನಾಲೆ ಒಡೆದು ಭತ್ತದ ಗದ್ದೆಗಳಿಗೆ ನೀರು ನುಗ್ಗಿದೆ.

ಅಷ್ಟತೀರ್ಥ ಭರ್ತಿ: ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯ ಅಷ್ಟತೀರ್ಥಗಳು 25 ವರ್ಷಗಳ ಬಳಿಕ ತುಂಬಿ ತುಳುಕುತ್ತಿವೆ. ಚಾಮರಾಜನಗರ ಜಿಲ್ಲೆಯಹನೂರು ತಾಲ್ಲೂಕಿನಲ್ಲಿ ಉಡುತೊರೆ, ಗುಂಡಾಲ್ ಹಾಗೂ ಮಿಣ್ಣತ್ತಹಳ್ಳ ಜಲಾಶಯಗಳು ಭರ್ತಿಯಾಗಿ ಕೋಡಿ ಬಿದ್ದಿವೆ.

ಕೊಡಗು ಜಿಲ್ಲೆಯ ಗೋಣಿಕೊಪ್ಪಲು ಭಾಗದಲ್ಲಿ ಧಾರಾಕಾರ ಮಳೆಯಾಗಿದೆ. ಸೋಮವಾರಪೇಟೆ ಕಸಬಾ ಹೋಬಳಿಯಲ್ಲಿ 24 ಗಂಟೆಗಳಲ್ಲಿ 6 ಸೆಂ.ಮೀ, ಗಣಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಾತ್ರಿ 9 ಸೆಂ.ಮೀ. ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಜೋಯಿಡಾ, ಸಿದ್ದಾಪುರ, ಮುಂಡಗೋಡ, ಕಾರವಾರದಲ್ಲಿಯೂ ರಭಸದ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್. ಪುರ ಭಾಗದಲ್ಲಿ ಬಿರುಸಾಗಿ ಮಳೆ ಸುರಿದಿದೆ. ಕೊಪ್ಪ ಭಾಗದಲ್ಲಿ ಸಾಧಾರಣ ಹಾಗೂ ಕಳಸ, ಬಾಳೆಹೊನ್ನೂರು ಭಾಗದಲ್ಲಿ ತುಂತುರು ಮಳೆಯಾಗಿದೆ. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕೆಲವೆಡೆ ಸಾಧಾರಣ ಮಳೆಯಾಗಿದೆ.

ಬಹು ಮಾಧ್ಯಮ ಪ್ರಜಾವಾಣಿ 75

www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಯಾರಿಗೆ ಬೇಕಾಗಿದೆ ಯಾತ್ರೆ?

ಭಾಗವಹಿಸುವವರು — ಸಂವಾದ

ಅಶೋಕ ಚಂದರಗಿ, ಅಧ್ಯಕ್ಷ, ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ, ಬೆಳಗಾವಿ

ಪ್ರೀತಿ ನಾಗರಾಜ, ಪತ್ರಕರ್ತೆ, ಲೇಖಕಿ, ಮೈಸೂರು

ಗಂಧರ್ವ ಸೇನ, ಪತ್ರಕರ್ತ, ಬೀದರ್



ಕೆ.ಪಿ. ಶ್ರೀಪಾಲ, ವಕೀಲ, ಸಾಮಾಜಿಕ ಕಾರ್ಯಕರ್ತ, ಶಿವಮೊಗ್ಗ

ಮಧ್ಯಾಹ್ನ 12 ರಿಂದ 1

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. **ಸಂಪಾದಕೀಯ:** ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಒಳನೋಟ — ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ https://bit.ly/3eAYGUE

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.58	39,218	38,511
ಹಾರಂಗಿ	2,859	2,853.60	1,577	849
ಕಬಿನಿ	2,284	2,283.40	6,890	800
ಹೇಮಾವತಿ	2,922	2,922	8,852	8,792
ಲಿಂಗನಮಕ್ಕಿ	1,819	1,814	4,704	4,570
ಸೂಪಾ (ಮೀ)	564	553.73	1,857.45	1,857.54
ಮಾಣಿ	595	589	358	694
ತುಂಗಭದ್ರಾ	1,633	1,632.89	34,879	32,106
ಮಲಪ್ರಭಾ	2079.50	2,079.50	3,394	3,394
ಘಟಪ್ರಭಾ	2,175	2,175	2,842	2,842
ಭದ್ರಾ	186	185	9,331	11,750
ಆಲಮಟ್ಟಿ (ಮೀ)	519.60	519.49	87,427	42,451
ನಾರಾಯಣಪುರ (ಮೀ)	492.25	491.84	100000	1,08,580

* ನೆಲಮಟ್ಟದಿಂದ

ನಾಳೆಯಿಂದ ಹಸ್ತಪ್ರತಿ ಸಮ್ಮೇಳನ

ಪ್ರೊ. ಲಕ್ಷ್ಮಣ್ ತೆಲಗಾವಿ

ಹೊಸಪೇಟೆ (ವಿಜಯನಗರ): ಅಖಿಲ ಕರ್ನಾಟಕ 19ನೇ ಹಸ್ತಪ್ರತಿ ಸಮ್ಮೇಳನ ನಿವೃತ್ತ ಪ್ರಾಧ್ಯಾಪಕ ಲಕ್ಷ್ಮಣ್ ತೆಲಗಾವಿ ಅವರ ಅಧ್ಯಕ್ಷತೆಯಲ್ಲಿ ಅ. 18, 19ರಂದು ಬಾಗಲಕೋಟೆಯಲ್ಲಿ ನಡೆಯಲಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಿಂದ ಹಮ್ಮಿಕೊಂಡಿರುವ ಈ ಕಾರ್ಯಕ್ರಮದಲ್ಲಿ ಬಿ.ಆರ್. ಹಿರೇಮಠ ಅವರ ಸಾಹಿತ್ಯ ಸಂಸ್ಮರಣೆಯೂ ಜರುಗಲಿದೆ. ಬಿ.ಆರ್.ಹಿರೇಮಠ ಅವರ ಜೀವನ ಪಥ, ಹಸ್ತಪ್ರತಿ ಅಧ್ಯಯನ, ಕಾವ್ಯಗಳ ಗ್ರಂಥಸಂಪಾದನೆ, ವಚನ ಸಾಹಿತ್ಯ ಸಂಪಾದನೆ, ಸಾಹಿತ್ಯ ಸಂಶೋಧನೆ, ಶಾಸನ ಸಂಶೋಧನೆ, ಸೃಜನ ಸಾಹಿತ್ಯ, ಸಂಶೋಧನ ಮಾರ್ಗದರ್ಶನ ಕುರಿತು ಚರ್ಚೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ರಾಜ್ಯ ಪೊಲೀಸ್

ಕರ್ನಾಟಕ ರಾಜ್ಯದಲ್ಲಿ ಖಾಲಿ ಇರುವ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) (ಪುರುಷ ಮತ್ತು ಮಹಿಳಾ) & (ತೃತೀಯಲಿಂಗ – ಪುರುಷ & ಮಹಿಳಾ) ಹಾಗೂ ಸೇವಾನಿರತ & ಬ್ಯಾಕ್‌ಲಾಗ್ (ಕಲ್ಯಾಣ ಕರ್ನಾಟಕ– 454 ಹುದ್ದೆಗಳು) (ಮಿಕ್ಕುಳಿದ ವೃಂದ–1137 ಹುದ್ದೆಗಳು) ಒಟ್ಟು–1591 ಹುದ್ದೆಗಳಿಗೆ ಆನ್‌ಲೈನ್ (Online) ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ.

ಅರ್ಜಿ ಸಲ್ಲಿಸುವ ದಿನಾಂಕ: 20.10.2022 ರಿಂದ 21.11.2022.

ಟಿಪ್ಪಣಿ: ಪೊಲೀಸ್ ಇಲಾಖೆಯ ನೇಮಕಾತಿಯು ಸಂಪೂರ್ಣ ಪಾರದರ್ಶಕತೆಯಿಂದ ಕೂಡಿರುತ್ತದೆ. ಇಲಾಖೆಯು ನಿಗದಿಪಡಿಸಿದ ಶುಲ್ಕವನ್ನು ಮಾತ್ರ ಬ್ಯಾಂಕ್ ಮತ್ತು ಅಂಚೆ ಕಛೇರಿಗಳಲ್ಲಿ ಪಾವತಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ https://ksp.karnataka.gov.in/ or https://ksp-recruitment.in/ ನ್ನು ವೀಕ್ಷಿಸುವುದು.

ಸಹಿ/–
ಡಿಜಿಪಿ, ನೇಮಕಾತಿ
DIPR/CP/2617/Zenkar/2022-23

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಅಡ್ಡ ರಸ್ತೆ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ 2ನೇ ಹಂತ, ಬಿ.ಎಂ.ಟಿ.ಸಿ. ಬಸ್ ಡಿಪೋ ಹತ್ತಿರ, ಬೆಂಗಳೂರು–560 038.
ವೆಬ್‌ಸೈಟ್: www.kuidfc.com ಇ-ಮೇಲ್: info@kuidfc.com
ಸಂಖ್ಯೆ:ಕನಮೂಸೌಅಹನಿನಿ/ಆಡಳಿತ/ಸ.ವ್ಯ.ಅ/ವಾಹನ/ಟೆಂಡರ್/ಸಿ.ಆರ್–254/2022–23
ದಿನಾಂಕ.15.10.2022

ಇ-ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿಎಲ್ ಸಂಸ್ಥೆಯಲ್ಲಿ ತಿಂಗಳ ಆಧಾರದಲ್ಲಿ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆಯಲು ಅಧಿಕೃತ ಮಾರಾಟಗಾರರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ವೆಬ್‌ಸೈಟ್ ವಿಳಾಸ: https://eproc.karnataka.gov.in ರಲ್ಲಿ ದಿನಾಂಕ 17.10.2022 ರಿಂದ 16.11.2022 ರ ಸಂಜೆ 5.30 ಗಂಟೆಯ ವರೆಗೆ ಲಭ್ಯವಿರುತ್ತದೆ. ಆಸಕ್ತ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರವೇ ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದೆ. ಇದರ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ತಿಳಿದುಕೊಳ್ಳಬಹುದು.

ಸಹಿ/- ಜಂಟಿ ವ್ಯವಸ್ಥಾಪಕ ನಿರ್ದೇಶಕರು

ಮೈಸೂರು ಅರಮನೆ ಮಂಡಳಿ, ಮೈಸೂರು
Tender No:EO/MPB/DD/AEE/AECS/T.No.02/2022-23
Dated: 14.10.2022

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರು "ಮೈಸೂರು ಅರಮನೆಯ ಒಳ ಮತ್ತು ಹೊರಾವರಣದಲ್ಲಿ ಅಳವಡಿಸಿರುವ ಸಿಸಿಟಿವಿ ಸರ್ವೆಯಲೆನ್ಸ್ ಸಿಸ್ಟಂಗಳ ಸಮಗ್ರ ವಾರ್ಷಿಕ ನಿರ್ವಹಣೆ" ಮಾಡುವ ಕಾಮಗಾರಿಗೆ ಸಂಬಂಧಿಸಿದಂತೆ ನೊಂದಾಯಿತ ಅರ್ಹ ಗುತ್ತಿಗೆದಾರರು/ಏಜೆನ್ಸಿ/ತಯಾರಕರು/ ಸಂಸ್ಥೆಯವರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. 1) ವಿದ್ಯುನ್ಮಾನ (ಇ–ಟೆಂಡರ್) ವ್ಯವಸ್ಥೆ ಮುಖಾಂತರ ಮಾತ್ರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 29.10.2022 ಸಂಜೆ 05.30 ಗಂಟೆಯವರೆಗೆ. 2) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 31.10.2022 ಬೆಳಿಗ್ಗೆ 11.30 ರ ನಂತರ 3) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 02.11.2022 ಬೆಳಿಗ್ಗೆ 11.30ರ ನಂತರ ಅಥವಾ ನಂತರ ದಿನಗಳಲ್ಲಿ ತಿಳಿಸಲಾಗುವುದು. ಹೆಚ್ಚಿನ ವಿವರಗಳಿಗೆ http://www.eproc.karnataka.gov.in ಅಂತರ್‌ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/– ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು
DIPR/DDMYS/MCA/575/2022-23

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಮುಖ್ಯ ಅಭಿಯಂತರರು(ವಿ) ರವರ ಕಛೇರಿ ಕಾ ಮತ್ತು ಪಾ ವಲಯ, ನೆಹರು ನಗರ ಬೆಳಗಾವಿ–590010 Tel : 0831-2950578
E-Mail ID : ceebgm.hescom@gmail.com
Corporate Identity Number(CIN): U31401KA2002SGC030437
No: BGM/CEE/SEE(O)/AEE-1/2022-23/3412-16 Date : 11-10-2022

ಅಲ್ಪಾವಧಿ ಟೆಂಡರ ಪ್ರಕಟಣೆ

ಮುಖ್ಯ ಅಭಿಯಂತರರು(ವಿ), ಕಾ ಮತ್ತು ಪಾ ವಲಯ, ಹು.ವಿ.ಸ.ಕಂ.ನಿ., ಬೆಳಗಾವಿ ಅವರಿಂದ ಈ ಕೆಳಕಂಡ ಕಾಮಗಾರಿಗೆ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

1. ಘಟಪ್ರಭ ವಿಭಾಗದ 110 ಕೆವ್ಹಿ ಹಳ್ಳುರು ವಿದ್ಯುತ್ ಕೇಂದ್ರ ದಲ್ಲಿನ 11 ಕೆವಿ ವಿದ್ಯುತ್ ಮಾರ್ಗಗಳ ಸ್ಥಳಾಂತರ ಕಾಮಗಾರಿ.

ಟೆಂಡರನ್ನು ವಿದ್ಯುನ್ಮಾನ ಟೆಂಡರಿಂಗ್ (ಇ–ಟೆಂಡರ) ಮೂಲಕ ಮಾತ್ರ ಸ್ವೀಕರಿಸಲಾಗುವುದು. ಸದರಿ ಟೆಂಡರಗಳ ಪೂರ್ಣ ವಿವರವನ್ನು ಈ ಕಛೇರಿಯ ದೂರವಾಣಿ ಸಂಖ್ಯೆ 0831–2950578 ಗೆ ಕರೆಮಾಡಿ ಪಡೆಯಬಹುದು.

ಸಹಿ/– ಮುಖ್ಯ ಅಭಿಯಂತರರು(ವಿ), ಕಾ ಮತ್ತು ಪಾ ವಲಯ, ಹು.ವಿ.ಸ.ಕಂ.ನಿ, ಬೆಳಗಾವಿ
ವಾಸಾಸಂಇ/ಧಾ/ಎಂಸಿಎ/665/2022–23

ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪೌರಾಡಳಿತ ನಿರ್ದೇಶನಾಲಯ
9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ|| ಬಿ. ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560001.
ದೂರವಾಣಿ: 080–22867172/22866302 ಫ್ಯಾಕ್ಸ್: 080–22863576 /22861665
ಇ–ಮೇಲ್: sedmatech@gmail.com ವೆಬ್‌ಸೈಟ್: www.municipaladmn.gov.in
ಸಂಖ್ಯೆ: 715496 DMA/TECH/NUM4/3/2022 ದಿನಾಂಕ: 15–10–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4)ರಡಿ ಅನುಷ್ಠಾನಗೊಳಿಸುವ ಕಾಮಗಾರಿಗಳಿಗೆ ಯೋಜನಾ ಸಮಾಲೋಚಕರನ್ನು ನೇಮಕ ಮಾಡಲು ಈಗಾಗಲೇ ಪ್ರೀ ಕ್ವಾಲಿಫೈಡ್ (Pre-Qualification) ಆಧಾರದ ಮೇಲೆ ಆಯ್ಕೆಯಾಗಿರುವ ಯೋಜನಾ ಸಮಾಲೋಚಕರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ರಾಜ್ಯದ 31 ಜಿಲ್ಲೆಗಳಿಗೆ ಪೌರಾಡಳಿತ ನಿರ್ದೇಶನಾಲಯದಿಂದ ಪ್ರೀ ಕ್ವಾಲಿಫೈಡ್ ಆಧಾರದ ಮೇಲೆ ಆಯ್ಕೆಯಾಗಿರುವ ಯೋಜನಾ ಸಮಾಲೋಚಕರು ಮಾತ್ರ ಸದರಿ ಟೆಂಡರ್‌ನಲ್ಲಿ ಭಾಗವಹಿಸುವುದು. ಟೆಂಡರ್‌ನ್ನು QCBS ಆಧಾರದ ಮೇಲೆ ಇ–ಪೋರ್ಟಲ್ ಮುಖಾಂತರ ಉಡುಪಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ 2ನೇ ಕರೆಯ ಟೆಂಡರ್‌ನ್ನು ಪ್ರಚುರಪಡಿಸಲಾಗಿದ್ದು, ಇ–ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೋರಲಾಗಿದೆ. ಯಾವುದೇ ಮಾಹಿತಿಯನ್ನು ಇ–ಪೋರ್ಟಲ್ ಮುಖಾಂತರವೇ ಪಡೆಯುವುದು.

ಸಹಿ/–
ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು
DIPR/CP/2635/Zenkar/2022-23

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಕಾಮಗಾರಿ ವಿವರ	ಕಾಮಗಾರಿಗಿಟ್ಟ ಮೊತ್ತ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
	ಮುಖ್ಯ ಅಭಿಯಂತರರ ಕಚೇರಿ (ವಿನ್ಯಾಸ & ಗುಆ), 9ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009		
	ಐಎಫ್‌ಟಿ ಸಂಖ್ಯೆ : ಬೆಂಜಮಂ/ಸಿಇಡಿಟಿಇ/ಅಮುಅ(ಎಂಐಎಸ್)/ತಾಂಸ(ವಿ&ಗುಆ)/896/2022–23 ದಿನಾಂಕ:14.10.2022		
1	ಬೆಂಗಳೂರು ಜಲ ಮಂಡಳಿಯ ಕಚೇರಿಗಳಲ್ಲಿ ಸ್ಪಾಟ್ ಬಿಲ್ಲಿಂಗ್ ಪ್ರಿಂಟರ್‌ಗಳೊಂದಿಗೆ ಹ್ಯಾಂಡ್ ಹೆಲ್ಡ್ ಟರ್ಮಿನಲ್‌ಗಳ ನೇಮಕ. (3 ನೇ ಕರೆ).	ರೂ. 7.37 ಕೋಟಿಗಳು	ರೂ. 11.05 ಲಕ್ಷಗಳು
	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 15.11.2022 ರ ಸಂಜೆ 4.00 ಗಂಟೆಯವರೆಗೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 17.11.2022 ರ ಮಧ್ಯಾಹ್ನ 12.00 ಗಂಟೆಗೆ. ಸಹಿ/– ಮುಖ್ಯ ಅಭಿಯಂತರರು(ವಿನ್ಯಾಸ & ಗುಣ ಆಶ್ವಾಸನೆ)		
	ಮುಖ್ಯ ಅಭಿಯಂತರರ ಕಚೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009		
	ಐಎಫ್‌ಟಿ ಸಂಖ್ಯೆ : ಬೆಂಜಮಂ/ಮುಅ(ಯೋ)/ಅಮುಅ(ಕೇಂಉ&ಡಿಸಿಡಬ್ಲ್ಯೂ)/813/2022–23 ದಿನಾಂಕ:15.10.2022		
2	ಅರ್ಕಾವತಿ ಬಿಡಿಎ ಬಡಾವಣೆಯ 1ನೇ ಘಟ್ಟಕ್ಕೆ ನೀರು ಸರಬರಾಜು ಸೌಲಭ್ಯಗಳನ್ನು ಒದಗಿಸುವುದು.	ರೂ. 66,81,00,000/–	ರೂ. 66,81,000/–
	ಐಎಫ್‌ಟಿ ಸಂಖ್ಯೆ : ಬೆಂಜಮಂ/ಮುಅ(ಯೋ)/ಅಮುಅ(ಕೇಂಉ&ಡಿಸಿಡಬ್ಲ್ಯೂ)/814/2022–23 ದಿನಾಂಕ:15.10.2022		
3	ಅರ್ಕಾವತಿ ಬಿಡಿಎ ಬಡಾವಣೆಯ 1ನೇ ಘಟ್ಟಕ್ಕೆ ಯುಜಿಡಿ ಸೌಲಭ್ಯಗಳನ್ನು ಒದಗಿಸುವುದು.	ರೂ. 75,41,00,000/–	ರೂ. 75,41,000/–
	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 17.11.2022 ರ ಸಂಜೆ 4.00 ಗಂಟೆಯವರೆಗೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 19.11.2022 ರ ಸಂಜೆ 4.30 ಗಂಟೆಗೆ. ಸಹಿ/– ಮುಖ್ಯ ಅಭಿಯಂತರರು(ಯೋಜನೆ)		

ಟೆಂಡರ್ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು https://eproc.karnataka.gov.in ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.
ವಾಸಾಸಂಇ/ವಾಪ್ರ/ಜಿಎ/2626/2022–23

ಎಲ್‌ಐಸಿ ಎಚ್‌ಎಫ್‌ಎಲ್ ವಿದ್ಯಾದಾನ್ ಸ್ಕಾಲರ್‌ಶಿಪ್ 2022

ವಿದ್ಯಾರ್ಥಿ ವೇತನ ಕೈಪಿಡಿ

ಆರ್ಥಿಕ ಸಹಾಯ ₹ 20,000ದ ವರೆಗೆ

ಅರ್ಜಿ ಸಲ್ಲಿಸಲು ಕೊನೆಯ ದಿನ 31-10-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಇದು ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾಗುವುದಕ್ಕಾಗಿ ರೂಪಿಸಲಾಗಿರುವ ಸ್ಕಾಲರ್‌ಶಿಪ್ ಪ್ರೋಗ್ರಾಂ. ಈ ವಿದ್ಯಾರ್ಥಿವೇತನವು ಸಂಕಷ್ಟದಲ್ಲಿರುವ ಮತ್ತು ಕಡಿಮೆ ಆದಾಯಗಳಿಸುವ ಕುಟುಂಬಗಳ ವಿದ್ಯಾರ್ಥಿಗಳಿಗೆ ಮೀಸಲಾಗಿದೆ.

ಅರ್ಹತೆ: ಮೊದಲ ವರ್ಷದ ಪದವಿ ಮತ್ತು ಸ್ನಾತಕೋತ್ತರ ಪದವಿ ಓದುತ್ತಿರುವವರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ತಮ್ಮ ಹಿಂದಿನ ವರ್ಷದ ಪರೀಕ್ಷೆಯಲ್ಲಿ ಶೇ60ಕ್ಕಿಂತ ಹೆಚ್ಚು ಅಂಕ ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ₹3.6ಲಕ್ಷ ಮೀರಿರಬಾರದು. **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/LHVP2

ಅಂಕಪಟ್ಟಿ ಇದ್ದರೆ ಅಷ್ಟೇ ಸಾಕೆ?

ಉದ್ಯೋಗವನ್ನು ಯಶಸ್ವಿಯಾಗಿ ನಿಭಾಯಿಸಿಕೊಂಡು ಹೋಗಬೇಕಾದರೆ ಶೈಕ್ಷಣಿಕ ವಿದ್ಯಾರ್ಹತೆಗಿಂತ ಹೊರತಾದ ಅನೇಕ ಗುಣಗಳು ಬೇಕೇ ಬೇಕು. ಸಂವಹನ ಕೌಶಲ, ಹೊಂದಾಣಿಕೆಯ ಪ್ರವೃತ್ತಿ, ಸಮಯ ನಿರ್ವಹಣೆ, ಸಂಘಟನಾ ಕೌಶಲ, ತಂತ್ರಜ್ಞಾನದ ಸದುಪಯೋಗ, ವ್ಯಕ್ತಿತ್ವ ಕೌಶಲಗಳು, ನಾಯಕತ್ವ- ಹೀಗೆ ಹತ್ತಾರು ಇವೆ.

ಸಿಬಂತಿ ಪದ್ಮನಾಭ ಕೆ. ವಿ.

ಅಂಕಪಟ್ಟಿ ನೋಡಿ ಉದ್ಯೋಗ ಕೊಡುವ ಪ್ರವೃತ್ತಿ ಹೋಗಿ ಬಹಳ ಕಾಲವೇ ಆಯಿತು. ಕೆಲವೇ ಕೆಲವು ಸರ್ಕಾರಿ ಉದ್ಯೋಗಗಳಿಗೆ ಮಾತ್ರ ಇನ್ನೂ ಪಿಯುಸಿ ಅಥವಾ ಪದವಿ ಅಂಕಗಳನ್ನು ನೋಡಿ ಮೆರಿಟ್‌ಲಿಸ್ಟ್ ತಯಾರಿಸುವ ಪದ್ಧತಿಯಿದೆ. ಉಳಿದಂತೆ ಉದ್ಯೋಗದಾತರಿಗೆ ಅಭ್ಯರ್ಥಿಗಳ ಅಂಕಗಳಿಸುವ ತಾಕತ್ತು ಬೇಕಾಗಿಲ್ಲ. ಅವರಿಗೆ ಬೇಕಾಗಿರುವುದು ಸಂಬಳಕ್ಕೆ ಪ್ರತಿಯಾಗಿ ಇವರು ಏನನ್ನು ನೀಡಬಲ್ಲರು ಎಂಬ ಪ್ರಶ್ನೆಗೆ ಉತ್ತರ ಮಾತ್ರ. ಈ ನಿರೀಕ್ಷೆಯನ್ನು 'ಉದ್ಯೋಗಾರ್ಹತೆ' ಎಂದೋ, 'ಉದ್ಯೋಗಾರ್ಹತೆಯ ಕೌಶಲಗಳು' ಎಂದೋ ಕರೆಯಬಹುದು.

ಅಂಕಪಟ್ಟಿ ತೋರಿಸುವ ಪರ್ಸೆಂಟೇಜು ಅರ್ಹ ಅಭ್ಯರ್ಥಿಗಳ ಪಟ್ಟಿ ತಯಾರಿಸುವ ಅನೇಕ ಮಾನದಂಡಗಳಲ್ಲಿ ಒಂದಷ್ಟೇ. ಬಹುತೇಕ ಆಯ್ಕೆ ಪ್ರಕ್ರಿಯೆಗಳಲ್ಲಿ ಸಂದರ್ಶನವೇ ಪ್ರಧಾನ ಭಾಗ. ನಾಗರಿಕ ಸೇವಾ ಪರೀಕ್ಷೆಗಳಲ್ಲಂತೂ ಸಂದರ್ಶನ ಎಂಬ ಪದವನ್ನೂ ಬಳಸುವುದಿಲ್ಲ. ಅವರು ಅದನ್ನು 'ವ್ಯಕ್ತಿತ್ವ ಪರೀಕ್ಷೆ' ಎಂದು ಕರೆಯುತ್ತಾರೆ.

ಈ ವ್ಯಕ್ತಿತ್ವ ಮಾಪನ ಪ್ರಕ್ರಿಯೆಯಲ್ಲಿ ಅವರು ಹುಡುಕುವುದು ಅಭ್ಯರ್ಥಿಯ ಉದ್ಯೋಗಾರ್ಹತೆಯನ್ನೇ. ಯಾವುದೇ ಉದ್ಯೋಗವನ್ನು ಯಶಸ್ವಿಯಾಗಿ ನಿಭಾಯಿಸಿಕೊಂಡು ಹೋಗಬೇಕಾದರೆ ಶೈಕ್ಷಣಿಕ ವಿದ್ಯಾರ್ಹತೆಗಿಂತ ಹೊರತಾದ ಅನೇಕ ಗುಣಗಳು ಬೇಕೇಬೇಕು. ಸಂವಹನ ಕೌಶಲ, ಹೊಂದಾಣಿಕೆಯ ಪ್ರವೃತ್ತಿ, ಸಮಸ್ಯೆ ಬಗೆಹರಿಸುವಿಕೆ, ಸಮಯ ನಿರ್ವಹಣೆ, ತಂಡ ಮನೋಭಾವ, ಸಂಘಟನಾ ಕೌಶಲ, ಲಭ್ಯ ಮಾಹಿತಿಯ ಬಳಕೆ, ತಂತ್ರಜ್ಞಾನದ ಸದುಪಯೋಗ, ವ್ಯಕ್ತಿತ್ವ ಕೌಶಲಗಳು, ನಾಯಕತ್ವ- ಹೀಗೆ ಹತ್ತಾರು ಇವೆ. ಇವುಗಳಲ್ಲಿ ಕೆಲವು ಆಯಾ ಉದ್ಯೋಗವನ್ನು ನಿರ್ವಹಿಸಲು ಪ್ರಾಥಮಿಕ ಅವಶ್ಯಕತೆಗಳಾದರೆ, ಇನ್ನು ಕೆಲವು ಅದರಲ್ಲಿ ಕ್ಷಮತೆಯನ್ನು ಸಾಧಿಸಲು ಅನಿವಾರ್ಯ.

ಉದ್ಯೋಗಾರ್ಹತೆಯ ಕೌಶಲಗಳು:

ಯಾವುದೇ ಉದ್ಯೋಗದಲ್ಲಿರುವವರಿಗೆ ಪ್ರತಿದಿನ ಒಂದಲ್ಲ ಒಂದು ಸವಾಲು ಎದುರಾಗಿಯೇ ಆಗುತ್ತದೆ ಸಣ್ಣ ಹುದ್ದೆಗಳಲ್ಲಿರುವವರಿಗೆ ಅವರ ಜವಾಬ್ದಾರಿ ನಿರ್ವಹಿಸುವಲ್ಲಿ ಸವಾಲುಗಳಾದರೆ, ದೊಡ್ಡ ಹುದ್ದೆಗಳಲ್ಲಿರುವವರಿಗೆ ಸಂಸ್ಥೆಯನ್ನೇ ಮುಂದಕ್ಕೆ ಒಯ್ಯುವಲ್ಲಿ ಸವಾಲುಗಳಿರುತ್ತವೆ. ಅವುಗಳು ಎದುರಾದ ತಕ್ಷಣ ಎದೆಗುಂದುವ ಬದಲು, ಅವುಗಳನ್ನು ಅಲ್ಲಲ್ಲಿಯೇ ವಿಶ್ಲೇಷಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವುದು, ಅಗತ್ಯ ನಿರ್ಧಾರಗಳನ್ನು ಕೈಗೊಳ್ಳುವುದು ನಿಜಕ್ಕೂ ಒಂದು ಕೌಶಲವೇ. ಸಂವಹನ ಕೌಶಲವಂತೂ ಒಂದು ಅತಿಪ್ರಮುಖ ಅರ್ಹತೆ. ಹೇಳಬೇಕಾದುದನ್ನು ಗೊಂದಲವಿಲ್ಲದಂತೆ ಸ್ಪಷ್ಟವಾಗಿ ಇನ್ನೊಬ್ಬರಿಗೆ ಹೇಳುವುದೊಂದು ದೊಡ್ಡ ಕಲೆ. ಅನೇಕ ಸಲ ಇದನ್ನೇ ಸರಿಯಾಗಿ ಮಾಡದೆ ಎಡವಟ್ಟುಗಳನ್ನು ಮಾಡಿಕೊಂಡುಬಿಡುತ್ತೇವೆ.

ಸಂವಹನವೆಂದ ಮೇಲೆ ಅದು ಬರವಣಿಗೆ ಮತ್ತು ಮಾತು ಎರಡನ್ನೂ ಒಳಗೊಂಡಿದೆ. ಕೆಲವು ಉದ್ಯೋಗಗಳಲ್ಲಿ ಬರವಣಿಗೆ ಮುಖ್ಯವಾದರೆ ಕೆಲವದರಲ್ಲಿ ಮಾತು ಮುಖ್ಯವಾಗುವುದೂ ಇದೆ ಸರಿಯಾದ ಮಾತೊಂದರಿಂದ ಯುದ್ಧವನ್ನೇ ತಪ್ಪಿಸಬಹುದಂತೆ, ಇನ್ನು ಉದ್ಯೋಗದಲ್ಲಿ ಯಶಸ್ಸು ಕಾಣಲಾಗದೇ? ಬಹುತೇಕ ಕೆಲಸಗಳನ್ನು ತಂಡಗಳಲ್ಲಿ ನಿರ್ವಹಿಸಬೇಕಾಗುತ್ತದೆ. ಒಬ್ಬಂಟಿಯಾಗಿ ಮಾಡುವ ಕೆಲಸಗಳು ಅಪರೂಪ. ಕಾರ್ಪೊರೇಟ್ ಯುಗದಲ್ಲಂತೂ ಟೀಂವರ್ಕ್ ಒಂದು ಮಹಾಮಂತ್ರ. ನಾವು ಕೆಲಸ ಮಾಡುವ ಕಂಪೆನಿಗಳಲ್ಲಿ ವಿವಿಧ ವಯೋಮಾನದ, ಸಾಮಾಜಿಕ ಹಿನ್ನೆಲೆಯ, ಭಿನ್ನ ರಾಜಕೀಯ ನಿಲುವುಗಳ ಸಹೋದ್ಯೋಗಿಗಳಿರುತ್ತಾರೆ. ಉದ್ಯೋಗದ ವೇಳೆ ಇವು ಯಾವುವೂ ಅಡ್ಡಿಯಾಗದಂತೆ ನೋಡಿಕೊಳ್ಳುವುದೊಂದು ಪ್ರಮುಖ ಕೌಶಲ. ಸಣ್ಣಪುಟ್ಟ ಅಡಚಣೆಗಳನ್ನು ನಿರ್ಲಕ್ಷಿಸಿ ಪರಸ್ಪರ ಹೊಂದಾಣಿಕೆಯಿಂದ ಕೆಲಸ ಮಾಡುವುದೇ ಇಲ್ಲಿ ಮುಖ್ಯ. ಯೋಜನೆ ಮತ್ತು ಸಂಘಟನೆ ಉದ್ಯೋಗ ಜಗತ್ತು ಬಯಸುವ ಇನ್ನೊಂದು ವಿಶಿಷ್ಟ ಕೌಶಲ.

ಸಂಘಟನಾ ಕಲೆ ಎಲ್ಲರಿಗೂ ಒಲಿಯುವುದು ಕಷ್ಟವಾದರೂ, ಯಾವುದೇ ಉದ್ಯೋಗ ಕೈಗೊಂಡವರಿಗೆ ಅದರ ಪ್ರಾಥಮಿಕ ತಿಳುವಳಿಕೆಯಾದರೂ ಬೇಕಾಗುತ್ತದೆ. ಆಗಬೇಕಿರುವ ಕೆಲಸಗಳನ್ನು ಹೇಗೆ ವಿಭಾಗಿಸಿಕೊಳ್ಳಬೇಕು, ಯಾರಿಗೆ ಯಾವ ಹೊಣೆಗಾರಿಕೆಗಳನ್ನು ಹಂಚಬೇಕು, ಎಷ್ಟು ಸಮಯದೊಳಗೆ ಅವುಗಳನ್ನು ಪೂರೈಸುವಂತೆ ನೋಡಿಕೊಳ್ಳಬೇಕು, ಸಂಪನ್ಮೂಲಗಳನ್ನು ಹೇಗೆ ಒಟ್ಟು ಮಾಡಬೇಕು- ಇತ್ಯಾದಿಗಳನ್ನು ಅರಿತವರು ಉತ್ತಮ ಸಂಘಟಕರಾಗುತ್ತಾರೆ.

ಸಮಯ ನಿರ್ವಹಣೆ

ಎಲ್ಲರೂ ರೂಢಿಸಿಕೊಳ್ಳಬೇಕೆಂದು ಬಯಸುವ ಆದರೆ ಬಹುತೇಕರು ವಿಫಲವಾಗುವ ಒಂದು ವಿಚಾರವೆಂದರೆ ಸಮಯ ನಿರ್ವಹಣೆ.

ಯಾವುದೇ ವೃತ್ತಿಯ ಯಶಸ್ಸಿನಲ್ಲಿ ಸಮಯ ನಿರ್ವಹಣೆಯ ಪಾತ್ರ ಬಲು ಪ್ರಮುಖ. ನಿರ್ದಿಷ್ಟ ಕೆಲಸವೊಂದು ನಿಗದಿತ ಸಮಯದಲ್ಲಿ ಆಗದೇಹೋದರೆ ಕಂಪನಿಯ ನಿರ್ಣಾಯಕ ಯೋಜನೆಯೊಂದು ಕೈತಪ್ಪಿಹೋಗಬಹುದು. ನಾವು ಹತ್ತಬೇಕಾದ ಬಸ್ಸೋ ರೈಲೋ ತಪ್ಪಿಹೋದರೆ ಎಷ್ಟೊಂದು ಸಮಸ್ಯೆಯಾಗುತ್ತದೆ; ಇನ್ನು ಯೋಜನೆಯೇ ತಪ್ಪಿಹೋದರೆ ಆಗುವ ನಷ್ಟ ಎಷ್ಟು ದೊಡ್ಡದು

ಸಮಯ ನಿರ್ವಹಣೆಯಲ್ಲಿ ನಾವು ಯಶಸ್ವಿಯಾದರೆ ಅರ್ಧ ಉದ್ಯೋಗಜೀವನವೇ ಯಶಸ್ವಿಯಾದಂತೆ. ಹೊಸತನ್ನು ಕಲಿಯುವುದು, ಅಗತ್ಯ ಮಾಹಿತಿಯನ್ನು ಕಲೆಹಾಕುವುದು, ಲಭ್ಯವಿರುವ ಮಾಹಿತಿಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುವುದು, ತಂತ್ರಜ್ಞಾನವನ್ನು ಬಳಸುವ ಪ್ರಾಥಮಿಕ ತಿಳಿವಳಿಕೆ ಹೊಂದಿರುವುದು ಇಂದು ಯಾವುದೇ ಉದ್ಯೋಗಕ್ಕೆ ಅಗತ್ಯ. ಕೆಲವು ವರ್ಷಗಳ ಹಿಂದೆ ಕಂಪ್ಯೂ ಟರ್ ಜ್ಞಾನ ಅನಿವಾರ್ಯವೇನೂ ಇರಲಿಲ್ಲ. ಇಂದು ಸಾಮಾನ್ಯ ವೃತ್ತಿಯೊಂದನ್ನು ನಿಭಾಯಿಸಬೇಕೆಂದರೂ ತಂತ್ರಜ್ಞಾನದ ಪ್ರಾಥಮಿಕ ತಿಳುವಳಿಕೆ ಅನಿವಾರ್ಯ. ಆಯ್ದುಕೊಂಡ ವೃತ್ತಿಯಲ್ಲಿ ದಿನೇದಿನೇ ಪರಿಣತಿಯನ್ನು ಸಾಧಿಸುವುದು, ಆತ್ಮವಿಶ್ವಾಸ ಬತ್ತದಂತೆ ನೋಡಿಕೊಳ್ಳುವುದು, ಸೃಜನಶೀಲತೆಯನ್ನು ರೂಢಿಸಿಕೊಳ್ಳುವುದು ಕೂಡ ಉದ್ಯೋಗಾರ್ಹತೆಯ ಕೌಶಲವೆನಿಸಿದೆ. ಇವೆಲ್ಲಕ್ಕೂ ಕಿರೀಟಪ್ರಾಯವಾಗಿರುವುದು ಹೊಸತನಕ್ಕೆ ಉಪಕ್ರಮಿಸುವ ಮನೋಭಾವ ಮತ್ತು ನಾಯಕತ್ವದ ಗುಣ. ಇನ್ನೊಬ್ಬರನ್ನು ಮುನ್ನಡೆಸುವ ಗುಣ ಹೊಂದಿರುವವನು ತನ್ನ ಹುದ್ದೆಯಲ್ಲಿ ಉನ್ನತಿಗೇರುತ್ತಾನೆ.

ಇವೆಲ್ಲ ಆಧುನಿಕ ಉದ್ಯೋಗ ಜಗತ್ತು ಅಭ್ಯರ್ಥಿಗಳಿಂದ ಬಯಸುವ ಪ್ರಮುಖ ಕೌಶಲಗಳು. ನಮ್ಮ ಶೈಕ್ಷಣಿಕ ಅರ್ಹತೆಯ ಹಿಂದೆ ವರ್ಷಗಳ ಶ್ರಮ, ಸಾವಿರಾರು ರುಪಾಯಿಗಳ ಖರ್ಚು ಇರುತ್ತದೆ. ಅಚ್ಚರಿಯೆಂದರೆ ಇದರಾಚೆಗಿರುವ ಉದ್ಯೋಗ ಕೌಶಲಗಳಲ್ಲಿ ಹೆಚ್ಚಿನವೂ ಯಾವುದೇ ಖರ್ಚಿಲ್ಲದೆ ನಮ್ಮಷ್ಟಕ್ಕೆ ನಾವೇ ರೂಢಿಸಿಕೊಳ್ಳುವಂಥವು. ಅಂದಮೇಲೆ ಶಿಕ್ಷಣದ ಜತೆಜತೆಗೇ ಅವುಗಳನ್ನು ಪಡೆಯುವಲ್ಲಿ ಉದಾಸೀನ ಸಲ್ಲದು. ನೂರಕ್ಕೆ ನೂರು ಅಂಕ ಗಳಿಸಿದ ಅಭ್ಯರ್ಥಿ ತಾನೇ ಮಾರುಕಟ್ಟೆಗೆ ಹೋಗಿ ಆ ದಿನಕ್ಕೆ ಬೇಕಾದ ದಿನಸಿ ಸಾಮಗ್ರಿ ತಾರದೇ ಹೋದರೆ ಮನೆಮಂದಿಯೇ ಆತನನ್ನು/ಆಕೆಯನ್ನು ಜಾಣ/ಜಾಣೆ ಎಂದು ಒಪ್ಪುವುದಿಲ್ಲ. ಇನ್ನು ಪ್ರತಿ ತಿಂಗಳೂ ಸಂಬಳ ಕೊಡುವ ಉದ್ಯೋಗದಾತ ಅಂಕಪಟ್ಟಿ ತೋರಿಸುವ ಪರ್ಸೆಂಟೇಜಿಗಿಂತ ಹೊರತಾದ ಅಗತ್ಯ ಕೌಶಲಗಳನ್ನು ಬಯಸುವುದರಲ್ಲಿ ಏನು ಅತಿಶಯ ಅಲ್ಲವೇ?

(ಲೇಖಕರು ಸಹಾಯಕ ಪ್ರಾಧ್ಯಾಪಕ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ತುಮಕೂರು ವಿಶ್ವವಿದ್ಯಾಲಯ)

ಪಿ.ಎಚ್‌ಡಿ ಕೋರ್ಸ್ ಎಷ್ಟು ವರ್ಷ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾಲ್ಕು ವರ್ಷದ ಪದವಿಯ ನಂತರ ಎಂಎ ಮತ್ತು ಪಿಎಚ್‌ಡಿ ಕೋರ್ಸುಗಳು ಎಷ್ಟು ವರ್ಷ ಇರುತ್ತವೆ?

ಹೆಸರು, ಊರು ತಿಳಿಸಿಲ್ಲ.

ನಾಲ್ಕು ವರ್ಷದ ಪದವಿಯನ್ನು ಮಾಡಿದ ಬಳಿಕ ಎಂಎ ಒಂದು ವರ್ಷದ್ದಾಗಿರುತ್ತದೆ. ಪದವಿ ಕೋರ್ಸಿನ 4ನೇ ವರ್ಷ ಸಂಶೋಧನೆಗೆ ಮೀಸಲಾಗಿರುತ್ತದೆ ಹಾಗೂ ಪದವಿಯ ನಂತರ ನೇರವಾಗಿ ಪಿಎಚ್‌ಡಿ ಮಾಡಲು ಅರ್ಹತೆಯಿರುತ್ತದೆ. ಪಿಎಚ್‌ಡಿ ಮಾಡಲು 3-5 ವರ್ಷ ಬೇಕಾಗಬಹುದು.

2. ನಾನು ಪಿಯುಸಿ (ವಿಜ್ಞಾನ) ಮಾಡಿ ಈಗ ಸ್ಪರ್ಧಾತ್ಮಕ ಪರೀಕ್ಷೆಗೆಂದು ಬಿಎ ಪದವಿ ಮಾಡುತ್ತಿದ್ದೇನೆ. ಮೊದಲನೇ ವರ್ಷ ಮುಗಿದಿದೆ. ಈಗ ನಮ್ಮ ತಂದೆ ಹಿರಿಯೊಬ್ಬರ ಸಲಹೆ ಕೇಳಿ, ನನಗೆ ಪುನಃ ಬಿ.ಎಸ್ಸಿಗೆ ಸೇರುವಂತೆ ಹೇಳುತ್ತಿದ್ದಾರೆ. ಈಗ, ಯಾವುದಕ್ಕೆ ಪ್ರವೇಶ ಪಡೆಯಲಿ ಅಂತ ಗೊಂದಲವಾಗಿದೆ. ಸಲಹೆ ನೀಡಿ

ಹೆಸರು, ಊರು ತಿಳಿಸಿಲ್ಲ.

ನೀವು ಈಗಾಗಲೇ ಬಿಎ ಮೊದಲ ವರ್ಷ ಮುಗಿಸಿದ್ದೀರಿ. ನಿಮ್ಮ ಗುರಿ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ವೃತ್ತಿಯನ್ನು ಅರಸಬೇಕೆನ್ನುವುದಾದರೆ ಬಿಎ ಪದವಿಯನ್ನು ಮುಗಿಸುವುದು ಸೂಕ್ತ.

3. ನಾನು ಕನ್ನಡ ಮಾಧ್ಯಮದಲ್ಲಿ 10ನೇ ತರಗತಿ ಮುಗಿಸಿ ಪಿಯುಸಿ (ಪಿಸಿಎಂಬಿ) ಮಾಡುತ್ತಿದ್ದೇನೆ. 3 ತಿಂಗಳಾದರೂ ವಿಷಯ ಕಠಿಣ ಆಗುತ್ತಿದೆ. ಯಾವ ರೀತಿ ಓದಬೇಕೆಂದು ತಿಳಿಯುತ್ತಿಲ್ಲ. ವ್ಯಾಸಂಗದಲ್ಲಿ ಹಿಂದೆ ಉಳಿಯುತ್ತಿದ್ದೇನೆ. ವಿದ್ಯಾಭ್ಯಾಸ ದಲ್ಲಿ ಪ್ರಗತಿಯನ್ನು ಕಾಣುವುದು ಹೇಗೆ?

ಹೆಸರು, ಊರು ತಿಳಿಸಿಲ್ಲ.

ಪಿಯುಸಿ ಇಂಗ್ಲಿಷ್ ಮಾಧ್ಯಮದಲ್ಲಿರುವುದರಿಂದ ನಿಮಗೆ ಕಷ್ಟವಾಗುತ್ತಿದ್ದಲ್ಲಿ, ಇಂಗ್ಲಿಷ್ ಭಾಷೆಯ ಪರಿಣತಿ ಗಳಿಸಲು ಇದೇ ತಿಂಗಳ(ಅಕ್ಟೋಬರ್) 3ನೇ ತಾರೀಖಿನ ಪ್ರಶ್ನೋತ್ತರದಲ್ಲಿರುವ ಸಲಹೆಗಳನ್ನು ಅನುಸರಿಸಿ. ಆದರೆ ಭಾಷೆಯ ಸಮಸ್ಯೆಯಿಲ್ಲದೆ, ಉಪನ್ಯಾಸಗಳು ಅರ್ಥವಾಗದಿದ್ದಲ್ಲಿ ಈ ಸಲಹೆಗಳನ್ನು ಗಮನಿಸಿ:

- ತರಗತಿಯಲ್ಲಿ ಬೋಧಿಸುವ ವಿಷಯ ಅರ್ಥವಾಗದಿದ್ದರೆ ಸಂಕೋಚವಿಲ್ಲದೆ ಪ್ರಶ್ನೆಗಳನ್ನು ಕೇಳಬೇಕು. ಏಕೆಂದರೆ, ಪ್ರಶ್ನೆಗಳನ್ನು ಕೇಳುವುದರಿಂದ ವಿಮರ್ಶಾತ್ಮಕ ಚಿಂತನಾ ಕೌಶಲಗಳ ಅಭಿವೃದ್ಧಿಯ ಜೊತೆಗೆ, ವಿಷಯದ ಬಗ್ಗೆ ಒಳನೋಟಗಳು ಲಭಿಸಿ ಕಲಿಕೆ ಪರಿಣಾಮಕಾರಿಯಾಗುತ್ತದೆ.
- ತರಗತಿಯಲ್ಲಿ ಪರಿಣಾಮಕಾರಿಯಾಗಿ ಟಿಪ್ಪಣಿ (ನೋಟ್ಸ್) ಬರೆಯುವುದರಿಂದ ಕಲಿಕೆಯ ಸಾಮರ್ಥ್ಯ ಹೆಚ್ಚುತ್ತದೆ ಮತ್ತು ಆತ್ಮವಿಶ್ವಾಸ ಬೆಳೆಯುತ್ತದೆ.
- ಪರಿಣಾಮಕಾರಿ ಓದುವಿಕೆಯ ಕಲೆಯನ್ನು ಎಸ್‌ಕ್ಯು3ಆರ್ ನಂಥ ತಂತ್ರಗಾರಿಕೆಯ ಮೂಲಕ ರೂಢಿಸಿಕೊಳ್ಳಿ. ಇದರಿಂದ, ಜ್ಞಾಪಕ ಶಕ್ತಿಯೂ ವೃದ್ಧಿಸುತ್ತದೆ.

ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=3PzmKRaJHmk

4. ನಾಲ್ಕು ವರ್ಷದ ಪದವಿಯ ನಂತರ ಎಂಎ ಮತ್ತು ಪಿಎಚ್‌ಡಿ ಕೋರ್ಸುಗಳು ಎಷ್ಟು ವರ್ಷ ಇರುತ್ತವೆ?

ಹೆಸರು, ಊರು ತಿಳಿಸಿಲ್ಲ.

ನಾಲ್ಕು ವರ್ಷದ ಪದವಿಯನ್ನು ಮಾಡಿದ ಬಳಿಕ ಎಂಎ ಒಂದು ವರ್ಷದ್ದಾಗಿರುತ್ತದೆ. ಪದವಿ ಕೋರ್ಸಿನ 4ನೇ ವರ್ಷ ಸಂಶೋಧನೆಗೆ ಮೀಸಲಾಗಿರುತ್ತದೆ ಹಾಗೂ ಪದವಿಯ ನಂತರ ನೇರವಾಗಿ ಪಿಎಚ್‌ಡಿ ಮಾಡಲು ಅರ್ಹತೆಯಿರುತ್ತದೆ. ಪಿಎಚ್‌ಡಿ ಮಾಡಲು 3-5 ವರ್ಷ ಬೇಕಾಗಬಹುದು.

ಮತ್ತಷ್ಟು ಪ್ರಶ್ನೋತ್ತರಕ್ಕಾಗಿ www.prajavani.net/education **ಜಾಲತಾಣಕ್ಕೆ ಭೇಟಿ ನೀಡಿ.**

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಸರಣಿ 5

ಹಿಂದಿನ ನಾಲ್ಕು ಸಂಚಿಕೆಗಳಲ್ಲಿ ಜವಾಹರ ನವೋದಯ ವಿದ್ಯಾಲಯಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿತ್ತು. 6ನೆಯ ತರಗತಿಯ ಪ್ರವೇಶ ಪರೀಕ್ಷೆಯ 'ಮಾನಸಿಕ ಸಾಮರ್ಥ್ಯ' ಪರೀಕ್ಷೆಯ ಪ್ರಶ್ನೆ ಪತ್ರಿಕೆಯ 10 ವಿಭಾಗಗಳಲ್ಲಿ 7 ವಿಭಾಗಗಳ ಕೆಲವು ಮಾದರಿಗಳನ್ನು ತಿಳಿಸಲಾಗಿತ್ತು. ಉಳಿದ ಮೂರು ಭಾಗಗಳ ಪ್ರಶ್ನೋತ್ತರ ಮಾದರಿ ಇಲ್ಲಿವೆ.

'ನವೋದಯ' ಪ್ರವೇಶ ಪರೀಕ್ಷೆ

ಮಾನಸಿಕ ಸಾಮರ್ಥ್ಯ ಪರೀಕ್ಷೆಯ ಮಾದರಿ ಪ್ರಶ್ನೋತ್ತರಗಳು

ವೆಂಕಟಸುಬ್ಬರಾವ್

ಭಾಗ 8

ಇಲ್ಲಿನ ಎಡಭಾಗದಲ್ಲಿ ಪ್ರಶ್ನೆರೂಪದ ಕಾಗದದ ಆಕೃತಿಗಳ ತುಂಡನ್ನು ಮಡಚಿ ಚಿತ್ರಿಸಿದ್ದಾರೆ. ಬಲಭಾಗದಲ್ಲಿ ಉತ್ತರ ರೂಪದ A B C D ಆಯ್ಕೆಗಳಿವೆ. ಎಡಭಾಗದಲ್ಲಿ ಕೊಟ್ಟಿರುವ ಕಾಗದದ ತುಂಡನ್ನು ಬಿಡಿಸಿದಾಗ ಹೇಗೆ ಕಾಣುತ್ತದೆ ಎನ್ನುವುದನ್ನು ಯೋಚಿಸಿ, A B C D ಯಲ್ಲಿ ಸರಿಹೊಂದುವ ಉತ್ತರ ರೂಪದ ಆಕೃತಿಯನ್ನು ಕಂಡುಹಿಡಿಯಬೇಕು.

ಈ ರೀತಿಯ ಪ್ರಶ್ನೆಗಳನ್ನು ಉತ್ತರಿಸುವ ಮೊದಲು, ಕಾಗದಗಳನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಮಡಚಿ ಕೆಲವು ಭಾಗಗಳನ್ನು ಕತ್ತರಿಸಿದಾಗ ಯಾವಾಗಲೂ ರಂಧ್ರಗಳು ಒಂದು ನಿಗದಿತ ಜಾಗದಲ್ಲಿಯೇ ಮೂಡಿ ನಿರ್ದಿಷ್ಟವಾದ, ಸುಲಭವಾಗಿ ದೃಶ್ಯೀಕರಿಸಿಕೊಳ್ಳಬಹುದಾದ ಚಿತ್ತಾರವನ್ನು ಮೂಡಿಸುತ್ತವೆ ಎಂದು ತಿಳಿಯಿರಿ.

ಉದಾಹರಣೆಗೆ, ಒಂದು ಚೌಕಾಕಾರದ ಕಾಗದವನ್ನು ಕೆಳಗೆ ತೋರಿಸಿದಂತೆ ಕರ್ಣದ ಮೇಲೆ ಮಡಚಿದಾಗ ಅದು ಒಂದು ಲಂಬಕೋನ ತ್ರಿಭುಜದಂತೆ ಕಾಣುತ್ತದಲ್ಲವೇ? ನಂತರ ಮತ್ತೆ ಆ ಲಂಬಕೋನ ತ್ರಿಭುಜಾಕೃತಿಯನ್ನು ಮಧ್ಯಕ್ಕೆ ಸರಿಯಾಗಿ ಮಡಚಿದಾಗ ಮತ್ತೊಂದು ತ್ರಿಭುಜವು ದೊರೆಯುತ್ತದೆ. ಆ ತ್ರಿಭುಜದ ಪಾದ (ಚಿತ್ರದಲ್ಲಿ ತೋರಿಸಿದಂತೆ, ಕಾಗದದ ಹೊರಭಾಗ) ದಲ್ಲಿ ಯಾವುದೇ ರೀತಿಯ ರಂಧ್ರವನ್ನು ಮಾಡಿ ನಂತರ ಕಾಗದವನ್ನು ಬಿಡಿಸಿದಾಗ ಕಾಗದದ ಹೊರಭಾಗದಲ್ಲಿ ನಾಲ್ಕು ಕಡೆಯೂ ಒಂದೇ ರೀತಿಯ ರಂಧ್ರವು ಉಂಟಾಗುತ್ತದೆ ಎಂಬುದನ್ನು ಗಮನಿಸಿ.

ಈ ಅಂಶವನ್ನು ಗಮನದಲ್ಲಿಟ್ಟುಕೊಂಡರೆ ಈ ರೀತಿಯ ಯಾವುದೇ ಪ್ರಶ್ನೆಗಳಿಗೆ ಸುಲಭವಾಗಿ ಹಾಗೂ ವೇಗವಾಗಿ ಉತ್ತರಿಸಬಹುದು.

ಉದಾಹರಣೆಗೆ,



ಇಲ್ಲಿ ಸರಿ ಉತ್ತರ D ಅಲ್ಲವೇ?

ಮತ್ತೊಂದು ಉದಾಹರಣೆ: ಮೇಲೆ ತಿಳಿಸಿದಂತೆ ಕಾಗದವನ್ನು ಮಡಚಿ, ತ್ರಿಭುಜದ ಮಧ್ಯಭಾಗದಲ್ಲಿ ಯಾವುದೇ ರೀತಿಯ ರಂಧ್ರವನ್ನು ಮಾಡಿ ನಂತರ ಕಾಗದವನ್ನು ಬಿಡಿಸಿದಾಗ ಕಾಗದದ ಒಳ ಭಾಗದಲ್ಲಿ ನಾಲ್ಕು ಕಡೆಯೂ ಒಂದೇ ರೀತಿಯ ರಂಧ್ರವು ಉಂಟಾಗುತ್ತದೆ.

ಉದಾಹರಣೆಗೆ ಈ ಚಿತ್ರವನ್ನು ಗಮನಿಸಿ,

2.



ಮೇಲೆ ತಿಳಿಸಿದಂತೆ, ತ್ರಿಭುಜದ ಮಧ್ಯಭಾಗದಲ್ಲಿ ಎರಡು ರಂಧ್ರಗಳನ್ನು ಮೂಡಿಸಿದೆ (ಒಂದು ತ್ರಿಭುಜ ಮತ್ತು ಒಂದು ವೃತ್ತ). ಈ ರಂಧ್ರಗಳು ತ್ರಿಭುಜದ ಮಧ್ಯಭಾಗದಲ್ಲಿ ಇರುವುದರಿಂದ, ತ್ರಿಭುಜ ಮತ್ತು ವೃತ್ತದ ಚಿತ್ತಾರಗಳು ಕಾಗದದ ಒಳಗೆ ನಾಲ್ಕೂಕಡೆ ಮೂಡಬೇಕು ಅಲ್ಲವೇ? ಹಾಗಾಗಿ ಸರಿ ಉತ್ತರ C ಅಲ್ಲವೇ? A ಏಕಾಗಬಾರದು ಯೋಚಿಸಿ.

3. ಕೆಳಗಿನ ಪ್ರಶ್ನೆಗೆ ಉತ್ತರಿಸಿ.



ಭಾಗ 9

ಎಡಬದಿಯ ಪ್ರಶ್ನೆಯಲ್ಲಿ ಕೆಲವು ಆಕೃತಿಗಳನ್ನು ಕೊಟ್ಟಿರುತ್ತಾರೆ. ಬಲಭಾಗದಲ್ಲಿA B C D ಅಕ್ಷರಗಳುಳ್ಳ ನಾಲ್ಕು ಉತ್ತರ ರೂಪದ ಆಕೃತಿಗಳನ್ನು ಕೊಟ್ಟಿರುತ್ತಾರೆ. ನೀವು ಬಲಭಾಗದಲ್ಲಿ ಕೊಟ್ಟಿರುವ ಪ್ರಶ್ನೆ ರೂಪದ ಆಕೃತಿಯಲ್ಲಿರುವ ತುಂಡುಗಳಿಂದ ನಿರ್ಮಿಸಬಹುದಾದ ಉತ್ತರ ರೂಪದ ಆಕೃತಿಯನ್ನು ಕಂಡುಹಿಡಿಯಬೇಕು. ಈ ರೀತಿಯ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು, ಪ್ರಶ್ನೆರೂಪದ ಆಕೃತಿಗಳನ್ನು ಸರಿಯಾಗಿ ಗಮನಿಸಿ, ಅವುಗಳ ಆಕಾರ ಮತ್ತು ಗಾತ್ರಗಳ ಕಡಗೆ ಗಮನ ಕೊಡಿ.

ಉದಾಹರಣೆಗೆ,

1.



ಪ್ರಶ್ನೆಯಲ್ಲಿ ಕೊಟ್ಟಿರುವ ನಾಲ್ಕು ತುಂಡುಗಳನ್ನು ಗಮನಿಸಿ, ಅವುಗಳ ಆಕಾರ ಮತ್ತು ಗಾತ್ರಗಳನ್ನು ಸರಿಯಾಗಿ ನೋಡಿ. ಉತ್ತರದ ಆಯ್ಕೆಗಳಲ್ಲಿ ಯಾವ ಆಯ್ಕೆಯು ಈ ನಾಲ್ಕೂ ತುಂಡುಗಳಿಂದ (ಸರಿಯಾದ ಗಾತ್ರ ಮತ್ತು ಆಕಾರ) ಮಾಡಲ್ಪಟ್ಟಿದೆ ಎಂದು ಗಮನಿಸಿ. ಇಲ್ಲಿ ಸರಿ ಉತ್ತರ ಬಿ .

2. ಈ ಪ್ರಶ್ನೆಗೆ ಸರಿಯಾದ ಆಯ್ಕೆ ಏನು?



ಭಾಗ 10

ಎಡಬದಿಯಲ್ಲಿ ಪ್ರಶ್ನೆ ರೂಪದ ಆಕೃತಿಯನ್ನೂ ಬಲಭಾಗದಲ್ಲಿ ABCD ಅಕ್ಷರಗಳುಳ್ಳ ನಾಲ್ಕು ಉತ್ತರ ರೂಪದ ಆಕೃತಿಗಳನ್ನು ಕೊಟ್ಟಿರುತ್ತಾರೆ. ಪ್ರಶ್ನೆ ರೂಪದ ಆಕೃತಿಯು ಈ ನಾಲ್ಕು ಉತ್ತರ ರೂಪದ ಆಕೃತಿಗಳಲ್ಲಿ ಯಾವುದೋ ಒಂದು ಆಯ್ಕೆಯ ಆಕೃತಿಯಲ್ಲಿ ಅಡಗಿರುತ್ತದೆ. ಅದನ್ನು ಕಂಡುಹಿಡಿದು ಉತ್ತರಿಸಬೇಕು.

1. ಇಲ್ಲಿ ಪ್ರಶ್ನೆರೂಪದ ಆಕೃತಿಯು C ಆಯ್ಕೆಯಲ್ಲಿ ಅಡಗಿದೆಯಲ್ಲವೇ?



2. ಈ ಪ್ರಶ್ನೆಗೆ ಸರಿಯಾದ ಆಯ್ಕೆಯನ್ನು ಕಂಡುಹಿಡಿಯಿರಿ.



(ಮುಂದುವರಿಯುವುದು) ಲೇಖಕರು: ನಿರ್ದೇಶಕರು ಸ್ಮಾರ್ಟ್ ಸೆರೆಬ್ರಮ್ ಪ್ರೈ. ಲಿಮಿಟೆಡ್)



❦ ಸುಭಾಷಿತ ❦

ಒಂದು ತೊಟ್ಟು ನೀರು ಸಹ ಸೋಕದಂತೆ ಸಮುದ್ರವನ್ನು ದಾಟಬಹುದು. ಆದರೆ ಒಂದು ಹನಿ ಕಣ್ಣೀರು ಹಾಕದೆ ಜೀವನ ಎಂಬ ಸಮುದ್ರ ದಾಟಲು ಕಷ್ಟ.

-ದ.ರಾ. ಬೇಂದ್ರೆ

ಹಿಜಾಬ್ ಪ್ರಕರಣದ ತೀರ್ಪು ಭಿನ್ನ ಅಭಿಪ್ರಾಯಗಳ ಪ್ರತಿಫಲನ

ಮುಸ್ಲಿಂ ವಿದ್ಯಾರ್ಥಿನಿಯರು ಶಾಲೆ, ಕಾಲೇಜುಗಳಿಗೆ ಹಿಜಾಬ್ ಧರಿಸಿ ಬರಬಹುದೇ ಎಂಬ ವಿಚಾರವಾಗಿ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠದ ನ್ಯಾಯಮೂರ್ತಿಗಳು ಭಿನ್ನ ತೀರ್ಪುಗಳನ್ನು ನೀಡಿದ್ದಾರೆ. ಇದರಿಂದಾಗಿ ಈ ಪ್ರಶ್ನೆ ಈಗಲೂ ಪ್ರಶ್ನೆಯಾಗಿಯೇ ಮುಂದುವರಿದಿದೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ಹಿಜಾಬ್ ಧರಿಸಲು ಅವಕಾಶ ಇಲ್ಲ ಎಂದು ರಾಜ್ಯ ಸರ್ಕಾರವು ಫೆಬ್ರುವರಿಯಲ್ಲಿ ಹೊರಡಿಸಿದ್ದ ಆದೇಶವು ಈಗಲೂ ಊರ್ಜಿತವಾಗಿದೆ ಎಂದು ತಾಂತ್ರಿಕವಾಗಿ ವಾದಿಸಲಾಗುತ್ತಿದೆ. ಆದರೆ, ಇಡೀ ಪ್ರಶ್ನೆಯು ಇನ್ನಷ್ಟೇ ಇತ್ಯರ್ಥವಾಗಬೇಕಿದೆ. ಹೀಗಾಗಿ, ಕೋರ್ಟ್ ಮೆಟ್ಟಿಲೇರಿದ ವಿದ್ಯಾರ್ಥಿನಿಯರಲ್ಲಿ ದ್ವಿಸದಸ್ಯ ಪೀಠದ ತೀರ್ಪು ಆಸೆಯನ್ನು ಇನ್ನೂ ಜೀವಂತವಾಗಿ ಇರಿಸಿದೆ. ಇದೇ ವೇಳೆ, ತೀರ್ಪು ತನ್ನ ಪರವಾಗಿ ಬರಬಹುದು ಎಂಬ ನಿರೀಕ್ಷೆಯಲ್ಲಿ ಇದ್ದ ರಾಜ್ಯ ಸರ್ಕಾರಕ್ಕೆ ನಿರಾಸೆ ಉಂಟುಮಾಡಿರಬಹುದು. ದ್ವಿಸದಸ್ಯ ಪೀಠ ನೀಡಿರುವ ಎರಡು ಅಭಿಪ್ರಾಯಗಳು, ಹಿಜಾಬ್ ವಿಚಾರವಾಗಿ ಸಮಾಜದಲ್ಲಿ ಇರುವ ಭಿನ್ನ ಅಭಿಪ್ರಾಯಗಳ ಪ್ರತಿಫಲನದಂತೆ ಕಾಣಿಸಬಹುದು. ದ್ವಿಸದಸ್ಯ ಪೀಠದ ಭಾಗವಾಗಿದ್ದ ನ್ಯಾಯಮೂರ್ತಿ ಸುಧಾಂಶು ಧುಲಿಯಾ ಅವರು ರಾಜ್ಯ ಸರ್ಕಾರದ ಆದೇಶವನ್ನು ರದ್ದುಪಡಿಸಿದ್ದಾರೆ, ಸರ್ಕಾರದ ಆದೇಶವನ್ನು ಎತ್ತಿಹಿಡಿದಿದ್ದ ಕರ್ನಾಟಕ ಹೈಕೋರ್ಟ್‌ನ ಆದೇಶ ಪ್ರಶ್ನಿಸಿದ್ದ ಮೇಲ್ಮನವಿಗಳನ್ನು ಪುರಸ್ಕರಿಸಿದ್ದಾರೆ. ಪೀಠದ ಇನ್ನೊಬ್ಬರು ನ್ಯಾಯಮೂರ್ತಿ ಹೇಮಂತ ಗುಪ್ತಾ ಅವರು ಆದೇಶದ ಉದ್ದೇಶವು ತರಗತಿಗಳಲ್ಲಿ 'ಏಕರೂಪತೆ ಯನ್ನು ಉತ್ತೇಜಿಸುವುದು ಹಾಗೂ ಧರ್ಮನಿರಪೇಕ್ಷ ವಾತಾವರಣಕ್ಕೆ ಪ್ರೋತ್ಸಾಹ ನೀಡುವುದು' ಎಂದು ರಾಜ್ಯ ಸರ್ಕಾರ ನೀಡಿದ್ದ ವಿವರಣೆಗೆ ಸಹಮತ ಸೂಚಿಸಿದ್ದಾರೆ.

ಈ ಪ್ರಕರಣದಲ್ಲಿ ಅಂತಿಮವಾಗಿ ಸಾಂವಿಧಾನಿಕ ಮೌಲ್ಯಗಳು ಹಾಗೂ ರಾಷ್ಟ್ರದ ಹಿತಾಸಕ್ತಿ ಮೇಲುಗೈ ಸಾಧಿಸಲಿ

ಅತ್ಯಗತ್ಯ ಆಚರಣೆಗಳ ತತ್ವವು ಈ ಪ್ರಕರಣದಲ್ಲಿ ಅಸಂಗತ ಎಂದು ಇಬ್ಬರೂ ನ್ಯಾಯಮೂರ್ತಿಗಳು ಹೇಳಿದ್ದಾರೆ. ಆದರೆ, ವಿದ್ಯಾರ್ಥಿನಿಯರು ಹಿಜಾಬ್ ಧರಿಸುವುದನ್ನು ಗ್ರಹಿಸಬೇಕಿರುವುದು ಹೇಗೆ, ಹಿಜಾಬ್ ಧರಿಸುವುದಕ್ಕೂ ಸಮಾಜಕ್ಕೂ ಏನು ಸಂಬಂಧ, ಕಾನೂನು ಅದನ್ನು ಯಾವ ನೆಲೆಯಲ್ಲಿ ನೋಡಬೇಕು ಎಂಬ ವಿಚಾರಗಳಲ್ಲಿ ನ್ಯಾಯಮೂರ್ತಿಗಳ ನಡುವೆ ಸಹಮತ ಇಲ್ಲ. ಇಡೀ ಪ್ರಕರಣದ ಕೇಂದ್ರಬಿಂದುವಿನಲ್ಲಿ ಇರುವುದು ವಿದ್ಯಾರ್ಥಿನಿಯ ಆಯ್ಕೆಯ ಹಕ್ಕು, ಶಿಕ್ಷಣ ಸಂಸ್ಥೆಯ ಪ್ರವೇಶ ದ್ವಾರದಲ್ಲಿ ವಿದ್ಯಾರ್ಥಿನಿ ತನ್ನ ಹಿಜಾಬ್ ತೆಗೆಯಬೇಕು ಎಂದು ಹೇಳುವುದು ಆಕೆಯ ಖಾಸಗಿತನ ಮತ್ತು ಘನತೆಯ ಹಕ್ಕುಗಳ ಉಲ್ಲಂಘನೆ ಎಂದು ನ್ಯಾಯಮೂರ್ತಿ ಧುಲಿಯಾ ಸ್ಪಷ್ಟವಾಗಿ ಹೇಳಿದ್ದಾರೆ. ನ್ಯಾಯಮೂರ್ತಿ ಧುಲಿಯಾ ಅವರು ಹೆಣ್ಣುಮಕ್ಕಳು ಶಾಲೆಯ ಮೆಟ್ಟಿಲು ಹತ್ತುವಲ್ಲಿ ಈಗಾಗಲೇ ಎದುರಿಸುತ್ತಿರುವ ಸಮಸ್ಯೆಗಳ ಹಿನ್ನೆಲೆಯಲ್ಲಿ ಇಡೀ ವಿಷಯವನ್ನು ಗ್ರಹಿಸಿದ್ದಾರೆ. ಶಿಕ್ಷಣದ ಹಕ್ಕನ್ನು ನಿರಾಕರಿಸುವ ಮೂಲಕ ಹೆಣ್ಣುಮಕ್ಕಳ ಬದುಕನ್ನು ನಾವೇನಾದರೂ ಹೆಚ್ಚು ಉತ್ತಮವಾಗಿಸುತ್ತಿದ್ದೇವೆಯೇ ಎಂಬ ಪ್ರಶ್ನೆಯನ್ನು ಅವರು ಕೇಳಿದ್ದಾರೆ. ಬಿಜೊಯ್ ಇಮ್ಯಾನುವಲ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪನ್ನು ಉಲ್ಲೇಖಿಸಿ ಅವರು, ಇಲ್ಲಿ ಇರುವ ಪ್ರಶ್ನೆಯು 'ಆಯ್ಕೆಗೆ ಸಂಬಂಧಿಸಿದ್ದು; ಅದಕ್ಕಿಂತ ಹೆಚ್ಚಿನದೂ ಅಲ್ಲ, ಕಡಿಮೆಯದ್ದೂ ಅಲ್ಲ' ಎಂದಿದ್ದಾರೆ.

ಸಮವಸ್ತ್ರವನ್ನು ನಿಗದಿಪಡಿಸುವುದು ಕೂಡ ಮುಕ್ತ ಅಭಿವ್ಯಕ್ತಿಗೆ ಇರುವ ಸಕಾರಣ ನಿರ್ಬಂಧಗಳ ಪೈಕಿ ಒಂದು. ಸಮವಸ್ತ್ರವು ಒತ್ತಿಹೇಳುವ ಶಿಸ್ತಿನ ಮೂಲಕ ಸಮಾನತೆ ಗಟ್ಟಿಗೊಳ್ಳುತ್ತದೆ ಎಂದು ನ್ಯಾಯಮೂರ್ತಿ ಗುಪ್ತಾ ಹೇಳಿದ್ದಾರೆ. ಧರ್ಮನಿರಪೇಕ್ಷವಾಗಿ ಇರುವುದು ಅಂದರೆ ಸಮಾನವಾಗಿ ಇರುವುದು ಎಂದಾಗುತ್ತದೆ, 'ಭ್ರಾತೃತ್ವವನ್ನು ಸಾಧಿಸಲು ಎಲ್ಲ ಬಗೆಯ ಭಿನ್ನತೆಗಳನ್ನು ಸಂಪೂರ್ಣವಾಗಿ ಇಲ್ಲವಾಗಿಸಬೇಕು' ಎಂದು ಅವರು ಹೇಳಿದ್ದಾರೆ. ಆದರೆ ನ್ಯಾಯಮೂರ್ತಿ ಧುಲಿಯಾ ಅವರು ಒತ್ತಾಯದ ಏಕರೂಪತೆಯನ್ನು ಒಪ್ಪಿಕೊಂಡಿಲ್ಲ. ಶಾಲೆ ಮತ್ತು ಕಾಲೇಜುಗಳು ಮಕ್ಕಳಿಗೆ ದೇಶದ ಶ್ರೀಮಂತ ವೈವಿಧ್ಯವನ್ನು ಕಲಿಸುವ ವೇದಿಕೆಗಳಾಗಬೇಕು, ಸಹಿಷ್ಣುತೆ ಹಾಗೂ ಇತರರನ್ನು ಒಳಗೊಳ್ಳುವ ಮೌಲ್ಯಗಳನ್ನು ಅವರಲ್ಲಿ ಮೂಡಿಸಬೇಕು ಎಂದು ಅವರು ಹೇಳಿದ್ದಾರೆ. ಈ ಪ್ರಕರಣದಲ್ಲಿ ಎತ್ತಲಾದ ಪ್ರಶ್ನೆಗಳಿಗೆ ನ್ಯಾಯಮೂರ್ತಿ ಧುಲಿಯಾ ಅವರು ನೀಡಿರುವ ವಿವರಗಳು ಸಂವಿಧಾನದ ಮೌಲ್ಯಗಳನ್ನು ಪ್ರತಿಫಲಿಸುತ್ತಿವೆ. ಅಲ್ಲದೆ ಅವು ಸಮಾಜದ ಅಗತ್ಯಗಳಿಗೆ ಮತ್ತು ಮಹತ್ವಾಕಾಂಕ್ಷೆಗಳಿಗೆ ಸ್ಪಂದಿಸುವಂತೆಯೂ ಇವೆ. ಹಿಜಾಬ್ ವಿವಾದವನ್ನು ರಾಜ್ಯ ಸರ್ಕಾರವು ಆರಂಭದಿಂದಲೂ ಕೋಮು ಹಾಗೂ ರಾಜಕೀಯ ನೆಲೆಯಲ್ಲಿಯೇ ನಿಭಾಯಿಸಿತು. ಆದರೆ, ಅಂತಿಮವಾಗಿ ಸಾಂವಿಧಾನಿಕ ಮೌಲ್ಯಗಳು ಹಾಗೂ ರಾಷ್ಟ್ರದ ಹಿತಾಸಕ್ತಿ ಮೇಲುಗೈ ಸಾಧಿಸುತ್ತವೆ ಎಂದು ಆಶಿಸಬಹುದು.

ದಿನದ ಟ್ವೀಟ್

ಹೇರಿಕೆ ಸಲ್ಲದು

ವ್ಯಕ್ತಿಯೊಬ್ಬ ಗೊಂದಲದಲ್ಲಿ ಬಿದ್ದವನಂತೆ ಕಾಣಿಸಿಕೊಳ್ಳುವುದು ಬಹಳ ಸುಲಭ. ಭಾರತದಲ್ಲಿ ಇಲ್ಲಿನ ಮುಸ್ಲಿಂ ಮಹಿಳೆಯರ ಹಿಜಾಬ್ ಧರಿಸುವ ಹಕ್ಕನ್ನು ನಾನು ಬೆಂಬಲಿಸುತ್ತೇನೆ. ಇರಾನ್‌ನ ಮಹಿಳೆಯರು ಹಿಜಾಬ್ ಧರಿಸದಿರಲು ನಿರ್ಧರಿಸಿರುವ ಹಕ್ಕನ್ನು ಬೆಂಬಲಿಸುತ್ತೇನೆ. ವಾಸ್ತವವಾಗಿ, ಇದು ವಿರೋಧಾಭಾಸವಲ್ಲ. ಮಹಿಳೆಯರು ತಮಗೆ ಏನು ಧರಿಸಬೇಕೆಂದು ಅನಿಸುತ್ತದೆಯೋ ಅದನ್ನು ಮಾಡಬೇಕು. ಸರ್ಕಾರಗಳು, ನ್ಯಾಯಾಲಯಗಳು, ಮುಲ್ಲಾಗಳು, ರಾಜಕೀಯ ಮುಖಂಡರು ಈ ವಿಷಯದಿಂದ ದೂರ ಸರಿಯಬೇಕು.

ಪ್ರೀತೀಶ್ ನಂದಿ, ಚಿತ್ರ ನಿರ್ದೇಶಕ, ಪತ್ರಕರ್ತ

ಕಿಡಿನುಡಿ



ಜಾಗತಿಕ ಹಸಿವಿನ ಸೂಚ್ಯಂಕ. 121 ದೇಶಗಳ ಪೈಕಿ ಭಾರತ 107ನೇ ಸ್ಥಾನದಲ್ಲಿದೆ. 2014ರಿಂದ ಕೆಳಗೆ ಜಾರುತ್ತಲೇ ಇದೆ. ಶ್ರೀಲಂಕಾ (64), ನೇಪಾಳ (81), ಬಾಂಗ್ಲಾದೇಶ (84), ಪಾಕಿಸ್ತಾನ (99). ಒಂದುವೇಳೆ ಜಾಗತಿಕ ಅಧಿಕಾರದಾಹದ ಸೂಚ್ಯಂಕ ಎನ್ನುವುದೇನಾದರೂ ಇದ್ದಿದ್ದರೆ ಭಾರತ ಅಗ್ರಸ್ಥಾನದಲ್ಲಿ ಇರುತ್ತಿತ್ತು!

ಕಪಿಲ್ ಸಿಬಲ್, ವಕೀಲ, ರಾಜ್ಯಸಭಾ ಸದಸ್ಯ

25 ವರ್ಷಗಳ ಹಿಂದೆ

ಶುಕ್ರವಾರ, 17-10-1997

• ನಾಳೆಯೊಳಗೆ ಶರಣಾದರೆ ರಕ್ಷಣೆ, ಇಲ್ಲವೇ ಜಂಟಿ ಕಾರ್ಯಾಚರಣೆ

ನವದೆಹಲಿ, ಅಕ್ಟೋಬರ್ 16– ವೀರಪ್ಪನ್ ತಾನು ಹಿಡಿದಿಟ್ಟುಕೊಂಡಿರುವ ಒತ್ತೆಯಾಳುಗಳನ್ನು ಬಿಡುಗಡೆ ಮಾಡಿ ಶನಿವಾರದೊಳಗೆ ಶರಣಾಗದಿದ್ದರೆ ಕರ್ನಾಟಕವು ತಮಿಳುನಾಡು ಮತ್ತು ಕೇಂದ್ರ ಸರ್ಕಾರದ ನೆರವಿನಿಂದ ಕೆಲವು 'ಕಠಿಣ ಕ್ರಮ' ಕೈಗೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಇಲ್ಲಿ ಪ್ರಕಟಿಸಿದರು.

ವೀರಪ್ಪನ್ ಪ್ರಕರಣದ ಬಗೆಗೆ ಪ್ರಧಾನ ಮಂತ್ರಿ ಐ.ಕೆ. ಗುಜ್ರಾಲ್ ಅವರ ಜತೆ ಎರಡನೇ ಸುತ್ತಿನ ಮಾತುಕತೆ ನಡೆಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವೀರಪ್ಪನ್ ಶರಣಾದರೆ 'ಕೆಲ ಮಟ್ಟಿಗೆ ರಕ್ಷಣೆ' ನೀಡಬಹುದು ಎಂದರು.

ಪ್ರಧಾನಿಯವರ ಜತೆ ಇಂದು ಈ ಸಮಸ್ಯೆ ಕುರಿತು ಚರ್ಚಿಸಿದಾಗ ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿ ಅವರ ಪರವಾಗಿ ಮುರಸೋಳಿ ಮಾರನ್ ಅವರು ಪ್ರತಿನಿಧಿಸಿದ್ದರು ಎಂದರು.

• ಕಾವೇರಿ: ಶೀಘ್ರವೇ ಮುಖ್ಯಮಂತ್ರಿಗಳ ಸಭೆ

ನವದೆಹಲಿ, ಅಕ್ಟೋಬರ್ 16– ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ತೀರ್ಪು ಜಾರಿಗೆ ಕಾವೇರಿ ಪ್ರಾಧಿಕಾರ ರಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದರಿಂದ ಉಂಟಾಗಿರುವ ಸಮಸ್ಯೆ ಬಗೆಹರಿಸಲು ಕಾವೇರಿ ಜಲಾನಯನ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆಯಲು ಕೇಂದ್ರ ಸರ್ಕಾರ ಒಪ್ಪಿದೆ ಎಂದು ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಹೇಳಿದ್ದಾರೆ.

ತಾವು ನಿನ್ನೆ ಕೇಂದ್ರದ ಜಲಸಂಪನ್ಮೂಲ ಸಚಿವ ಸಿಸ್‌ರಾಂ ಒಲಾ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಒಲಾ ಅವರು ಈ ಭರವಸೆ ನೀಡಿದರು ಎಂದು ಪಟೇಲ್ ಅವರು ಇಂದು ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

ಕಾವೇರಿ ಪ್ರಾಧಿಕಾರ ರಚಿಸುವುದನ್ನು ರಾಜ್ಯ ಸರ್ಕಾರ ವಿರೋಧಿಸುತ್ತದೆ ಎಂದು ಕೇಂದ್ರಕ್ಕೆ ಸ್ಪಷ್ಟಪಡಿಸಲಾಗಿದೆ. ಪ್ರಾಧಿಕಾರ ರಚಿಸುವ ಬದಲು ಸುಪ್ರೀಂ ಕೋರ್ಟ್‌ನ ಆದೇಶ ಜಾರಿಗೊಳಿಸಲು ಸಮನ್ವಯ ಸಮಿತಿಯೊಂದನ್ನು ರಚಿಸಬಹುದು ಎಂದು ರಾಜ್ಯ ಸಲಹೆ ಮಾಡಿರುವುದಾಗಿ ಅವರು ತಿಳಿಸಿದರು.

• ಬೆನಜೀರ್ ಭುಟ್ಟೊ ಸ್ವಿಸ್ ಖಾತೆ ಮುಟ್ಟುಗೋಲು

ಇಸ್ಲಾಮಾಬಾದ್, ಅಕ್ಟೋಬರ್ 16 (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಬೆನಜೀರ್ ಭುಟ್ಟೊ ಹಾಗೂ ಅವರ ಕುಟುಂಬದ ಸದಸ್ಯರು ಏಳು ಸ್ವಿಸ್ ಬ್ಯಾಂಕುಗಳಲ್ಲಿ ಇಟ್ಟಿರುವ 13.5 ದಶಲಕ್ಷ ಡಾಲರ್ ಹಣವನ್ನು ಅಲ್ಲಿನ ಸರ್ಕಾರ ಅನಿರ್ದಿಷ್ಟ ಅವಧಿಗೆ ಮುಟ್ಟುಗೋಲು ಹಾಕಿಕೊಂಡಿದೆ.

ಈ ಕುರಿತಂತೆ ಇಸ್ಲಾಮಾಬಾದ್ ಸರ್ಕಾರ ಕಾನೂನು ಸಹಾಯ ಕೇಳಿದ ಹಿನ್ನೆಲೆಯಲ್ಲಿ ಸ್ವಿಟ್ಜರ್‌ಲೆಂಡ್ ಸರ್ಕಾರ ಕ್ರಮ ಕೈಗೊಂಡಿದೆ.

ಈ ಹಿಂದೆ ನಾಲ್ಕು ಬ್ಯಾಂಕುಗಳಲ್ಲಿ ಬೆನಜೀರ್ ಅವರು ಇಟ್ಟಿದ್ದ ಹಣವನ್ನು ಮೂರು ತಿಂಗಳ ಅವಧಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು.

ದ್ವೇಷದ ಬೇಲಿ ಮುರಿಯಲಿ, ಶಾಂತಿ ಮತ್ತು ಸಹಬಾಳ್ವೆಯ ರಸಬಳ್ಳಿ ಹಬ್ಬಲಿ

ಕಳೆಯಲಿ ದ್ವೇಷ, ಕೂಡಲಿ ದೇಶ

ಗತಿಬಿಂಬ

ವೈ.ಗ.ಜಗದೀಶ್

'ಸರ್ವ ಜನಾಂಗದ ಶಾಂತಿಯ ತೋಟ'ವಾದ ಕನ್ನಡನಾಡಿಗೆ ಕಾಲಿಟ್ಟ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಶಾಂತಿ, ಸಹಬಾಳ್ವೆಯನ್ನು ಧ್ಯಾನಿಸುತ್ತಾ ನಾಡಿನುದ್ದಕ್ಕೂ ನಡೆಯುತ್ತಿದ್ದಾರೆ. ದ್ವೇಷದ ಮಾತುಗಳಿಲ್ಲದೆ, ಜತೆಗೂಡಿದವರ ಕೈ-ಕೈ ಬೆಸೆಯುತ್ತಾ ಎಲ್ಲರೊಡನೊಂದಾಗಿ ದಣಿವಿಲ್ಲದೆ ಹೆಜ್ಜೆ ಹಾಕುತ್ತಿದ್ದಾರೆ. ಜಾತಿ, ಧರ್ಮ, ಭಾಷಾ ದ್ವೇಷವನ್ನು ಹರಡುತ್ತಿರುವ ದುರಿತ ಕಾಲದೊಳಗೆ ರಾಹುಲ್ ಪ್ರತಿಪಾದಿಸುತ್ತಿರುವ ಶಾಂತಿಯ ಪರವಾದ ಮಾತುಗಳು ಕೆಲವರಿಗೆ ಸಹ್ಯವಾಗುತ್ತಿಲ್ಲ. ದ್ವೇಷವನ್ನು ಬಿತ್ತಿ, ಜನರನ್ನು ವಿಭಜಿಸುವ ಮೂಲಕವೇ ತಮ್ಮ ಅಧಿಕಾರವನ್ನು ಶಾಶ್ವತಗೊಳಿಸಿಕೊಳ್ಳಲು ಹವಣಿಸುತ್ತಿರುವವರಿಗೆ ಶಾಂತಿಯ ಮಾತುಗಳು ಸಜೀವ ಬಾಂಬುಗಳಂತೆ ಕಂಡರೆ ಅಚ್ಚರಿಪಡಬೇಕಾಗಿಲ್ಲ.

ರಾಹುಲ್ ಅವರ 'ಭಾರತ್ ಜೋಡೊ' ಪಾದಯಾತ್ರೆಯನ್ನು ಶುರುವಿನಲ್ಲೇ ಬಿಜೆಪಿ ಕಟುವಾಗಿ ಟೀಕಿಸಲಾರಂಭಿಸಿತು. ಒಂದು ರಾಜಕೀಯ ಪಕ್ಷವಾಗಿ ಮತ್ತೊಂದು ರಾಜಕೀಯ ಪಕ್ಷದ ಕಾರ್ಯಕ್ರಮದಲ್ಲಿ ಹುಳುಕುಗಳಿದ್ದರೆ ಅವುಗಳನ್ನು ಜನರೆದುರು ಬಯಲು ಮಾಡುವುದು ತಪ್ಪೇನಲ್ಲ. ಕಾಂಗ್ರೆಸ್ ಪಕ್ಷವನ್ನು ಜನರು ತಿರಸ್ಕರಿಸಿದ್ದಾರೆ ಎಂದು ಬಿಜೆಪಿ ನಾಯಕರು ಹೇಳುತ್ತಿರುತ್ತಾರೆ. ಕಾಂಗ್ರೆಸ್‌ಮುಕ್ತ ಭಾರತವನ್ನು ಸಾಧಿಸಿಬಿಟ್ಟೆವು ಎಂದು ಹೆಮ್ಮೆಯನ್ನೂ ಪಡುತ್ತಾರೆ. ರಾಹುಲ್ ಅವರನ್ನು ಅಮ್ಮನ ಸೆರಗಿನ ಹಿಂದೆ ಅವಿತುಕೊಳ್ಳುವ ಪಪ್ಪು, ಬಚ್ಚಾ ಎಂದೆಲ್ಲ ಕಿಚಾಯಿಸಿದ್ದೂ ಉಂಟು. ಅಂತಹ 'ಬಚ್ಚಾ' ಕರ್ನಾಟಕದಲ್ಲಿ ಯಾತ್ರೆ ಶುರು ಮಾಡಿದರೆ, 'ವಿಶ್ವಗುರು'ವನ್ನೇ ತಮ್ಮ ತಲೆ ಮೇಲೆ ಹೊತ್ತುಕೊಂಡ, 'ಚಾಣಕ್ಯ'ನನ್ನೇ ತಮ್ಮ ನೇತಾರರನ್ನಾಗಿಸಿಕೊಂಡ ಪಕ್ಷಕ್ಕೆ ಭಯ ಹುಟ್ಟಿದ್ದು ಮಾತ್ರ ನಿಗೂಢ. ಬಿಜೆಪಿಗರ ಪ್ರಕಾರ, ರಾಹುಲ್ ಜನಬೆಂಬಲ ಕಳೆದುಕೊಂಡ, ವ್ಯಕ್ತಿತ್ವವೇ ಇಲ್ಲದ ನಾಯಕ. ಅಂತಹ ನಾಯಕನೊಬ್ಬ ಯಾತ್ರೆ ಮಾಡಿದರೆ, ಬಿಜೆಪಿ ಅಂಜಿದ್ದು, ಅಳುಕಿದ್ದು ಮಾತ್ರ ಸೋಜಿಗ!

ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಎಂಟು ವರ್ಷಗಳಲ್ಲಿ ಭರತಖಂಡವು 'ವಿಶ್ವಗುರು'ವಿನ ಪಟ್ಟಕ್ಕೆ ಏರಿದೆ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಆದರೆ, ಅದೇ ಹೊತ್ತಿನೊಳಗೆ ಡಾಲರ್ ಮುಂದೆ ರೂಪಾಯಿಯ ಮೌಲ್ಯ ₹ 82ಕ್ಕೆ ಕುಸಿದುಬಿದ್ದಿದೆ. ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ವಿಶ್ವದ 121 ರಾಷ್ಟ್ರಗಳ ಪೈಕಿ 2020ರಲ್ಲಿ 94ನೇ ಸ್ಥಾನದಲ್ಲಿದ್ದ ಭಾರತವು 2021ರಲ್ಲಿ 101ಕ್ಕೆ ಇಳಿಯಿತು. 2022ರಲ್ಲಿ ಪಾಕಿಸ್ತಾನ, ಶ್ರೀಲಂಕಾವನ್ನು ಹಿಂದಿಕ್ಕಿ 107ನೇ ಸ್ಥಾನಕ್ಕೆ ಕುಸಿದಿದೆ. ಮಕ್ಕಳಲ್ಲಿನ ಅಪೌಷ್ಟಿಕತೆ ಪ್ರಮಾಣ ಶೇ 19.3ರಷ್ಟಿದ್ದು, ಇದರಲ್ಲೂ ಭಾರತ 'ವಿಶ್ವಗುರು'ವಿನ ಸ್ಥಾನವನ್ನು ಉಳಿಸಿಕೊಂಡಿದೆ. ನಿರುದ್ಯೋಗ ಪ್ರಮಾಣ ಶೇ 7.60ರಿಂದ ಶೇ 7.90ಕ್ಕೆ ಏರಿದೆ. ನಗರ ನಿರುದ್ಯೋಗವು ಶೇ 8.28ರಿಂದ ಶೇ 9.28ಕ್ಕೆ ಜಿಗಿದಿದೆ. ಪರಿಶಿಷ್ಟ ಜಾತಿ-ಪಂಗಡದವರ ಮೇಲಿನ ದೌರ್ಜನ್ಯ ಹೆಚ್ಚುತ್ತಲೇ ಇದೆ. 2015ರಲ್ಲಿ 44,946 ಪ್ರಕರಣಗಳು ದಾಖಲಾಗಿದ್ದರೆ 2021ರಲ್ಲಿ ಈ ಪ್ರಮಾಣ 60,045ಕ್ಕೆ ಏರಿಕೆಯಾಗಿದೆ. ಆರ್ಥಿಕ ಹಿಂಜರಿತ, ನಿರುದ್ಯೋಗ, ಬಡತನ, ಜಾತಿ ದೌರ್ಜನ್ಯವನ್ನು ಕೊನೆಗಾಣಿಸಬೇಕಾದ ಆಳುವವರು ಜನರ ಗಮನ ಬೇರೆಡೆಗೆ ಸೆಳೆಯಲು ದ್ವೇಷ ಹಂಚುತ್ತಿದ್ದಾರೆ. ಅದಕ್ಕಾಗಿ ಮಸೀದಿಯಲ್ಲಿ ಶಿವಲಿಂಗ ಹುಡುಕುವ, ಹಿಜಾಬ್, ಮತಾಂತರ ನಿಷೇಧದಂತಹ ಸಂಗತಿಗಳನ್ನು ಮುನ್ನೆಲೆಗೆ ತರಲಾಗುತ್ತಿದೆ. ಮುಸ್ಲಿಮರಿಗೆ ನೀಡಿರುವ ಮೀಸಲಾತಿ ರದ್ದತಿಯ ಬೇಡಿಕೆ, ಏಕರೂಪ ನಾಗರಿಕ ಸಂಹಿತೆ, ಮದರಸಾಗಳ ಅನುಮತಿ ರದ್ದು, ಟಿಪ್ಪು ಸುಲ್ತಾನ್‌ನಂತ ಪ್ರಶ್ನಾತೀತ ಸ್ವಾತಂತ್ರ್ಯವೀರನ ಹೆಸರು ಅಳಿಸುವಿಕೆ, ಊರ ಹೆಸರುಗಳನ್ನು ಬದಲಾಯಿಸುವುದು ಇಂತಹವುಗಳೇ ಆಳುವವರ ಆದ್ಯತೆಯಾಗಿವೆ.

ಈ ಹೊತ್ತಿನೊಳಗೆ ಭಾರತವನ್ನು ಒಗ್ಗೂಡಿಸಲು ಪಾದಯಾತ್ರೆ ಮಾಡುತ್ತಿರುವುದಾಗಿ ರಾಹುಲ್ ಹೇಳುತ್ತಿದ್ದಾರೆ. ದಾರಿಯುದ್ದಕ್ಕೂ ಪೌರಕಾರ್ಮಿಕರು, ನರೇಗಾ ಕಾರ್ಮಿಕರು, ರೈತರು, ಸಾಮಾನ್ಯ ಜನರ ಕಷ್ಟ ಆಲಿಸುತ್ತಾ ಅವರ ಬದುಕನ್ನು ಅರಿಯುವ ಯತ್ನ ಮಾಡುತ್ತಿದ್ದಾರೆ. 'ಪ್ರಧಾನಿ ಮೋದಿಯವರನ್ನು ಟೀಕಿಸಿದವರ ವಿರುದ್ಧ ಹೋದಲ್ಲೆಲ್ಲ ಪ್ರತಿಭಟನೆ ನಡೆಸಿ' ಎಂದು ಬಿಜೆಪಿ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಕರೆ ಕೊಟ್ಟರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ತಮ್ಮ ಪಕ್ಷದ ಕಾರ್ಯಕ್ರಮ ತಡೆದರೆ ಕರಾವಳಿಗೆ ಬೆಂಕಿ ಹಾಕುತ್ತೇವೆ ಎಂದು ಹಿಂದೊಮ್ಮೆ ಅಬ್ಬರಿಸಿದ್ದರು. ಬಿಜೆಪಿಯ ಜತೆಗೆ ಗುರುತಿಸಿಕೊಂಡಿರುವ ಅನೇಕರು ಕಡಿ, ಕೊಚ್ಚು, ಕೊಲ್ಲು ಎಂಬ ಮಾತುಗಳ ಮೂಲಕ ಧರ್ಮಗಳ ಮಧ್ಯೆ ದ್ವೇಷ ಹುಟ್ಟಿಸುವ ಕೆಲಸ ಮಾಡುತ್ತಲೇ ಇದ್ದಾರೆ. ಪ್ರಬಲ ಜಾತಿಗಳಿಗೆ ಮೀಸಲಾತಿಯಿಂದಾಗಿ ಉದ್ಯೋಗ ಸಿಗುತ್ತಿಲ್ಲ ಎಂದು ಈ ಜಾತಿಗಳ ಸಂಘಟನೆಗಳು ಹಲುಬುತ್ತಿದ್ದವು. ಸಂಕಷ್ಟಗಳಿಗೆಲ್ಲ ಮೀಸಲಾತಿಯೇ ಕಾರಣ ಎಂದು ಶುರುವಾದ ವಾದಗಳು ಈ ದಿನಗಳಲ್ಲಿ ದುಷ್ಪರಿಣಾಮ ಬೀರುತ್ತಿವೆ. ಇತ್ತೀಚಿನ ದಿನಮಾನಗಳಲ್ಲಿ ಪರಿಶಿಷ್ಟ ಸಮುದಾಯದವರನ್ನು ಅವಮಾನಿಸುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ಇದೇ ಕಾರಣವಿದ್ದಂತಿದೆ.

ದ್ವೇಷವನ್ನೇ ಉಸಿರಾಗಿಸುತ್ತಿರುವ ಕಾಲದೊಳಗೆ ರಾಹುಲ್ ಪ್ರತಿಪಾದಿಸುತ್ತಿರುವ ಶಾಂತಿ, ಸತ್ಯದ ಮಾತುಗಳು ಕೆಲವರಿಗೆ ರುಚಿಸುತ್ತಿಲ್ಲ. ಕಣ್ಣೆದುರೇ ಅಜ್ಜಿ, ಅಪ್ಪ ಕೊಲೆಯಾಗಿದ್ದನ್ನು ಕಂಡಿರುವ ರಾಹುಲ್, ಮರೆಯಲಾಗದ ನೋವನ್ನು ನುಂಗಿಕೊಂಡು ಪ್ರೀತಿ ಹಂಚಲು ಹೊರಟಿದ್ದಾರೆ. ಆದರೆ, ರಾಹುಲ್ ಹೊರಟಿರುವುದು ಸುರಕ್ಷಿತ ಹಾದಿಯಲ್ಲಿಯೇ ವಿನಾ ದುರ್ಗಮ ದಾರಿಯಲ್ಲಲ್ಲ. ಎಲ್ಲಿ ಕಾಂಗ್ರೆಸ್‌ಗೆ ಅನುಕೂಲಕರ ವಾತಾವರಣ ಇದೆಯೋ, ಬಿಜೆಪಿ ಎಲ್ಲಿ ಬಲಿಷ್ಠವಾಗಿಲ್ಲವೋ ಬಹುತೇಕ ಅಂತಹ ಪ್ರದೇಶಗಳನ್ನಷ್ಟೇ ಅವರು ಆಯ್ದುಕೊಂಡಿದ್ದಾರೆ. ಕೋಮುದ್ವೇಷ ಹರಡುವವರ ವಿರುದ್ಧ ಜಾಗೃತಿ ಮೂಡಿಸುವುದು ತಮ್ಮ ಯಾತ್ರೆಯ ಉದ್ದೇಶ ಎಂದು ರಾಹುಲ್ ಪ್ರತಿಪಾದಿಸುತ್ತಿದ್ದರೂ ಅವರು ನಡೆವ ದಾರಿಗುಂಟದ ಚರಿತ್ರೆ ಮತ್ತು ವರ್ತಮಾನ ನೋಡಿದರೆ, ಸಾಮರಸ್ಯದ ಪಸೆಯಿರುವ ಪ್ರದೇಶಗಳಷ್ಟೇ ಅವರ ಆದ್ಯತೆಯಾಗಿವೆ. ಬಿಜೆಪಿಯನ್ನೇ ಅವರು ಗುರಿಯಾಗಿಸಿಕೊಂಡಿದ್ದರೂ ಕೇಸರಿ ಪಡೆ ಪ್ರಬಲವಾಗಿರುವ ಕಡೆ ಅವರು ಸುಳಿಯುತ್ತಿಲ್ಲ. ಕರ್ನಾಟಕದಲ್ಲಿನ ಅವರ ಯಾತ್ರೆಯ ಜಾಡು ನೋಡಿದರೂ ಕರಾವಳಿ, ಮಲೆನಾಡು ಹಾಗೂ ಕಿತ್ತೂರು ಕರ್ನಾಟಕದ ಕಡೆಗೆ ಅವರು ಕಾಲಿಡಲಿಲ್ಲ. ಜೆಡಿಎಸ್-ಕಾಂಗ್ರೆಸ್ ಆಯ್ಕೆ ವಿಷಯದಲ್ಲಿ ಅಡ್ಡಗೋಡೆಯ ಮೇಲೆ ಕುಳಿತ ಮತದಾರರನ್ನು ಹಸ್ತದತ್ತ ಸೆಳೆಯುವುದು ಅವರ ಉದ್ದೇಶವಾದಂತಿದೆ. ಬಿಜೆಪಿ ಪ್ರಾಬಲ್ಯ ಇರುವ, ಕಾಂಗ್ರೆಸ್ ಸತತ ಸೋಲುಂಡ ರಾಜ್ಯಗಳ ಕಡೆ ರಾಹುಲ್ ಮುಖವೆತ್ತಿ ನೋಡುವ ಧೈರ್ಯ ಮಾಡಿಲ್ಲ.

ರಾಹುಲ್ ಹೋದ ಕಡೆಯಲ್ಲೆಲ್ಲ ಭಾರಿ ಸಂಖ್ಯೆಯಲ್ಲಿ ಜನ ಸೇರುತ್ತಿದ್ದಾರೆ. ಪಕ್ಷದ ನಾಯಕರು ಕೂಡ ಹುಮ್ಮಸ್ಸಿನಿಂದ ಹೆಜ್ಜೆ ಹಾಕುತ್ತಿದ್ದಾರೆ, ಜನರನ್ನು ಸೇರಿಸುತ್ತಿದ್ದಾರೆ. ಇಂದಿರಮ್ಮನ ಮೊಮ್ಮಗ ಹೇಗಿದ್ದಾನೆಂದು ಕಾಣುವ, ಯಾತ್ರೆ ನೋಡುವ ಕುತೂಹಲಕ್ಕೆ ಜನ ಸೇರುತ್ತಿರುವುದು ಹೌದು. ಕೋಮುವಾದ ವಿರೋಧಿಸುವ ವಿಷಯದಲ್ಲಿ ಕಾಂಗ್ರೆಸ್‌ನ ಕೆಲವು ನಾಯಕರು ಮೃದು ಧೋರಣೆ ಅನುಸರಿಸುತ್ತಿರುವುದು, ಓಲೈಕೆ ರಾಜಕಾರಣಕ್ಕೆ ಆತುಕೊಂಡಿರುವುದು ರಹಸ್ಯವೇನಲ್ಲ. ಇಂತಹವರಿಗೆ ಕನ್ನಡ ನೆಲದ ಸಹಿಷ್ಣುತೆ, ಸಾಮರಸ್ಯದ ಬಗ್ಗೆ ಕಿವಿ ಹಿಂಡುವ ಕೆಲಸವನ್ನು ರಾಹುಲ್ ಮಾಡಬೇಕಿದೆ. ಇಲ್ಲದಿದ್ದರೆ ಬಂದ ಪುಟ್ಟ-ಹೋದ ಪುಟ್ಟ ಎಂಬುದಕ್ಕಷ್ಟೇ ಯಾತ್ರೆಯ ರಂಗು ಸೀಮಿತವಾಗಲಿದೆ. ದೇಶದ ಉದ್ದಕ್ಕೂ ಹರಡಲಾಗುತ್ತಿರುವ ದ್ವೇಷದ ತಂತುಗಳನ್ನು ತುಂಡರಿಸಿ, ಶಾಂತಿ, ಸಹಬಾಳ್ವೆಯ ಜೀವತಂತುಗಳನ್ನು ಜೋಡಿಸುವತ್ತಲೂ ಕಾರ್ಯಪ್ರವೃತ್ತರಾಗಬೇಕಿದೆ.

ಒಂದು ದೇಶದ ರಾಜನೊಬ್ಬ, ಅರಮನೆಯ ದರ್ಜಿಯನ್ನು ಕರೆದು, ಯಾರೊಬ್ಬರೂ ಹಾಕಲಾರದಂತಹ ವೈಶಿಷ್ಟ್ಯವಿರುವ ಬಟ್ಟೆಯನ್ನು ಹೊಲಿದುಕೊಡು ಎಂದು ಆದೇಶಿಸಿದ. ವಿಶೇಷ ಮುತುವರ್ಜಿ ವಹಿಸಿದ ದರ್ಜಿ, ಬಟ್ಟೆಯನ್ನು ಹೊಲಿದು ತಂದು, 'ಈ ಬಟ್ಟೆ ಸತ್ಯವಂತರಿಗೆ ಮಾತ್ರ ಕಾಣಿಸುತ್ತದೆ; ಸುಳ್ಳು ಹೇಳಿದವರಿಗೆ ಕಾಣಿಸುವುದಿಲ್ಲ' ಎಂದಿದ್ದ. ಹೊಸಬಟ್ಟೆ ಹೊಲಿಸಿರುವ ರಾಜರು ಅದನ್ನು ಧರಿಸಿ ಮೆರವಣಿಗೆಯಲ್ಲಿ ಬರಲಿದ್ದು ಎಲ್ಲರೂ ರಾಜಬೀದಿಗೆ ಬರಬೇಕೆಂದು ರಾಜಾಜ್ಞೆಯಾಯಿತು. ಸತ್ಯವಂತರಿಗೆ ಮಾತ್ರ ಕಾಣಿಸುವ ಬಟ್ಟೆಯಾಗಿದ್ದರಿಂದ ಎಲ್ಲರೂ ಆಹಾಹ ಓಹೋಹೋ ಎಂದು ಹೊಗಳಿದರು. ಕೆಲವರಿಗೆ ರಾಜರಹಸ್ಯ ಗೊತ್ತಾದರೂ ಭಯದಿಂದ ಸುಮ್ಮನಿದ್ದರು. ಬೀದಿಯಲ್ಲಿದ್ದ ಮಗುವೊಂದು ಮಾತ್ರ, 'ಅಯ್ಯೋ ರಾಜನ ಮೈಮೇಲೆ ಬಟ್ಟೆಯೇ ಇಲ್ಲ; ಆತ ಬೆತ್ತಲೆ ಇದ್ದಾನೆ ಛೀ ಯ್ಯಾ' ಎಂದು ಕೂಗಿತು. 'ಪಪ್ಪು, ಬಚ್ಚಾ' ಎಂದು ಕರೆಸಿಕೊಳ್ಳುತ್ತಿದ್ದ ರಾಹುಲ್ ಈಗ ಆ ಮಗುವಿನಂತೆ ಕಾಣಿಸುತ್ತಿದ್ದಾರೆ.

ಚುರುಮುರಿ



ಕೇಬಲ್‌ನವನಂತೆ...

• ಆನಂದ

'ಟಿ.ವಿ ಬಂದ್ ಆಗಿದೆ. ಕೇಬಲ್‌ನವನಿಗೆ ಫೋನಾಯಿಸಿದೆಯಾ?' ಎಂದು ಮಡದಿಯನ್ನು ಕೇಳಿದೆ.

'ಅವನು, ಬೊಮ್ಮಾಯಿ ತರಹ ಉತ್ತರ ಕೊಡ್ತಾನೆ' ಎಂದಳು.

'ಬೊಮ್ಮಾಯಿ ತರಹ?!'

'ಅದೇರಿ, ಆದಷ್ಟು ಬೇಗ ಎಂದವರು ಪದೇ ಪದೇ ಹೇಳ್ತಿಲ್ಲವೆ? ಅದೇ ತರಹ ಕೇಬಲ್‌ನವನು ಹೇಳ್ತಿದಾನೆ' ಎಂದಳು.

'ರಸ್ತೆಗುಂಡಿಗಳ ರಿಪೇರಿ ಬಗ್ಗೆ ಬೊಮ್ಮಾಯಿ...?'

'ಅದಲ್ಲಾರಿ. ಕ್ಯಾಬಿನೆಟ್ ರೀಷಫಲ್. ಆದಷ್ಟು ಬೇಗ ಮಾಡ್ತೀವಿ ಅಂತ ಅವರು ಹೇಳ್ತಿಲ್ಲವೇ ಹಾಗೆ ಈ ಕೇಬಲ್‌ನವನು ಸಹ' ಎಂದಳು.

ಈಕೆಯ ರಾಜಕೀಯ ಪ್ರಜ್ಞೆ, ಹಾಸ್ಯ ಪ್ರಜ್ಞೆ ಎರಡೂ ನಂದಿನಿ ತುಪ್ಪದ ಬೆಲೆಯಂತೆ ಡಬಲ್ ಆಗಿವೆ ಎನಿಸಿತು.

'ಸಿ.ಎಂ. ಕಷ್ಟ ಅವರಿಗೇ ಗೊತ್ತು. ಅದಕ್ಕೇ ಹಾಗೆ ಅಂತಿದ್ದಾರೆ' ಎಂದೆ ಪಕ್ಷದ ವಕ್ತಾರನಂತೆ.

'ಎಷ್ಟು ದಿನಾಂತ ಕಾಯೋದು ಆಕಾಂಕ್ಷಿಗಳು? ಅವರ ಅವಧಿನೂ ಮುಗೀತಿದೆ. ಬಂಗಲೆಗೆ ಶಿಫ್ಟ್ ಆಗಿ, ಅಲ್ಲಿ ಗೂಟದ ಕಾರು ನಿಂತು, ಅವರ ಹಿಂದೆ ಮುಂದೆ ಸೆಕ್ಯುರಿಟಿ ಓಡಾಡಿ, ಮಂತ್ರಿಯಾಗಿ ಟೇಪ್ ಕತ್ತರಿಸೋದಿಕ್ಕೆ ಹೋಗೋದು ಯಾವಾಗ...?'

'ನಿಜ ನಿಜ...'

'ಮತ್ತೆ ಶೀಘ್ರ ಶೀಘ್ರ ಅಂತ ಹೇಳ್ತಾನೇ ಇದ್ದರೆ ಹೇಗೆ? ಈ ಭಾವಿ ಮಂತ್ರಿಗಳ ಹೆಂಡತಿಯರು ಎಷ್ಟು ದಿನಾಂತ ಶಾಸಕರ ಪತ್ನಿ ಅಂತಾನೇ ಕರೆಸಿಕೊಳ್ಳುತ್ತಿರಬೇಕು' ಎಂದಳು.

'ಇನ್ನಾರು ತಿಂಗಳಲ್ಲಿ ಎಲ್ಲರ ಅವಧಿ ಮುಗಿಯುತ್ತೇರಿ. ಈ ತಿಂಗಳು ಇವರು ಮಂತ್ರಿ ಆದರೂ 3-4 ತಿಂಗಳಷ್ಟೇ ಅವರ ಕಾರುಬಾರು...'

'ಇನ್ನು 3 ತಿಂಗಳ ಅವಧೀನ ಏಕೆ ಮೊಟಕು ಮಾಡಿದೆ?'

'ಚುನಾವಣೆ ನೀತಿ ಸಂಹಿತೆ ಜಾರಿಗೆ ಬಂದ ಮೇಲೆ ಇವರಿಗೇನು ಕೆಲಸ ಇರುತ್ತೆ ಮಂತ್ರಿಯಾಗಿ? ಮನೆ ಮುಂದೆ ಬೋರ್ಡ್ ಇರುತ್ತೆ ಅಷ್ಟೆ'.

'ಆದರೂ ಇನ್ನೂ ಆಸೆ ಇಟ್ಟುಕೊಂಡಿದಾರೆ ನೋಡು' ಎಂದೆ.

'ಅದಕ್ಕೇ ಬೊಮ್ಮಾಯಿ ಆದಷ್ಟು ಶೀಘ್ರ ಅಂತ ಹೇಳ್ತಿರೋದು'.

'ಕೇಬಲ್‌ನವನಂತೆ...'

ಸಂಗತ

ನಗರ ಬಡತನ ನಿವಾರಣೆಗೆ ಬೇಕು ಆಸ್ಥೆ

ನಗರ ಬಡವರ ಬಗ್ಗೆ ನೈಜ ಕಾಳಜಿಯಾಗಲೀ ಬಡತನ ನಿವಾರಣೆಗೆ ಸಮರ್ಪಕ ಯೋಜನೆಗಳಾಗಲೀ ಇಲ್ಲ

• ಗುರುರಾಜ್ ಎಸ್.ದಾವಣಗೆರೆ

ತಾಲ್ಲೂಕು ಕೇಂದ್ರದ ಕಾಲೇಜೊಂದರಲ್ಲಿ 'ಪಾವರ್ಟಿ' (ಬಡತನ) ಕುರಿತು ಪೋಸ್ಟರ್ ಪ್ರಸ್ತುತಿಯ ಸ್ಪರ್ಧೆ ಏರ್ಪಾಡಾಗಿತ್ತು. ವಿದ್ಯಾರ್ಥಿಗಳು ಸಲ್ಲಿಸಿದ ಬಹುಪಾಲು ಪೋಸ್ಟರ್‌ಗಳಲ್ಲಿ ತಲೆ ಕೆದರಿದ, ಹರಿದ ಉಡುಪಿನ, ಮೋಟು ಬೀಡಿ ಸೇದುತ್ತ ಕಟ್ಟೆಯ ಮೇಲೆ ಕೂತಿರುವ, ನಿಸ್ತೇಜ ಕಣ್ಣುಗಳಿಂದ ಆಕಾಶದೆಡೆ ಕಣ್ಣು ನೆಟ್ಟು ಕೂತಿರುವ ಹಳ್ಳಿಯ ಜನರ ಚಿತ್ರಗಳೇ ಇದ್ದವು. ಕೆಲವು ಚಿತ್ರಗಳಲ್ಲಿ ಚಿಂದಿ ಆಯುವ, ಭಿಕ್ಷೆ ಬೇಡುವ ಮಕ್ಕಳು, ವಯಸ್ಕರು ಇದ್ದರು. ಚಿತ್ರಗಳಲ್ಲಿ ದಾಖಲಾಗಿದ್ದ ಹಿನ್ನೆಲೆಯೆಲ್ಲಾ ಹಳ್ಳಿಮಯವಾಗಿತ್ತು. ನಗರದ ಬಡವರ ಬವಣೆ ಕುರಿತ ಒಂದೇ ಒಂದು ಪೋಸ್ಟರ್ ಅಲ್ಲಿರಲಿಲ್ಲ.

ಸರ್ಕಾರಗಳೂ ಅಷ್ಟೇ. ಬಡತನ ಎಂದಾಕ್ಷಣ ನಮ್ಮೆಲ್ಲ ಹಳ್ಳಿಗಳೂ ಅದನ್ನೇ ಹಾಸಿ ಹೊದ್ದು ಮಲಗಿವೆ ಎಂಬಂತೆ ಮಾತನಾಡುತ್ತವೆ. ಅವರಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಲು, ಸವಲತ್ತು ನೀಡಲು, ಅವರನ್ನು ಬಡತನ ರೇಖೆಯ ಆಸುಪಾಸಿನಲ್ಲೇ ಇರಿಸಲು ಪ್ರಯತ್ನಿಸುತ್ತವೆ. ನಗರಗಳಲ್ಲೂ ಬಡವರಿದ್ದಾರೆ, ಅವರಲ್ಲೂ ಅನಕ್ಷರಸ್ಥರಿದ್ದಾರೆ, ಉದ್ಯೋಗವಿಲ್ಲದೆ, ಘನತೆಯ ಬದುಕು ಬಾಳಲಾಗದೆ ನಿತ್ಯ ನರಕಯಾತನೆ ಅನುಭವಿಸುತ್ತಿದ್ದಾರೆ ಎಂಬುದು ಗೊತ್ತಿದ್ದರೂ ರಾಜಕಾರಣಿಗಳಿಗೆ, ಪಕ್ಷಗಳಿಗೆ ಅವರ ಅಭ್ಯುದಯದ ಬಗ್ಗೆ ನೈಜ ಕಾಳಜಿಯಾಗಲೀ ಸಮರ್ಪಕ ಯೋಜನೆಗಳಾಗಲೀ ಇಲ್ಲ.

ಬಡತನವು ಕೇವಲ ಆರ್ಥಿಕ ಸ್ವರೂಪದ್ದಲ್ಲ. ಅದು ಆರೋಗ್ಯ, ಶಿಕ್ಷಣ ಮತ್ತು ಜೀವನಮಟ್ಟ ಬಿಂಬಿಸುವ ಪೌಷ್ಟಿಕತೆ, ಶಿಶು- ವಯಸ್ಕ ಮರಣ ಪ್ರಮಾಣ, ಹೆರಿಗೆ ನಂತರದ ಆರೈಕೆ, ಶಾಲಾ ಶಿಕ್ಷಣದ ಅವಧಿ, ಹಾಜರಾತಿ ಪ್ರಮಾಣ, ಅಡುಗೆ ಇಂಧನ ಸೌಲಭ್ಯ, ಶೌಚಾಲಯ ವ್ಯವಸ್ಥೆ, ಕುಡಿಯುವ ನೀರು, ವಿದ್ಯುತ್ ಸೌಲಭ್ಯ, ವಾಸದ ಮನೆ, ಜೀವನ ನಿರ್ವಹಣೆಗೆ ಸಾಮಾನು ಮತ್ತು ಬ್ಯಾಂಕ್ ಖಾತೆಗಳ ಲಭ್ಯತೆಯ ಅಂಶಗಳನ್ನು ಆಧರಿಸಿ ನಿರ್ಧರಿತವಾಗುತ್ತದೆ.

ಹಳ್ಳಿ- ಪಟ್ಟಣಗಳ ನಿರುದ್ಯೋಗ ಪ್ರಮಾಣ ಗಾಬರಿ ಹುಟ್ಟಿಸುವಷ್ಟು ದೊಡ್ಡದಾಗಿದೆ. ದೇಶದ ನಗರವಾಸಿಗಳ ಜನಸಂಖ್ಯೆ 49 ಕೋಟಿ. ಅಂಕಿಅಂಶಗಳ ಪ್ರಕಾರ, 8.4 ಕೋಟಿ ನಗರವಾಸಿಗಳು ಬಡತನ ರೇಖೆಗಿಂತ ಕೆಳಗಿದ್ದಾರೆ. ದೇಶದ ಒಟ್ಟು ಬಡವರ ಸಂಖ್ಯೆ 35 ಕೋಟಿ. ದಾಖಲೆಗಳ ಪ್ರಕಾರ, ಆರೂವರೆ ಕೋಟಿ ಮಂದಿ ದೇಶದ ಕೊಳೆಗೇರಿಗಳಲ್ಲಿರುವ 1.37 ಕೋಟಿ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ದೇಶದ ಶೇ 65ರಷ್ಟು ನಗರಗಳಲ್ಲಿ ಬೃಹತ್ ಕೊಳೆಗೇರಿಗಳಿವೆ. ರಾಜಧಾನಿ ದೆಹಲಿಯಲ್ಲಿ 6,343 ಕೊಳೆಗೇರಿಗಳಿದ್ದು, 10 ಲಕ್ಷಕ್ಕೂ ಹೆಚ್ಚು ಸಣ್ಣ ಸಣ್ಣ ಜೋಪಡಿಗಳಿವೆ. ದೆಹಲಿಯ ಗಣನೀಯ ಪ್ರಮಾಣದ ಜನಸಂಖ್ಯೆ ಕೊಳೆಗೇರಿಗಳಲ್ಲಿಯೇ ಇದೆ.

2021ರ ಆಗಸ್ಟ್ 3ರಂದು ಲೋಕಸಭೆಯಲ್ಲಿ ಮಂಡಿಸಲಾದ ಕಾರ್ಮಿಕರ ಬಗೆಗಿನ ಸ್ಥಾಯಿ ಸಮಿತಿಯ ವರದಿಯು ನರೇಗಾ ರೀತಿಯಲ್ಲಿ ನಗರದ ಬಡಜನರಿಗೆ ಉದ್ಯೋಗ ಕಲ್ಪಿಸುವ ಯೋಜನೆಯನ್ನು ಜಾರಿಗೆ ತರಲೇಬೇಕಾದ ಅನಿವಾರ್ಯ ಇದೆ ಎಂದಿತ್ತು. ಪ್ರಧಾನಮಂತ್ರಿ ಅವರ ಆರ್ಥಿಕ ಸಲಹಾ ಸಮಿತಿಯ ಮುಖ್ಯಸ್ಥ ವಿವೇಕ್ ದೇವರಾಯ್ 'ದಿ ಸ್ಟೇಟ್ ಆಫ್ ಇನ್‌ಈಕ್ವಾಲಿಟಿ ಇನ್ ಇಂಡಿಯಾ' ವರದಿ ಬಿಡುಗಡೆ ಮಾಡಿ, ಸ್ಥಾಯಿ ಸಮಿತಿಯ ಅಭಿಪ್ರಾಯವನ್ನು ಬೆಂಬಲಿಸಿದ್ದರು.

ನಗರದ ಬಡವರಿಗಾಗಿ ಇಂಥದೊಂದು ಯೋಜನೆ ಇರಲೇ ಇಲ್ಲವೆಂದಲ್ಲ. ಐದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ನಗರಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರಿಗೆ ದಿನಗೂಲಿ ನೀಡುವ 1997ರ ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯು 2013ರವರೆಗೆ ಜಾರಿಯಲ್ಲಿತ್ತು. ಚೆನ್ನಾಗಿ ನಡೆಯುತ್ತಿದ್ದ ಯೋಜನೆ ಇದ್ದಕ್ಕಿದ್ದಂತೆ ಸ್ಥಗಿತಗೊಂಡಿತು. ಕಾರಣಗಳು ಇಂದಿಗೂ ಸ್ಪಷ್ಟವಾಗಿಲ್ಲ. ಈಗ ಮತ್ತೊಂದು ಬಡತನ ನಿರ್ಮೂಲನಾ ದಿನ (ಅ. 17) ಬಂದಿದೆ.

ರಾಜಸ್ಥಾನ ಸರ್ಕಾರ ಈಗ ನಗರದ ಬಡಜನರಿಗೆ ಉದ್ಯೋಗ ಕಲ್ಪಿಸಲು ನರೇಗಾ ಮಾದರಿಯ ಇಂದಿರಾ ಗಾಂಧಿ ಅರ್ಬನ್ ಎಂಪ್ಲಾಯ್‌ಮೆಂಟ್ ಸ್ಕೀಮ್ (ಐಜಿಯುಇಎಸ್) ಪ್ರಾರಂಭಿಸಿದೆ. ನಗರದ ಬಡವರೆಲ್ಲರಿಗೂ ರಾಜ್ಯ ಸರ್ಕಾರ ಪ್ರತ್ಯೇಕವಾದ ಜನ್ ಆಧಾರ್ ಕಾರ್ಡ್ ಜೊತೆಗೆ ಮನೆಗೊಂದರಂತೆ ಜಾಬ್ ಕಾರ್ಡ್ ನೀಡುತ್ತದೆ. ಕುಟುಂಬದ ಯಾವುದೇ ಸದಸ್ಯ 100 ದಿನಗಳ ಕೆಲಸವನ್ನು ಕೇಳಿ ಪಡೆಯಬಹುದು. ಐಜಿಯುಇಎಸ್ ಅಡಿಯಲ್ಲಿ ಕೆಲಸದ ಬೇಡಿಕೆ ಬಂದ 15 ದಿನಗಳಲ್ಲಿ ಅವರಿಗೆ ಕೆಲಸ ಒದಗಿಸಬೇಕೆಂಬ ನಿಯಮವಿದೆ. ಈಗಾಗಲೇ 4 ಲಕ್ಷ ಜನ ನೋಂದಣಿ ಮಾಡಿಕೊಂಡಿದ್ದು, 2.5 ಲಕ್ಷ ಜನರಿಗೆ ಜಾಬ್ ಕಾರ್ಡ್ ನೀಡಲಾಗಿದೆ.

ನರೇಗಾದಂತೆ ಈ ಯೋಜನೆ 100 ದಿನಗಳ ಕೆಲಸದ ಗ್ಯಾರಂಟಿ ಕೊಡುವುದಿಲ್ಲ. ಕೆಲಸ ಇಲ್ಲದಿರುವಾಗ ಭತ್ಯೆ ನೀಡಲಾಗುವುದೇ ಎಂಬ ಬಗ್ಗೆ ಮಾಹಿತಿ ಇಲ್ಲ. ಯೋಜನೆಯ ಅನುಷ್ಠಾನದಲ್ಲಿ ಸಾರ್ವಜನಿಕರಿಗಾಗಲೀ ಸರ್ಕಾರೇತರ ಸಂಸ್ಥೆಗಳಿಗಾಗಲೀ ಯೋಜನೆಯ ಗುರುತಿಸುವಿಕೆ, ಆಯ್ಕೆ ಮತ್ತು ಅನುಮೋದನೆಯಲ್ಲಿ ಯಾವುದೇ ಪಾತ್ರವಿಲ್ಲ. ಸ್ವರ್ಣಜಯಂತಿ ಯೋಜನೆಯಲ್ಲಿ ಸಮುದಾಯ ಅಭಿವೃದ್ಧಿ ಸಂಘಟನೆಗಳಿಗೆ ಯೋಜನೆಯ ಅನುಷ್ಠಾನ ಮತ್ತು ದೇಖರೇಖಿಗೆ, ಮೇಲ್ವಿಚಾರಣೆಗೆ ವಿಪುಲ ಅವಕಾಶಗಳಿದ್ದವು. ಸಾರ್ವಜನಿಕ ಅಭಿಪ್ರಾಯಗಳಿಗೆ ಜಾಗವನ್ನೇ ನೀಡದ ರಾಜಸ್ಥಾನದ ಯೋಜನೆ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಅನುಷ್ಠಾನ ಆಗಲಿದೆ ಎಂಬುದರ ಬಗ್ಗೆ ಈಗಲೇ ಏನನ್ನೂ ಹೇಳಲಾಗದು.

ವಾಚಕರ ವಾಣಿ

ಗಮನಸೆಳೆದ ಪ್ರತಿಭಟನೆ

ಹಿಂದಿ ಹೇರಿಕೆಯ ವಿರುದ್ಧ ಪಶ್ಚಿಮ ಬಂಗಾಳದಲ್ಲಿ ನಡೆದ ಪ್ರತಿಭಟನೆಯಲ್ಲಿ ಕುವೆಂಪು ಅವರ ಭಾವಚಿತ್ರ ಹಾಗೂ ಅವರ ಘೋಷಣೆಗಳನ್ನು ಬಳಸಿಕೊಂಡಿರುವ ಸುದ್ದಿ (ಪ್ರ.ವಾ., ಅ. 15) ಗಮನ ಸೆಳೆಯಿತು. ಇದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಕೇಂದ್ರ ಸರ್ಕಾರದ ಹಿಂದಿ ಹೇರಿಕೆಯ ಹುನ್ನಾರಗಳ ವಿರುದ್ಧ ಸಿಡಿದೇಳಲು ಕನ್ನಡಿಗರಾದ ನಮಗೂ ಪಕ್ಷಾತೀತವಾಗಿ ಪ್ರೇರಣೆ ನೀಡುವ ಸುದ್ದಿ.

ತಮ್ಮ ರಾಜ್ಯದ ಆಡಳಿತ ಭಾಷೆಯ ಪರವಾಗಿ ನಿಲ್ಲುವುದು ಜನಪ್ರತಿನಿಧಿಗಳ ಕರ್ತವ್ಯ. ಇದರಲ್ಲಿ ರಾಜಕೀಯ ನುಸುಳಬಾರದು. ಆದರೆ, ಕೆಲವೊಂದು ಸಂದರ್ಭಗಳಲ್ಲಿ ಪಕ್ಷ ರಾಜಕಾರಣವು ಮುಖಂಡರ ಬಾಯಿ ಬಂದ್ ಮಾಡಿಸುತ್ತದೆ. ಭಾಷೆಯ ವಿಚಾರದಲ್ಲಿ ಯಾವುದೇ ಕಾರಣಕ್ಕೆ ರಾಜಿ ಮಾಡಿಕೊಳ್ಳಬಾರದು. ನಿಷ್ಠುರ ನಿಲುವು ತಳೆಯುವುದು ಅಗತ್ಯ. ಅಂತಹ ದೃಢ ನಿಲುವು ತಳೆಯುವಂತೆ ಜನರು ಒತ್ತಡ ಹೇರಬೇಕು. ಪ್ರಾದೇಶಿಕ ಭಾಷೆಗಳ ಹಿತಕ್ಕೆ ಧಕ್ಕೆ ಆಗುವ ಎಂತಹುದೇ ನಡೆಯನ್ನು ಗಟ್ಟಿಯಾಗಿ ವಿರೋಧಿಸಬೇಕು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ರುಚಿ ಇದ್ದರೆ ಅಭಿರುಚಿ

ಮನುಷ್ಯರಾದವರಿಗೆ ರುಚಿ ಮುಖ್ಯ. ರುಚಿವಂತರಿಗೆ ಅಭಿರುಚಿಯೂ ಇರುತ್ತದೆ. ಆದರೆ ನಮ್ಮ ರಾಜಕಾರಣಿಗಳಿಗೆ ಇವು ಯಾವುವೂ ಇದ್ದಂತಿಲ್ಲ. ಅವರು ಬಳಸುವ ಭಾಷೆ ಮತ್ತು ಟೀಕಿಸುವ ಪರಿ ನೋಡಿದರೆ ಅಸಹ್ಯ ಆಗುತ್ತದೆ. ರಾಜಕಾರಣಿಗಳು ದೇಶದ ಭವಿತವ್ಯದ ಬಗ್ಗೆ ಆಲೋಚಿಸಿ, ಪ್ರಸ್ತುತದ ಬಗ್ಗೆ ಮಾತನಾಡಲಿ. ನಾಯಕರಾದವರು ತಮ್ಮತನ ತೋರಬೇಕು, ನಾಡಿಗೆ ತಮ್ಮದೇ ಆದ ಕಾಣಿಕೆ ನೀಡಬೇಕು. ಆಗಿಹೋದವರನ್ನು ಅನುಕರಿಸುವುದರಿಂದ ಅಥವಾ ಅಣಕಿಸುವುದರಿಂದ ತಾವೇನೂ ಸಲ್ಲಿಸಿದಂತಾಗುವುದಿಲ್ಲ. ಮಕ್ಕಳು ಸಹ ನೋಡಿ ನಗುವಂತಾಗುತ್ತದೆ ಅಷ್ಟೆ!

ಆರ್.ಕೆ. ದಿವಾಕರ, ಬೆಂಗಳೂರು

ನಾಯಿಗಳ ಹಾವಳಿಗೆ ಬೇಕಿದೆ ಕಡಿವಾಣ

ದೇಶದಾದ್ಯಂತ ನಾಯಿ ಕಡಿತ ಪ್ರಕರಣಗಳ ಕುರಿತು ಮಾಹಿತಿ ಒದಗಿಸುವಂತೆ ಪ್ರಾಣಿ ಕಲ್ಯಾಣ ಮಂಡಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿರುವುದು (ಪ್ರ.ವಾ., ಅ. 13) ಸ್ವಾಗತಾರ್ಹ. ನಾಯಿ ಕಡಿತದಿಂದ ಪ್ರತಿದಿನ ಸಾವಿರಾರು ಜನ ಚುಚ್ಚುಮದ್ದು ಪಡೆಯುತ್ತಾರೆ. ಇದರ ಒಂದು ವಿಯಲ್‌ನ ದರ ಕನಿಷ್ಠ ₹ 280 ಇದೆ. ಇಂತಹ 3ರಿಂದ 5 ಚುಚ್ಚುಮದ್ದು ಪಡೆಯಬೇಕಾಗುತ್ತದೆ. ಇದನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿಯೇ ಕೊಡುತ್ತಿರುವುದರಿಂದ ಸರ್ಕಾರಕ್ಕೆ ಇದು ದೊಡ್ಡ ಹೊರೆಯೂ ಹೌದು. ನಾಯಿಯ ತೀವ್ರ ಕಡಿತದಿಂದ ಪ್ರಾಣ ಕಳೆದುಕೊಂಡವರಿದ್ದಾರೆ. ಅಲ್ಲದೆ ಉದಾಸೀನದಿಂದಲೋ ಅಥವಾ ಚುಚ್ಚುಮದ್ದು ಸಿಗದ ಕಾರಣಕ್ಕೋ ಚಿಕಿತ್ಸೆ ಪಡೆಯದೆ ರೇಬಿಸ್ ಕಾಯಿಲೆಗೆ ಬಲಿಯಾದವರೂ ಇದ್ದಾರೆ.

ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ನಾಯಿಗಳ ಹಾವಳಿಗೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು.

ಮುಳ್ಳೂರು ಪ್ರಕಾಶ್, ಮೈಸೂರು

ಗೋವಾ ಸರ್ಕಾರದ ನಡೆ ಸ್ವಾಗತಾರ್ಹ

ಬಾರ್‌ಗಳಲ್ಲಿ ಕಂಠಪೂರ್ತಿ ಕುಡಿದು, ರಸ್ತೆಯಲ್ಲಿ ಅಡ್ಡಾದಿಡ್ಡಿ ವಾಹನ ಚಲಾಯಿಸಿಕೊಂಡು ತಮ್ಮ ಹಾಗೂ ಇತರರ ಪ್ರಾಣಕ್ಕೆ ಕುತ್ತು ತರುವ ವ್ಯಕ್ತಿಗಳನ್ನು ಸುರಕ್ಷಿತವಾಗಿ ಮನೆಗೆ ತಲುಪಿಸುವ ಜವಾಬ್ದಾರಿ ಆಯಾ ಬಾರ್ ಮಾಲೀಕರದ್ದಾಗಿರುತ್ತದೆ ಎಂಬ ಗೋವಾ ಸರ್ಕಾರದ ಇತ್ತೀಚಿನ ನಿರ್ಣಯ ಚರ್ಚಾರ್ಹವಾಗಿದೆ. ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಗಿದೆ. ಇತ್ತೀಚಿನ ದಿನಗಳಲ್ಲಿ ಕುಡಿದು ವಾಹನ ಚಲಾಯಿಸುವ ಪ್ರಕರಣಗಳು ಹೆಚ್ಚಾಗುತ್ತಿವೆ. ಕುಡಿದು ಸ್ಥಿಮಿತ ಕಳೆದುಕೊಂಡ ವ್ಯಕ್ತಿಗಳನ್ನು ಸುರಕ್ಷಿತವಾಗಿ ಮನೆಗೆ ತಲುಪಿಸುವ ಈ ನಿರ್ಧಾರ ಪರಿಣಾಮಕಾರಿಯಾಗಿ ಜಾರಿಗೆ ಬಂದರೆ ಅಪಘಾತಗಳ ಸಂಖ್ಯೆ ಕಡಿಮೆ ಆಗಬಹುದು. ಇಂತಹದೊಂದು ನಿಯಮವು ಎಲ್ಲ ರಾಜ್ಯಗಳಲ್ಲಿಯೂ ಜಾರಿಗೆ ಬಂದರೆ ಒಳ್ಳೆಯದು. ಈ ದಿಸೆಯಲ್ಲಿ ಚಿಂತನೆ ನಡೆಯಲಿ. ಮನೆಗೆ ತಲುಪಿಸಲು ಆಗುವ ಖರ್ಚನ್ನು ಪಾನಮತ್ತರಿಂದಲೇ ವಸೂಲಿ ಮಾಡಿದರೂ ತಪ್ಪಿಲ್ಲ.

ಭುವನೇಶ್ವರಿ ಅಚ್ಚೀಗಾಂವ, ವಿಜಯಪುರ

ಅಸಹಾಯಕತೆ ಅರಿತ ಸನ್ನಡತೆ

ನನಗೀಗ 77 ವರ್ಷ. ಹಿಂದಿನ ತಿಂಗಳು ನನ್ನ ಆತ್ಮೀಯರೊಬ್ಬರ 75ನೇ ವರ್ಷದ ಅಭಿನಂದನಾ ಸಮಾರಂಭ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಜರುಗಿತು. ಅಂದು ನನ್ನ ಮಗ ಬೈಕ್‌ನಲ್ಲಿ ಅಲ್ಲಿಗೆ ಕರೆದುಕೊಂಡು ಹೋಗಿ ಬಿಟ್ಟಿದ್ದ. ವಾಪಸ್ ಬರುವಾಗ ನಾನೇ ಆಟೊ ಅಥವಾ ಬಸ್ ಹಿಡಿದು ಬರಬೇಕಾಗಿತ್ತು. ಸಮಾರಂಭ ಮುಗಿದು ಹೊರಗೆ ಬಂದಾಗ ರಾತ್ರಿ 9 ಗಂಟೆ. ರಸ್ತೆಯಲ್ಲಿ ವಿಪರೀತ ವಾಹನ ದಟ್ಟಣೆ. ಸಿಲ್ವರ್ ಜ್ಯುಬಿಲಿ ಪಾರ್ಕ್ ರಸ್ತೆಗೆ ಬಂದು ಆರ್.ಟಿ. ನಗರ-ಸುಲ್ತಾನ್‌ಪಾಳ್ಯ ಕಡೆಗೆ ಹೋಗುವ ಬಸ್ ಅಥವಾ ಆಟೊ ಹತ್ತಲು ಹರಸಾಹಸಪಟ್ಟರೂ ಆಗಲಿಲ್ಲ. ಆಟೊದಲ್ಲೇ ಹೋಗಿಬಿಡೋಣವೆಂದು ಅಲ್ಲೇ ಸಿಕ್ಕ ಆಟೊ ನಿಲ್ಲಿಸಿ ಕೇಳಿದೆ. 'ಸಾರ್, ಈ ಕಡೆ ಹೋಗೋ ಆಟೊಗಳೆಲ್ಲ ಮಾರ್ಕೆಟ್, ಮೈಸೂರು ರಸ್ತೆ ಕಡೆಗೆ ಹೋಗುತ್ತವೆ. ನೀವು ರಸ್ತೆ ಕ್ರಾಸ್ ಮಾಡಿ ಆ ಕಡೆ ನಿಂತ್ಕೊಳ್ಳಿ' ಎಂದ ಡ್ರೈವರ್. ಆದರೆ ರಸ್ತೆ ಕ್ರಾಸ್ ಮಾಡುವುದೇ ದೊಡ್ಡ ಸಮಸ್ಯೆ.

ನನ್ನ ಅಸಹಾಯಕತೆ ಅರಿತ ಡ್ರೈವರ್, ಆಟೊ ನಿಲ್ಲಿಸಿ ಬಂದು ನನ್ನ ಕೈ ಹಿಡಿದು ರಸ್ತೆ ಕ್ರಾಸ್ ಮಾಡಿಸಿ ತಂದುಬಿಟ್ಟ. 'ಬಹಳ ಥ್ಯಾಂಕ್ಸ್ ನಿಮಗೆ' ಎಂದು ವಂದಿಸಿದೆ. ನನ್ನ ಕೈಗಳನ್ನು ಹಿಡಿದುಕೊಂಡ ಆತ 'ಸಾರ್, ನೀವು ನನ್ನ ತಂದೆಯಂತಿದ್ದೀರಿ, ನನಗೆ ನಮಸ್ಕಾರ ಮಾಡುವುದೇ?' ಎಂದ. ಅಂದು ಆ ಡ್ರೈವರ್, ಹಿರಿಯರಿಗೆ ತೋರಿದ ಗೌರವ, ಆ ಸಮಯದಲ್ಲಿ ಮಾಡಿದ ಉಪಕಾರ ಮರೆಯುವಂತಿಲ್ಲ. ಎಲ್ಲ ಆಟೊ ಚಾಲಕರಿಗೆ ಇದೊಂದು ಮಾದರಿ ನಡೆಯಾಗಲಿ.

ಎಲ್.ಚಿನ್ನಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆ

‘ಕೈ’–‘ಕಮಲ’ ನೇರ ಹಣಾಹಣಿ



•2021ರಲ್ಲಿ ಉಪಚುನಾವಣೆ ನಡೆದ ಮೂರು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆದ್ದಿತ್ತು

ಹಿಮಾಚಲ ಪ್ರದೇಶ ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿದೆ. ಆದರೆ ಬಿಜೆಪಿ ಮತ್ತು ಕಾಂಗ್ರೆಸ್ ಚುನಾವಣಾ ಕಣಕ್ಕೆ ಇಳಿದು ಹಲವು ತಿಂಗಳೇ ಕಳೆದಿವೆ. ಎಎಪಿ ಸಹ ನೆಲೆ ಕಂಡುಕೊಳ್ಳಲು ಯತ್ನಿಸುತ್ತಿದೆ. ಪಂಜಾಬ್‌ನಲ್ಲಿ ಅಚ್ಚರಿ ಮೂಡಿಸಿದ್ದ ಎಎಪಿ, ಇಲ್ಲಿಯೂ ಅದೇ ಮಾಂತ್ರಿಕತೆ ತೋರಲಿದೆ ಎಂದು ಆ ಪಕ್ಷದ ಮುಖಂಡರು ನಿರೀಕ್ಷಿಸುತ್ತಿದ್ದಾರೆ. ಆದರೆ ಸ್ಪರ್ಧೆ ಇರುವುದು ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ಮಾತ್ರ ಎನ್ನುತ್ತವೆ ಸಮೀಕ್ಷೆಗಳು...

ಮೋದಿಯನ್ನೇ ನೆಚ್ಚಿಕೊಂಡಿರುವ ಬಿಜೆಪಿ

ಪ್ರಜಾವಾಣಿ ವಾರ್ತೆ

ಹಿಮಾಚಲ ಪ್ರದೇಶದಲ್ಲಿ 1985ರಿಂದಲೂ ಒಂದು ಅವಧಿಗೆ ಕಾಂಗ್ರೆಸ್, ಮತ್ತೊಂದು ಅವಧಿಗೆ ಬಿಜೆಪಿ ಅಧಿಕಾರಕ್ಕೆ ಬರುತ್ತಿವೆ. ಪ್ರತಿ ಚುನಾವಣೆಯಲ್ಲೂ ವಿರೋಧ ಪಕ್ಷ ಅಧಿಕಾರಕ್ಕೆ ಬರುತ್ತಿದೆ. ಆದರೆ ಈ ಬಾರಿ ಈ ಸಂಪ್ರದಾಯವನ್ನು ಮುರಿಯಲಿದ್ದೇವೆ. ರಾಜ್ಯದಲ್ಲಿ ಬಿಜೆಪಿಯು ಸತತ ಎರಡನೇ ಬಾರಿಗೆ ಸರ್ಕಾರ ರಚಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಹಿಮಾಚಲ ಪ್ರದೇಶದಲ್ಲಿ ಸತತ ಎರಡನೇ ಬಾರಿಗೆ ಸರ್ಕಾರ ರಚಿಸಲು ಬಿಜೆಪಿ ಸಿದ್ಧವಾಗಿದೆ.

ಹಿಮಾಚಲ ಪ್ರದೇಶದಲ್ಲಿ ಆಡಳಿತ ವಿರೋಧಿ ಅಲೆ ಇದೆ. ಸರ್ಕಾರದ ಯೋಜನೆಗಳು ಪರಿಣಾಮಕಾರಿಯಾಗಿ ತಲುಪದೇ ಇರುವುದು, ಒಂದು ಹುದ್ದೆ-ಒಂದು ಪಿಂಚಣಿ ಯೋಜನೆ ಅರ್ಹರಿಗೆ ದೊರೆಯದೇ ಇರುವುದು ಮತ್ತು ಭ್ರಷ್ಟಾಚಾರದ ಆರೋಪಗಳು ಸರ್ಕಾರದ ಕುರಿತು ಜನರ ಅಸಮಾಧಾನವನ್ನು ಹೆಚ್ಚಿಸಿವೆ ಎನ್ನಲಾಗುತ್ತಿದೆ. ಸರ್ಕಾರದ ಮೇಲಿನ ಈ ಅಸಮಾಧಾನವನ್ನೇ ಕಾಂಗ್ರೆಸ್ ಚುನಾವಣಾ ಅಸ್ತ್ರವನ್ನಾಗಿಸಿಕೊಂಡಿದೆ. ಆದರೆ, ಈ ಬಾರಿಯೂ ತಾವೇ ಸರ್ಕಾರ ರಚಿಸುತ್ತೇವೆ ಎಂಬ ಆತ್ಮವಿಶ್ವಾಸದಲ್ಲಿ ರಾಜ್ಯ ಬಿಜೆಪಿ ಇದೆ. ರಾಜ್ಯ ಬಿಜೆಪಿಯು ಈಗಾಗಲೇ ಮಾಡಿಕೊಂಡಿರುವ ಹೊಸ ಜಾತಿ ಸಮೀಕರಣವೂ ಈ ಆತ್ಮವಿಶ್ವಾಸಕ್ಕೆ ಕಾರಣವಾಗಿದೆ.

2011ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಜನರ ಪ್ರಮಾಣ ಶೇ 27ರಷ್ಟಿದೆ. ಪರಿಶಿಷ್ಟ ಜಾತಿಯ ಜನರು ಬಿಜೆಪಿಯ ಮೇಲೆ ಅಸಮಾಧಾನಗೊಂಡಿದ್ದಾರೆ ಎಂದು ಹಲವು ಸಮೀಕ್ಷಾ ವರದಿಗಳು ಹೇಳಿವೆ. ಈ ಜನರ ಅಸಮಾಧಾನವನ್ನು ಹೋಗಲಾಡಿಸಿದರೆ, ಬಿಜೆಪಿಗೆ ನಿರೀಕ್ಷಿತ ಜಯ ದೊರೆಯಲಿದೆ. ರಾಜ್ಯದ ಮೂರನೇ ಒಂದರಷ್ಟಿರುವ ಈ ವರ್ಗವನ್ನು ಓಲೈಸಿದರೆ, ಈ ಬಾರಿಯ ಚುನಾವಣೆಯಲ್ಲಿ ಗೆಲುವು ಸುಲಭವಾಗಲಿದೆ ಎಂದು ರಾಜ್ಯ ಬಿಜೆಪಿ ನಾಯಕರು ಹೇಳಿದ್ದಾರೆ. ಪರಿಶಿಷ್ಟ ಜಾತಿಯ ಜನರನ್ನು ಓಲೈಸುವ ಉದ್ದೇಶದಿಂದಲೇ, ಈ ಸಮುದಾಯದ ನಾಯಕ ಮತ್ತು ಶಿಕ್ಷಣ ತಜ್ಞ ಡಾ.ಸಿಕಂದರ್ ಕುಮಾರ್ ಅವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿದೆ. ಇದರ ಜತೆ ಎಂದಿನಂತೆ, ಪ್ರಧಾನಿ ನರೇಂದ್ರ ಮೋದಿ ಅವರನ್ನೇ ಪ್ರಚಾರಕ್ಕೆ ಬಿಜೆಪಿ ನೆಚ್ಚಿಕೊಂಡಿದೆ.

ಇದರ ಜತೆಯಲ್ಲಿಯೇ ರಾಜ್ಯ ಬಿಜೆಪಿ ಎಸ್‌ಸಿ- ಎಸ್‌ಟಿ ಮೋರ್ಚಾದ ಸದಸ್ಯರು ಮತ್ತು ಪದಾಧಿಕಾರಿಗಳ ಸಮ್ಮೇಳನವನ್ನು ಈಚೆಗೆ ಬಿಜೆಪಿ ಆಯೋಜಿಸಿದೆ. ಸರ್ಕಾರ ಮತ್ತು ಬಿಜೆಪಿ ಬಗ್ಗೆ ಇರುವ ಅಸಮಾಧಾನವನ್ನು ಹೋಗಲಾಡಿಸಲು, ಈ ಸಮುದಾಯದ ಪ್ರತಿಯೊಬ್ಬ ಮತದಾರರನ್ನೂ ಭೇಟಿ ಮಾಡಿ, ಮಾತನಾಡಿಸಬೇಕು. ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಸಮ್ಮೇಳನದಲ್ಲಿ ಸೂಚಿಸಲಾಗಿದೆ. ಇದು ಪಕ್ಷಕ್ಕೆ ಅನುಕೂಲವಾಗಲಿದೆ ಎಂದು ವಿಶ್ಲೇಷಿಸಲಾಗಿದೆ.

ಪ್ರಚಾರ ತಂತ್ರ ಬದಲಿಸಿದ ಕಾಂಗ್ರೆಸ್

‘ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್‌ನ ಸುಳಿವೇ ಇಲ್ಲ. ಕಾಂಗ್ರೆಸ್‌ಗೆ ನಾಯಕತ್ವವೂ ಇಲ್ಲ. ಎಎಪಿಯನ್ನು ಪರಿಗಣಿಸಲೇಬೇಕಿಲ್ಲ. ಹೀಗಾಗಿ ಈ ಬಾರಿಯದ್ದು ಏಕಪಕ್ಷೀಯ ಚುನಾವಣೆ’ ಎಂದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಎಸ್.ಕೆ.ಕಶ್ಯಪ್ ಅವರು ಈಚೆಗೆ ಹೇಳಿದ್ದಾರೆ. ಮೇಲ್ನೋಟಕ್ಕೆ ಕಾಂಗ್ರೆಸ್ ನಿಷ್ಕ್ರಿಯವಾದಂತೆಯೇ ಕಾಣುತ್ತಿದೆ. ಆದರೆ, ವಾಸ್ತವದಲ್ಲಿ ಹಾಗಿಲ್ಲ. ವರ್ಷಾಂತ್ಯಕ್ಕೆ ನಡೆಯಬೇಕಿರುವ ಚುನಾವಣೆಗೆ ತಯಾರಿಯನ್ನು ಏಪ್ರಿಲ್‌ನಲ್ಲಿಯೇ ಕಾಂಗ್ರೆಸ್ ಆರಂಭಿಸಿತ್ತು.

ರಾಜ್ಯದ ಎಲ್ಲಾ ಮತಗಟ್ಟೆಗಳಿಗೆ, ಮತಗಟ್ಟೆ ಮಟ್ಟದ ಮುಖಂಡರನ್ನು ಮೇನಲ್ಲಿಯೇ ನೇಮಕ ಮಾಡಲಾಗಿತ್ತು. ರಾಜ್ಯ ಚುನಾವಣೆಯ ತಂತ್ರ ಮತ್ತು ಪ್ರಚಾರದ ಹೊಣೆಯನ್ನು ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ನೀಡಲಾಗಿತ್ತು. ಇಷ್ಟೆಲ್ಲಾ ಸಿದ್ಧತೆ ಮಾಡಿಕೊಂಡಿದ್ದರೂ, ಕಾಂಗ್ರೆಸ್‌ನ ಪ್ರಚಾರ ಸುದ್ದಿ ಮಾಧ್ಯಮಗಳಲ್ಲಿ ಹೆಚ್ಚು ಸದ್ದು ಮಾಡುತ್ತಿಲ್ಲ. ಹೀಗಾಗಿಯೇ ಕಾಂಗ್ರೆಸ್ ಏನೂ ಮಾಡುತ್ತಿಲ್ಲ ಎಂದು ಮೇಲ್ನೋಟಕ್ಕೆ ಭಾಸವಾಗುತ್ತದೆ. ಆದರೆ, ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಮನೆಮನೆಗೆ ಭೇಟಿ ನೀಡಿ, ಮತದಾರರೊಂದಿಗೆ ಮಾತನಾಡುತ್ತಿದ್ದಾರೆ. ಇನ್ನೊಂದೆಡೆ ಪ್ರಿಯಾಂಕಾ ಗಾಂಧಿ ವಾದ್ರಾ ಸಹ ರಾಜ್ಯದಾದ್ಯಂತ ಮನೆಮನೆ ಭೇಟಿ, ಸಂವಾದ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ.

ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್ ಅವರು ನಿಧನರಾದ ನಂತರ ಅವರ ಪತ್ನಿ ಪ್ರತಿಭಾ ಸಿಂಗ್ ಅವರಿಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷೆ ಹುದ್ದೆ ನೀಡಲಾಗಿದೆ. ಸಂಸದೆಯಾಗಿರುವ ಪ್ರತಿಭಾ ಸಿಂಗ್ ಸಹ ಬೀದಿಗಳಿದು ಪ್ರಚಾರ ಮಾಡುತ್ತಿದ್ದಾರೆ. ಒಟ್ಟು ಪ್ರಚಾರದಲ್ಲಿ, ಸರ್ಕಾರದ ಜನವಿರೋಧಿ ನೀತಿಗಳು ಮತ್ತು ಕೇಂದ್ರ ಸರ್ಕಾರದ ಜನವಿರೋಧಿ ನಿಲುವುಗಳ ಬಗ್ಗೆ ಜನರಿಗೆ ಮಾಹಿತಿ ನೀಡಲಾಗುತ್ತಿದೆ. ಸರ್ಕಾರದ ನೀತಿಗಳಿಂದ ಜನಜೀವನದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗುತ್ತಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಇವನ್ನು ಹೇಗೆ ಸರಿಪಡಿಸಲಾಗುತ್ತದೆ ಎಂಬುದನ್ನು ವಿವರಿಸಲು ಒತ್ತು ನೀಡಲಾಗುತ್ತಿದೆ ಎಂದು ಕಾಂಗ್ರೆಸ್ ಮುಖಂಡರು ಹೇಳುತ್ತಿದ್ದಾರೆ.

ಜತೆಗೆ ಹಿಂದೂ ಮತದಾರರ ಓಲೈಕೆಗೂ ಕಾಂಗ್ರೆಸ್ ಕೈ ಇಟ್ಟಿದೆ. ಪ್ರಿಯಾಂಕಾ ಗಾಂಧಿ ಅವರು ರಾಜ್ಯದಲ್ಲಿರುವ ಪ್ರಮುಖ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡುತ್ತಿದ್ದಾರೆ. ಈಚೆಗೆ ಗೋವುಗಳ ರಕ್ಷಣೆ ಮತ್ತು ಚರ್ಮಗಂಟು ರೋಗದ ಬಗ್ಗೆ ಪಶುಪಾಲಕರಲ್ಲಿ ಅರಿವು ಮೂಡಿಸಲು ‘ಗೋಗೌರವ ಯಾತ್ರೆ’ಯನ್ನು ಕಾಂಗ್ರೆಸ್ ಆರಂಭಿಸಿದೆ. ಈ ಯಾತ್ರೆಗೆ ನಿರೀಕ್ಷೆಗಿಂತಲೂ ಹೆಚ್ಚು ಬೆಂಬಲ ವ್ಯಕ್ತವಾಗುತ್ತಿದೆ. ಆದರೆ, ಇಷ್ಟು ವ್ಯವಸ್ಥಿತವಾಗಿ ಪ್ರಚಾರ ನಡೆಸುತ್ತಿದ್ದರೂ, ಮಾಧ್ಯಮಗಳಿಂದ ಕಾಂಗ್ರೆಸ್ ದೂರವಿದೆ. ಇದು ಅದರ ಪ್ರಚಾರ ತಂತ್ರದ ಭಾಗವೇ ಆಗಿದೆ. ಈ ತಂತ್ರವು ಕಾಂಗ್ರೆಸ್‌ಗೆ ಹೆಚ್ಚು ಮತಗಳನ್ನು ತಂದುಕೊಡಲಿದೆ ಎಂದು ನಿರೀಕ್ಷಿಸಲಾಗಿದೆ. ಆದರೆ, ಪಕ್ಷದ ಉಪಾಧ್ಯಕ್ಷರಾಗಿದ್ದ ರಾಮ್‌ಲಾಲ್ ಠಾಕೂರ್ ಅವರು ಅತೃಪ್ತಿಯ ಕಾರಣಕ್ಕೆ ತಮ್ಮ ಹುದ್ದೆಗೆ ರಾಜೀನಾಮೆ ನೀಡಿರುವುದು, ಹಲವು ಮುಖಂಡರು ಪಕ್ಷ ಬಿಟ್ಟಿರುವುದು ಕಾಂಗ್ರೆಸ್‌ಗೆ ದೊಡ್ಡ ಹಿನ್ನಡೆ.



ರಾಷ್ಟ್ರೀಯ ಪಕ್ಷವಾಗುವ ಯತ್ನದಲ್ಲಿ ಎಎಪಿ

ರಾಜ್ಯದಲ್ಲಿ ಎಎಪಿ ದೊಡ್ಡಮಟ್ಟದಲ್ಲೇ ಪ್ರಚಾರಕ್ಕೆ ಇಳಿದಿದೆ. ಎಎಪಿ ನಾಯಕರು ಈ ಬಾರಿ ತಾವೇ ಸರ್ಕಾರ ರಚಿಸುವ ಮಾತುಗಳನ್ನಾಡುತ್ತಿದ್ದಾರೆ. ಆದರೆ, ಸರ್ಕಾರ ರಚಿಸುವ ಉದ್ದೇಶ ಎಎಪಿಗೆ ಇಲ್ಲ ಎಂದು ವಿಶ್ಲೇಷಿಸಲಾಗಿದೆ. ಈಚೆಗೆ ನಡೆದಿದ್ದ ಪ್ರಚಾರ ರ‍್ಯಾಲಿಯಲ್ಲಿ ಎಎಪಿ ಸಂಚಾಲಕ ಮತ್ತು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ‘ದೆಹಲಿ, ಪಂಜಾಬ್ ಮತ್ತು ಗೋವಾದಲ್ಲಿ ಎಎಪಿ ರಾಜ್ಯ ಪಕ್ಷದ ಮಾನ್ಯತೆ ಪಡೆದಿದೆ. ಈ ಬಾರಿ ಹಿಮಾಚಲ ಪ್ರದೇಶದಲ್ಲಿ ಕೆಲವು ಸ್ಥಾನಗಳನ್ನಾದರೂ ಗೆದ್ದು, ರಾಜ್ಯ ಪಕ್ಷ ಎಂದು ಮಾನ್ಯತೆ ಪಡೆದೇ ಪಡೆಯುತ್ತೇವೆ. ಇದರಿಂದ ರಾಷ್ಟ್ರೀಯ ಪಕ್ಷ ಎಂಬ ಮಾನ್ಯತೆ ಪಡೆಯಲು ಸಾಧ್ಯವಾಗುತ್ತದೆ’ ಎಂದು ಹೇಳಿದ್ದರು. ಈ ಚುನಾವಣೆಯಲ್ಲಿ ಎಎಪಿಯ ಗುರಿ ಏನು ಎಂಬುದನ್ನು ಕೇಜ್ರಿವಾಲ್ ಅವರ ಮಾತುಗಳು ಸ್ಪಷ್ಟಪಡಿಸುತ್ತವೆ. ಆದರೂ, ಈ ಚುನಾವಣೆಯಲ್ಲಿ ಎಎಪಿ ನಿರೀಕ್ಷೆಗಿಂತ ಹೆಚ್ಚು ಸ್ಥಾನಗಳನ್ನು ಗೆದ್ದರೆ ಅಚ್ಚರಿಪಡಬೇಕಿಲ್ಲ.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 251

ಧರ್ಮಪುರುಷನಿಗೆ ಶಾಪ ಕೊಟ್ಟ ಪದ್ಮಾ

ತುಂಬಾ ಮುದುಕನಾದ ಪಿಪ್ಪಲಾದ ಮುನಿಯು ಅನರಣ್ಯ ರಾಜನ ಪುತ್ರಿ ಪದ್ಮೆಯೊಡನೆ ತನ್ನ ಆಶ್ರಮಕ್ಕೆ ತೆರಳಿದ. ಅಲ್ಲಿ ಅವನು ಸಂತೋಷದಿಂದ ಹೆಂಡತಿಯೊಡನೆ ವಾಸವಾಗಿದ್ದ. ಪದ್ಮಾದೇವಿಯು ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದ ಪತಿಯಾದ ಪಿಪ್ಪಲಾದನನ್ನು, ಲಕ್ಷ್ಮಿಯು ನಾರಾಯಣನನ್ನು ಸೇವಿಸುವಂತೆ ಭಕ್ತಿಯಿಂದ ಸೇವೆ ಮಾಡುತ್ತಿದ್ದಳು.

ಹೀಗಿರುವಾಗ ಒಂದು ದಿನ ಪದ್ಮಾದೇವಿ ಗಂಗಾನದಿಗೆ ಸ್ನಾನ ಮಾಡಲು ಹೋಗಿದ್ದಳು. ಆಗ ಧರ್ಮಪುರುಷ ತನ್ನ ಮಾಯೆಯಿಂದ ರಾಜವೇಷವನ್ನು ಧರಿಸಿ ದಾರಿಯಲ್ಲಿ ಅವಳಿಗೆ ಕಾಣಿಸಿಕೊಂಡ. ಸುಂದರವಾದ ರತ್ನರಥವನ್ನೇರಿ ಬಂದಿದ್ದ ಧರ್ಮಪುರುಷ, ಆಕರ್ಷಕ ಆಭರಣಗಳನ್ನು ತೊಟ್ಟು ಮನ್ಮಥನಂತೆ ಕಂಗೊಳಿಸುತ್ತಿದ್ದ. ಸುಂದರಿಯಾದ ಪದ್ಮಾದೇವಿಯನ್ನು ನೋಡಿ, ‘ಎಲೈ ಸುಂದರಿ, ನೀನು ಸಾಕ್ಷಾತ್ ಲಕ್ಷ್ಮಿಯಂತಿರುವೆ. ತುಂಬಿದ ಯೌವನವುಳ್ಳವಳಾಗಿರುವೆ. ಇಂತಹ ನೀನು ತರುಣನಾದ ರಾಜನಿಗೆ ಯೋಗ್ಯಳಾಗಿರುವೆ. ನಿನ್ನ ಪತಿಯಾದ ಪಿಪ್ಪಲಾದ ಮುದುಕ. ಸಾಯುವುದಕ್ಕೆ ಸಿದ್ಧನಾಗಿರುವ ಮುದುಕನನ್ನು ಬಿಟ್ಟು, ನನ್ನನ್ನು ನೋಡು. ನಾನು ರಾಜೇಂದ್ರನು, ರತಿಶೂರನು, ಕಾಮಸಕ್ತಿಯುಳ್ಳವನು. ನೀನು ಮುದುಕಪತಿಯನ್ನು ಬಿಟ್ಟು ನನ್ನ ವಿವಾಹವಾಗಿ ನಿನ್ನ ಜನ್ಮ ಸಾರ್ಥಕ ಮಾಡಿಕೊ’ ಎಂದ.

ಹೀಗೆ ಹೇಳಿದ ಧರ್ಮಪುರುಷನು ರಥದಿಂದಿಳಿದು ಅವಳ ಬಳಿ ಬಂದು ಕೈಹಿಡಿಯಲು ಉದ್ಯುಕ್ತನಾದ. ಆಗ ಪತಿವ್ರತೆಯಾದ ಪದ್ಮಾ ಕೋಪದಿಂದ ಅವನನ್ನು ತಡೆದು, ‘ನೀಚನೇ, ದೂರ ಹೋಗು. ನೀನು ಮಹಾಪಾಪಿ. ನನ್ನನ್ನು ಕಾಮದೃಷ್ಟಿಯಿಂದ ನೋಡಿದರೆ ನಾಶವಾಗುತ್ತೀಯೆ. ನನ್ನ ಪತಿಯಾದ ಪಿಪ್ಪಲಾದ ತಪಸ್ಸಿನಿಂದ ಪವಿತ್ರನಾದವನು. ಅವನನ್ನು ಬಿಟ್ಟು ನಿನ್ನನ್ನು ಏಕೆ ಸೇರುವೆ? ನೀನು ಸದಾ ಕಾಮುಕನಾಗಿ ಸ್ತ್ರೀಲಂಪಟನಾಗಿರುವೆ. ಕಾಮುಕರನ್ನು ಮುಟ್ಟುವುದಿರಲಿ, ನೋಡಿದರೂ ಪಾಪ ಬರುತ್ತದೆ. ಸ್ತ್ರೀಯರ ಮೋಹಕ್ಕೆ ಬಿದ್ದವನಿಗೆ ಜ್ಞಾನ, ತಪಸ್ಸು, ಜಪ, ಹೋಮ, ಪೂಜೆಗಳಿಂದ ಯಾವ ಫಲವೂ ಲಭಿಸದು. ವಿದ್ಯೆ ದಾನಗಳಿಂದಲೂ ಪ್ರಯೋಜನವಾಗದು. ನಿನಗೆ ನಾನು ತಾಯಿಯ ಸಮಾನಳು. ಇಂಥವಳಲ್ಲಿ ಕಾಮಾಸಕ್ತಿಯಿಂದ ಏನೇನೋ ಹೇಳುತ್ತಿರುವೆ. ಆದಕಾರಣ ನಿನಗೆ ಕೆಲವು ಕಾಲದಲ್ಲಿಯೇ ನಿನಗೆ ಕ್ಷಯವು ಬರುವುದು’ ಎಂದು ಶಾಪಕೊಟ್ಟಳು.

ಪತಿವ್ರತೆಯಾದ ಪದ್ಮಾದೇವಿ ಶಾಪವನ್ನು ಕೇಳಿ ಧರ್ಮಪುರುಷ ರಾಜರೂಪವನ್ನು ಬಿಟ್ಟು ತನ್ನ ನಿಜವಾದ ರೂಪವನ್ನು ಧರಿಸಿ ಭಯದಿಂದ ನಡುಗುತ್ತಾ, ‘ಓ ಮಾತೆ, ನಾನು ಜ್ಞಾನಿಗಳಿಗೂ ಗುರುವಾದ ಧರ್ಮಪುರುಷ. ನಾನು ಪರಸ್ತ್ರೀಯನ್ನು ತಾಯಿಯಂತೆ ತಿಳಿಯುವವನು. ನಿನ್ನ ಅಂತರಂಗವನ್ನು ಪರೀಕ್ಷೆಮಾಡಲು ದೈವ ಪ್ರೇರಣೆಯಿಂದ ಹೀಗೆ ಮಾಡಿದೆ. ಇದಕ್ಕೆ ನೀನು ಯೋಗ್ಯವಾದ ಶಿಕ್ಷೆಯನ್ನೇ ವಿಧಿಸಿರುವೆ. ಎಲ್ಲರಿಗೂ ಸುಖ ಮತ್ತು ದುಃಖಗಳನ್ನು ಅವರವರ ಕರ್ಮಕ್ಕನುಸಾರವಾಗಿ ಕೊಡಲು ಆ ಈಶ್ವರನೇ ಸಮರ್ಥ. ಹಾಲನ್ನು ಬೆಳ್ಳಗಾಗಿಯೂ, ನೀರನ್ನು ತಣ್ಣಗಾಗಿಯೂ, ಅಗ್ನಿಯನ್ನು ಸುಡುವಂತೆ ಮಾಡಿದ ಸೃಷ್ಟಿಕರ್ತನ ಮುಂದೆ ನನ್ನ ಪರೀಕ್ಷಕ ದೃಷ್ಟಿ ಅರ್ಥಹೀನ. ಮಹಾತಪವನ್ನಾಚರಿಸಿ ಮೊದಲು ಪ್ರಕೃತಿಯನ್ನು ನಿರ್ಮಿಸಿ, ಬಳಿಕ ಮಹತತ್ವ ಅಹಂಕಾರ ಮುಂತಾದುವುಗಳನ್ನು ಸೃಜಿಸಿದವನು ಮಹಾಶಿವ. ಬ್ರಹ್ಮ ವಿಷ್ಣು ರುದ್ರ ಮೊದಲಾದವರನ್ನೂ ಸೃಷ್ಟಿಸಿ ಪ್ರಪಂಚಪಾಲನೆ ಮಾಡಿದ ವಿಶ್ವನಾಥನಿರುವಾಗ, ಮಹಾಪತಿವ್ರತೆಯಾದ ನಿನ್ನ ಪರೀಕ್ಷಿಸಲು ನಾನು ತೀರಾ ಸಣ್ಣವನು. ಜಗನ್ನಾಟಕ ಸೂತ್ರಧಾರನಾದ ಜಗನ್ನಾಥನಷ್ಟೇ ಪರೀಕ್ಷಕನಾಗಲು ಸಾಧ್ಯ’ ಎಂದು ನಮಸ್ಕರಿಸಿದ.

ಉಚಿತ ಕೊಡುಗೆಗಳ ಸುತ್ತ ಗಿರಕಿ

ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆಗೆ ಮುಹೂರ್ತ ನಿಗದಿಯಾಗುವ ಮುನ್ನವೇ ರಾಜ್ಯದಲ್ಲಿ ರಾಜಕೀಯ ಪಕ್ಷಗಳ ‘ಉಚಿತ ಕೊಡುಗೆ’ಗಳ ಕಸರತ್ತು ಆರಂಭವಾಗಿತ್ತು. ಉಚಿತ ಕೊಡುಗೆಗಳನ್ನು ಪ್ರಕಟಿಸಿ ದೆಹಲಿ ಹಾಗೂ ಪಂಜಾಬ್‌ನಲ್ಲಿ ಅಧಿಕಾರದ ಗದ್ದುಗೆಗೆ ಏರಿರುವ ಎಎಪಿ, ಇದನ್ನು ಚುನಾವಣಾ ಮಾದರಿ ಎಂದೇ ಪರಿಗಣಿಸಿದಂತೆ ತೋರುತ್ತದೆ. ಎಎಪಿ ತುಳಿದಿರುವ ಹಾದಿಯಲ್ಲೇ ನಡೆದಂತೆ ಕಾಣುತ್ತಿರುವ ಕಾಂಗ್ರೆಸ್, ತಾನೂ ಉಚಿತ ಕೊಡುಗೆಗಳ ಮೊರೆ ಹೊಕ್ಕಿದೆ. ಆದರೆ, ಉಚಿತ ಕೊಡುಗೆಗಳು ರಾಷ್ಟ್ರ ವಿರೋಧಿ ಎಂಬ ಧೋರಣೆಯಲ್ಲಿರುವ ಬಿಜೆಪಿ, ಹಿಮಾಚಲ ಪ್ರದೇಶದಲ್ಲಿ ತನ್ನ ನಿಲುವನ್ನು ಬದಲಿಸಿಕೊಂಡಿದೆ. ಹೀಗಾಗಿ ಈ ಬಾರಿಯ ಚುನಾವಣೆಯು ಉಚಿತ ಕೊಡುಗೆಗಳ ಸುತ್ತಲೇ ಗಿರಕಿ ಹೊಡೆಯುತ್ತಿದೆ.

ಹಿಮಾಚಲ ಪ್ರದೇಶದ ಜನರಿಗೆ ಆಮ್ ಆದ್ಮಿ ಪಕ್ಷವು ನಾಲ್ಕು ಪ್ರಮುಖ ಭರವಸೆಗಳನ್ನು ನೀಡಿದೆ. ಪ್ರತೀ ಮನೆಗೆ 300 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡುವ ವಾಗ್ದಾನ ಪ್ರಮುಖವಾದುದು. ದೆಹಲಿಯಲ್ಲಿ ಯಶಸ್ವಿಯಾಗಿರುವ ಉಚಿತ ಶಿಕ್ಷಣ ಹಾಗೂ ಉಚಿತ ಆರೋಗ್ಯ ಸೇವೆ ಯೋಜನೆಗಳನ್ನು ಹಿಮಾಚಲ ಪ್ರದೇಶಕ್ಕೂ ವಿಸ್ತರಿಸುವ ಭರವಸೆಯನ್ನು ಪಕ್ಷ ನೀಡಿದೆ. ರಾಜ್ಯದ ಮತದಾರರ ಪೈಕಿ ಶೇ 49ರಷ್ಟು ಮಹಿಳೆಯರೇ ಇದ್ದು, ಅವರ ಮನಗೆಲ್ಲಲು ಮುಂದಾಗಿರುವ ಎಎಪಿ, ಪ್ರತಿ ಮಹಿಳೆಗೆ ₹1,000 ಭತ್ಯೆ ನೀಡುವ ಮಾತು ಕೊಟ್ಟಿದೆ.

ರಾಜ್ಯದ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ನೀಡಿರುವ 10 ಭರವಸೆಗಳಲ್ಲಿ, ಪ್ರತಿ ಮನೆಗೆ 300 ಯೂನಿಟ್ ವಿದ್ಯುತ್, 18 ವರ್ಷ ದಾಟಿದ ಪ್ರತಿ ಮಹಿಳೆಗೆ ₹1,500 ಭತ್ಯೆ ಅಂಶಗಳು ಪ್ರಮುಖ. ಹಳೆಯ ಪಿಂಚಣಿ ವ್ಯವಸ್ಥೆ ಮತ್ತೆ ಜಾರಿಗೆ ತರುವುದಾಗಿಯೂ ಪಕ್ಷ ಘೋಷಿಸಿದೆ.

ಚುನಾವಣಾ ಪ್ರಚಾರದಲ್ಲಿ ಎದುರಾಳಿಗಳ ಉಚಿತ ಕೊಡುಗೆಗಳ ಘೋಷಣೆಯನ್ನು ವಿರೋಧಿಸುತ್ತಿರುವ ಬಿಜೆಪಿಯು, ಹಲವು ತಿಂಗಳ ಹಿಂದೆಯೇ ಅಂತಹ ಉಚಿತ ಕೊಡುಗೆಗಳನ್ನು ಜನರಿಗೆ ನೀಡಿಬಿಟ್ಟಿದೆ. ಮುಖ್ಯಮಂತ್ರಿ ಜೈರಾಮ್ ಠಾಕೂರ್ ಅವರು, ಪ್ರತಿ ಮನೆಗೆ 125 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡಿದರು. ಬಸ್ ಪ್ರಯಾಣ ದರದಲ್ಲಿ ಮಹಿಳೆಯರಿಗೆ ಶೇ 50ರಷ್ಟು ರಿಯಾಯಿತಿ ಪ್ರಕಟಿಸಿದರು. ಬಿಜೆಪಿ ತೆಗೆದುಕೊಂಡ ಉಚಿತ ಕೊಡುಗೆಗಳ ನಿರ್ಧಾರಗಳನ್ನು ಎಎಪಿ ಲೇವಡಿ ಮಾಡಿದೆ. ಎಎಪಿಯ ಉಚಿತ ಕೊಡುಗೆಗಳ ಘೋಷಣೆ ಚುನಾವಣಾ ಮಾದರಿಯನ್ನು ಬಿಜೆಪಿ ‘ನಕಲು’ ಮಾಡಿದೆ ಎಂದು ಮನೀಷ್ ಸಿಸೋಡಿಯಾ ನೇರವಾಗಿ ವಾಗ್ದಾಳಿ ನಡೆಸಿದ್ದಾರೆ. ಬಿಜೆಪಿಗೆ ಉಚಿತ ಕೊಡುಗೆ ನೀಡುವ ಉದ್ದೇಶವಿದ್ದಿದ್ದರೆ, ಅದು ಅಧಿಕಾರದಲ್ಲಿರುವ ಎಲ್ಲ ರಾಜ್ಯಗಳನ್ನು ಬಿಟ್ಟು, ಚುನಾವಣೆ ನಡೆಯಲಿರುವ ಹಿಮಾಚಲ ಪ್ರದೇಶದಲ್ಲಿ ಮಾತ್ರವೇ ಏಕೆ ಕೊಟ್ಟಿದೆ ಎಂದು ಅವರು ಪ್ರಶ್ನಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ದಿನಾಂಕ ಘೋಷಣೆ ಮುನ್ನಾದಿನ ರಾಜ್ಯದಲ್ಲಿ ವಂದೇ ಭಾರತ್ ರೈಲು ಉದ್ಘಾಟಿಸಿ, ಹತ್ತಾರು ಯೋಜನೆಗಳಿಗೆ ಅಂದೇ ಚಾಲನೆ ನೀಡಿದರು.

ಹಣ ಎಲ್ಲಿದೆ?

ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸದೆ ಎಲ್ಲ ಪಕ್ಷಗಳೂ ಉಚಿತ ಘೋಷಣೆಗಳ ಹಿಂದೆ ಬಿದ್ದಿವೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ. ರಾಜ್ಯ ಬಜೆಟ್ ಗಾತ್ರ ₹51,752 ಕೋಟಿ. ಇದರಲ್ಲಿ ₹12,530 ಕೋಟಿ ಸಾಲವಿದೆ. ಅಂದರೆ ಸರ್ಕಾರ ಈಗಾಗಲೇ ಬಜೆಟ್‌ನ ಶೇ 25ರಷ್ಟು ಹಣದ ಕೊರತೆ ಎದುರಿಸುತ್ತಿದೆ. ಉಚಿತ ವಿದ್ಯುತ್, ಶಿಕ್ಷಣ ಹಾಗೂ ಆರೋಗ್ಯ ಸೇವೆಗಳು ಹಾಗೂ ಭತ್ಯೆ ನೀಡಲು ಮುಂದಾದರೆ, ಸರ್ಕಾರ ಮತ್ತಷ್ಟು ಸಾಲ ಮಾಡಬೇಕಾಗುತ್ತದೆ. ಪ್ರತೀ ತಿಂಗಳು, ಮಹಿಳೆಯರಿಗೆ ಸಾವಿರ ರೂಪಾಯಿ ಭತ್ಯೆ ನೀಡುವುದರಿಂದ ₹3,000 ಕೋಟಿ, ಉಚಿತ ವಿದ್ಯುತ್‌ನಿಂದ ₹400 ಕೋಟಿ ಹೆಚ್ಚುವರಿ ಹೊರೆ ಬೀಳಲಿದೆ ಎಂದು ತಜ್ಞರು ಹೇಳಿದ್ದಾರೆ.

ಸಮೀಕ್ಷೆ ಏನು ಹೇಳುತ್ತದೆ?

ಚುನಾವಣೆ ಹೊಸ್ತಿಲಲ್ಲಿರುವ ಹಿಮಾಚಲ ಪ್ರದೇಶದಲ್ಲಿ ಮುಂದೆ ಯಾರು ಅಧಿಕಾರ ಹಿಡಿಯಲಿದ್ದಾರೆ ಎಂದು ಸಿ–ವೋಟರ್ ಸಮೀಕ್ಷೆ ನಡೆಸಿದೆ. ಇದರ ಪ್ರಕಾರ, ಬಿಜೆಪಿ ಅಧಿಕಾರ ಉಳಿಸಿಕೊಳ್ಳಲಿದೆ. ಬಿಜೆಪಿ 38ರಿಂದ 46 ಕ್ಷೇತ್ರಗಳಲ್ಲಿ ಗೆಲ್ಲುವ ಸಾಧ್ಯತೆಯಿದೆ ಎಂದು ಸಮೀಕ್ಷೆ ಹೇಳಿದೆ. ಆದರೆ, 2017ರ ಚುನಾವಣೆಗೆ ಹೋಲಿಸಿದರೆ, ಪಕ್ಷದ ಮತ ಪ್ರಮಾಣವು ಶೇ 48.8ರಿಂದ ಶೇ 46ಕ್ಕೆ ಕುಸಿಯಲಿದೆ.

ಪ್ರತಿಪಕ್ಷ ಕಾಂಗ್ರೆಸ್‌ನ ಮತ ಪ್ರಮಾಣವೂ ಈ ಬಾರಿ ಶೇ 41.7ರಿಂದ ಶೇ 35ಕ್ಕೆ ಕುಸಿಯಲಿದೆ. ಪಕ್ಷವು 20ರಿಂದ 28 ಕ್ಷೇತ್ರಗಳಲ್ಲಿ ಗೆಲ್ಲಬಹುದು ಎಂದಿದೆ. ಈ ಎರಡೂ ಪಕ್ಷಗಳು ಕಳೆದುಕೊಳ್ಳುವ ಮತಗಳು ಎಎಪಿಗೆ ಸಿಗಲಿವೆ. ಆಮ್ ಆದ್ಮಿ ಪಕ್ಷವು ಈ ಬಾರಿ ಮೋಡಿ ಮಾಡಲು ಸಾಧ್ಯವಾಗದಿದ್ದರೂ, ಶೇ 6.3ರಷ್ಟು ಮತಗಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಲಿದೆ. ಪ್ರಯಾಸಪಟ್ಟರೆ ಒಂದು ಕ್ಷೇತ್ರ ಗೆಲ್ಲಬಹುದು ಎಂದು ವರದಿ ನೀಡಿದೆ.

ಆಧಾರ: ಪಿಟಿಐ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಾಂಗ್ರೆಸ್‌ನ ‘ಭಾರತ್ ಜೋಡೊ ಯಾತ್ರೆ’ ಒಂದು ಸಾವಿರ ಕಿಲೋಮೀಟರ್ ಪೂರೈಸಿದ ಅಂಗವಾಗಿ 15ರಂದು ಬಳ್ಳಾರಿಯಲ್ಲಿ ಸಮಾವೇಶ ನಡೆಯಿತು. ಈ ಸಮಾವೇಶದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು. ಜನಸಾಗರವನ್ನು ಬಿಂಬಿಸುವ ಎರಡು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಟ್ವಿಟರ್ ಖಾತೆಯಲ್ಲಿ ಒಂದು ಚಿತ್ರವನ್ನು ಹಂಚಿಕೊಳ್ಳಲಾಗಿದ್ದು, ‘ಜನರು ಸುನಾಮಿಯಂತೆ ಬಂದರು’ ಎಂದು ಹೇಳಲಾಗಿದೆ. ಭಾರಿ ಸಂಖ್ಯೆಯ ಜನರು ಸೇರಿರುವ ಮತ್ತೊಂದು ಚಿತ್ರವನ್ನು ಫೇಸ್‌ಬುಕ್ ಖಾತೆಯಲ್ಲೂ ಪ್ರಕಟಿಸಲಾಗಿದೆ. ಆದರೆ, ಈ ಎರಡೂ ಚಿತ್ರಗಳು ಬಳ್ಳಾರಿಯ ಸಮಾವೇಶದ್ದು ಅಲ್ಲ.

ವೈರಲ್ ಆಗಿರುವ ಚಿತ್ರಗಳ ಪೈಕಿ ಒಂದು ಚಿತ್ರವು ನೈಜೀರಿಯಾದ್ದು. ಮತ್ತೊಂದು ಚಿತ್ರವು ತೆಲಂಗಾಣದ ಕಾಂಗ್ರೆಸ್ ಕಾರ್ಯಕ್ರಮದ್ದು ಎಂದು ‘ದಿ ಕ್ವಿಂಟ್’ ಜಾಲತಾಣ ಹೇಳಿದೆ. ನೈಜೀರಿಯಾದ ಚಿತ್ರವನ್ನು 2010ರಲ್ಲಿ ಸೆರೆಹಿಡಿಯಲಾಗಿದೆ. 2021ರ ಅಕ್ಟೋಬರ್ 13ರಂದು ತೆಲಂಗಾಣದ ಮೆಹಬೂಬ್‌ನಗರ ಜಿಲ್ಲೆಯಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ‘ವಿದ್ಯಾರ್ಥಿ ನಿರುದ್ಯೋಗ ಸೈರನ್’ ಕಾರ್ಯಕ್ರಮದಲ್ಲಿ ಬೃಹತ್ ಸಂಖ್ಯೆಯ ಜನರು ಸೇರಿದ್ದರು. ಈ ಚಿತ್ರಗಳು ಬಳ್ಳಾರಿ ಸಮಾವೇಶದ ಚಿತ್ರಗಳು ಎಂಬುದಾಗಿ ತಪ್ಪಾಗಿ ಬಿಂಬಿಸಲಾಗಿದೆ ಎಂದು ಜಾಲತಾಣ ವರದಿ ಮಾಡಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಸೋಮವಾರ ಅಕ್ಟೋಬರ್ 17, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಸಪ್ತಮಿ ಗಂ. 09-30, ನಕ್ಷತ್ರ: ಪುನರ್ವಸು ಗಂ. 29-12 ಯೋಗ: ಶಿವ ಗಂ. 16-01, ಕರಣ: ಬವ ಗಂ. 09-30, ಕನ್ಯಾ ಮಾಸದ 30 ನೇ ದಿನ.
ರಾಹುಕಾಲ: ಬೆಳಿಗ್ಗೆ 07-30 – 09:00 ಸೂರ್ಯೋದಯ : 06-25 ಸೂರ್ಯಾಸ್ತ : 06-07
ಮುಸ್ಲಿಂ ದಿನಾಂಕ: 20 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ: 3, 6

ಮೇಷ: ಇಂದು ನೀವು ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಮನೆಯಲ್ಲಿ ಸಂತಸದ ವಾತಾವರಣ ಸೃಷ್ಟಿಯಾಗಲಿದೆ. ಮಾನಸಿಕ ಪೀಡೆಗಳಿಗೆ ಒಳಗಾಗದಂತೆ ಕಾಳಜಿ ವಹಿಸಿ.

ವೃಷಭ: ಹಣಕಾಸು ಸಂಸ್ಥೆಗಳ ನೆರವಿನಿಂದ ಬಹುದಿನದ ಸ್ವಂತ ಉದ್ದಿಮೆ ಪ್ರಾರಂಭಿಸುವ ಯೋಜನೆ ಕೈಗೂಡುವುದು. ಚಿತ್ರ ನಟ, ನಟಿಯರು ಮತ್ತು ಸಂಗೀತಗಾರರಿಗೆ ಉತ್ತಮ ದಿನ. ವಿದ್ಯಾಭ್ಯಾಸ ನಿಶ್ಚಿಂತೆಯಿಂದ ಸಾಗಲಿದೆ.

ಮಿಥುನ: ಎಲ್ಲ ವಿಷಯಗಳನ್ನು ಮುಕ್ತವಾಗಿ ಚರ್ಚಿಸಲು ಸಿದ್ಧರಾಗುವಿರಿ. ಸಹವರ್ತಿಗಳೊಡನೆ ಸಂಯಮದಿಂದ ವರ್ತಿಸಿ. ದೇಹಾರೋಗ್ಯದ ಸಲುವಾಗಿ ಕಾರ್ಯಗಳನ್ನು ಬಿಟ್ಟು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಅನಿಸಲಿದೆ.

ಕರ್ಕಾಟಕ: ನಿಮ್ಮ ಮೇಲುಸ್ತುವಾರಿಯಲ್ಲಿ ಕಾರ್ಯಗಳು ಸುಗಮವಾಗಿ ಸಾಗುವುದು. ವ್ಯವಹಾರದಲ್ಲಿ ಪಾಲುದಾರರನ್ನಾಗಿ ಸೇರಿಸಿಕೊಳ್ಳಲು ಸೂಕ್ತ ವ್ಯಕ್ತಿಯ ಹುಡುಕಾಟ ನಡೆಸುವಿರಿ.

ಸಿಂಹ: ನೆಮ್ಮದಿಯ ವಿಷಯವೇನೆಂದರೆ ಧನಾಗಮದಲ್ಲಿ ಚಿಂತೆ ಇರದು. ದೀರ್ಘಕಾಲಿಕ ಕೆಲಸಗಳು ನಿಧಾನವಾಗಿ ಸಾಗಲಿವೆ. ಬಾಕಿ ಸಂದಾಯವಾಗುವುದು. ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗುವಿರಿ.

ಕನ್ಯಾ: ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭವೊಂದು ಇಂದು ಬರಲಿದೆ. ಮಕ್ಕಳ ಹೆಸರಿನಲ್ಲಿ ನಿವೇಶನ ಖರೀದಿಸುವ ಯೋಚನೆಗಳು ಈ ದಿನ ಕಾರ್ಯರೂಪಕ್ಕೆ ತರಬಹುದು.

ತುಲಾ: ಜೀವನದಲ್ಲಿ ಬೇರೆಯವರ ಹಿಡಿತದಿಂದ ಬಳಲಿರುವ ನಿಮಗೆ ಆ ಸಮಸ್ಯೆಯಿಂದ ಹೊರಬರುವ ಅವಕಾಶಗಳು ಎದುರಾಗುವುದು. ವೈಯಕ್ತಿಕ ಕೆಲಸಗಳಿಗೆ ಯಾವುದೇ ಅಡಚಣೆ ಇರುವುದಿಲ್ಲ.

ವೃಶ್ಚಿಕ: ಶುಭ ಕಾರ್ಯ ನಡೆಸಿಕೊಡುವಲ್ಲಿ ಪ್ರಮುಖ ಪಾತ್ರ ನಿಮ್ಮದಾಗಲಿದೆ. ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ಸಹವರ್ತಿಗಳ ಅಭಿಪ್ರಾಯ ಪಡೆದುಕೊಳ್ಳಿ. ಒದಗಿಬರಲಿರುವ ಅವಕಾಶ ಕೈತಪ್ಪದಂತೆ ನೋಡಿಕೊಳ್ಳಿ.

ಧನು: ಮಡದಿ ಮಕ್ಕಳ ಆರೋಗ್ಯದಲ್ಲಿ ಹೆಚ್ಚಿನ ಗಮನವಿರಲಿ ಪ್ರಾಮಾಣಿಕವಾಗಿ ಹಾಗೂ ನಿಷ್ಠೆಯಿಂದ ಕೆಲಸಕಾರ್ಯದಲ್ಲಿ ತೊಡಗಿಸಿಕೊಂಡಲ್ಲಿ ನಿಧಾನವಾಗಿ ಯಶಸ್ಸು ಪ್ರಾಪ್ತಿಯಾಗುವುದು. ಸಹೋದ್ಯೋಗಿಗಳಿಂದ ಉತ್ತಮ ಸಹಕಾರ.

ಮಕರ: ಬೆಲೆ ಬಾಳುವ ವಸ್ತುವನ್ನು ಕಳೆದುಕೊಳ್ಳುವಂತಾಗಲಿದೆ. ಆದ್ದರಿಂದ ಈ ದಿನ ಎಚ್ಚರದಿಂದಿರಿ. ವ್ಯವಹಾರದಲ್ಲಿನ ಲಾಭವು ನಿಮ್ಮ ಅಭಿವೃದ್ಧಿಗೆ ಸಹಕಾರಿಯಾಗಲಿದೆ.

ಕುಂಭ: ಆರ್ಥಿಕವಾಗಿ ಲಾಭ ಪಡೆಯುವುದಕ್ಕೆ ಹೋರಾಟ ನಡೆಸಬೇಕಾಗುವ ಪರಿಸ್ಥಿತಿ ಎದುರಾಗಬಹುದು. ಆರೋಗ್ಯವನ್ನು ಕಳೆದುಕೊಳ್ಳಬೇಡಿ. ಎತ್ತರದಲ್ಲಿ ಹತ್ತಿ ಕೆಲಸ ಮಾಡುವವರು, ಸಾಹಾಸಿ ಪ್ರವೃತ್ತಿಯವರು ಜಾಗೃತರಾಗಿರಿ.

ಮೀನ: ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ ಅಥವಾ ರಾಜಕೀಯ ಕ್ಷೇತ್ರದಲ್ಲಿ ಸ್ಥಾನಮಾನ, ಗೌರವಗಳು, ಪುರಸ್ಕಾರ ಲಭಿಸಲಿದೆ. ಈ ದಿನ ನಿಮ್ಮ ಆರೋಗ್ಯವು ಸುಧಾರಿಸುವುದು. ವ್ಯವಹಾರ ರಂಗದಲ್ಲಿ ಆತ್ಮೀಯರ ಸಲಹೆ ಸ್ವೀಕರಿಸಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಸಾರ್ಥಕ ಬದುಕಿನ ರೀತಿ

ಕಾಯಕವ ಚರಿಸುತ್ತ, ಮಾನಸವ ಸಯ್ತಿಡುತ |
ಆಯಸಂಬಡಿಸದವೊಲಂತರಾತ್ಮನನು ||
ಮಾಯೆಯೊಡನಾಡುತ್ತ, ಬೊಮ್ಮನನು ಭಜಿಸುತ್ತ |
ಆಯುವನು ಸಾಗಿಸೆಲೊ – ಮಂಕುತಿಮ್ಮ || 736 ||

ಪದ-ಅರ್ಥ: ಚರಿಸುತ್ತ = ಮಾಡುತ್ತ, ಮಾನಸವ = ಮನಸ್ಸನ್ನು, ಸಯ್ತಿಡುತ = ಸಮಾಧಾನಗೊಳಿಸುತ್ತ, ಆಯಸಂಬಡಿಸದವೊಲಂತರಾತ್ಮನನು = ಆಯಸಂಬಡಿಸದವೊಲ್ (ಆಯಾಸಗೊಳಿಸದಂತೆ) + ಆತ್ಮನನು , ಆಯುವನು = ಆಯುಷ್ಯವನ್ನು

ವಾಚ್ಯಾರ್ಥ: ದೊರೆತ ಕಾರ್ಯವನ್ನು ಮಾಡುತ್ತ, ಮನಸ್ಸನ್ನು ಸಮಾಧಾನವಾಗಿಟ್ಟುಕೊಂಡು, ಆತ್ಮವನ್ನು ಆಯಾಸಗೊಳಿಸದೆ, ಜಗತ್ತಿನಮಾಯೆಯೊಡನೆ ಆಟ ವಾಡುತ್ತ, ಭಗವಂತನನ್ನು ಭಜಿಸುತ್ತ, ನಿನ್ನ ಆಯುಷ್ಯವನ್ನು ಸಾಗಿಸು.

ವಿವರಣೆ: ಹುಟ್ಟಿದ ಮೇಲೆ ಸಾಯುವ ತನಕ ಬದುಕಲೇಬೇಕು. ಹೇಗೆ ಬದುಕಬೇಕು ಎನ್ನುವುದನ್ನು ಈ ಕಗ್ಗ ಸೂತ್ರರೂಪವಾಗಿ ಹೇಳುತ್ತದೆ. ನಮ್ಮ ಯೋಗ್ಯತೆಗೆ ತಕ್ಕಂತೆ, ಅಂದಿನ ಪರಿಸ್ಥಿತಿಗೆ ಅನುಗುಣವಾಗಿ, ದೈವ ಬಯಸಿದಂತೆ ದೊರೆತ ಕಾರ್ಯವನ್ನು ಶ್ರದ್ಧೆಯಿಂದ ಮಾಡಬೇಕು. ಕೊರಗುತ್ತ, ‘ಅಯ್ಯೋ ಇದೇನು ಕೆಲಸ’ ಎಂದು ಮಾಡುವುದು ಕೆಲಸಕ್ಕೆ ಮಾಡಿದ ಅಪಮಾನ. ಯಾವ ಕಾರ್ಯವೂ ಕನಿಷ್ಠವಲ್ಲ. ಹೀಗೆ ಕಾರ್ಯ ಮಾಡುವಾಗ ಮನಸ್ಸನ್ನು ಸಮಾಧಾನವಾಗಿ ಇಟ್ಟುಕೊಳ್ಳಬೇಕು. ಮನಸ್ಸು ಸ್ಥಿಮಿತದಲ್ಲಿಲ್ಲದಾಗ ಕಾರ್ಯ ಸರಿಯಾಗಿ ಆಗಲಾರದು. ಮತ್ತು ಕಾರ್ಯದಲ್ಲಿ ಶ್ರದ್ಧೆ ಇಲ್ಲದಾಗ ಮನಸ್ಸು ಕದಡಿ ಹೋಗುತ್ತದೆ. ಆದ್ದರಿಂದ ಮನಸ್ಸಿನ ಹದವನ್ನು ಸದಾಕಾಲ ಕಾಪಾಡಿಕೊಳ್ಳಬೇಕು. ಕಗ್ಗ ಹೇಳುತ್ತದೆ, “ಅಂತರಾತ್ಮನನ್ನು ಆಯಾಸಗೊಳಿಸದಂತೆ” ಇರಬೇಕು. ಅಂತರಾತ್ಮನಿಗೆ ಆಯಾಸವೆಂದರೇನು? ಅಂತರಾತ್ಮನಿಗೆ ಆಯಾಸವಾಗುತ್ತದೆಯೇ? ಯಾವ ಕಾರ್ಯದಿಂದ ಆಯಾಸವಾದೀತು? ನ್ಯಾಯವಾದ, ಪ್ರಾಮಾಣಿಕವಾದ, ದೇಶಪ್ರೇಮದ ಕೆಲಸ ಮಾಡಿದಾಗ ಆತ್ಮತೃಪ್ತಿಯಾಯಿತು ಎನ್ನುತ್ತೇವೆ. ಅಂಥ ವ್ಯಕ್ತಿ, ಯಾರೇ ಆಗಲಿ ಅವರ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಬಲ್ಲ, ಯಾಕೆಂದರೆ ಆತ್ಮಪ್ರಜ್ಞೆ ನಿಷ್ಕಳಂಕವಾಗಿದೆ. ಆದರೆ ಮತ್ತೊಬ್ಬರಿಗೆ ಮೋಸ ಮಾಡಿದಾಗ, ಅನ್ಯಾಯದಿಂದ ಹಣ ಸಂಪಾದಿಸಿದಾಗ, ದೇಶ ದ್ರೋಹ ಮಾಡಿದಾಗ, ಅವನ ಆತ್ಮವೇ ಅಪರಾಧಿಭಾವದಿಂದ ಕುದಿದು ಹೋಗುತ್ತದೆ, ತಳಮಳಿಸುತ್ತದೆ. ಅದೇ ಅಂತರಾತ್ಮನಿಗಾಗುವ ಆಯಾಸ. ಅಂತರಾತ್ಮ ಆಯಾಸಪಡದೆ ಇರಬೇಕಾದರೆ ಅನ್ಯಾಯವನ್ನು ಚಿಂತಿಸದ, ದ್ರೋಹಕ್ಕೆ ಮನ ನೀಡದ, ಪರರ ದುಃಖಕ್ಕೆ ಕಾರಣವಾಗದ ನಡೆ ನಮ್ಮದಾಗಬೇಕು. ಮಾಯೆಯೊಡನೆ ಆಡುವುದೆಂದರೇನು? ಸರಿ ತಪ್ಪುಗಳನ್ನು ಪರಾಮರ್ಶಿಸದೆ ನಾವು ಪ್ರಪಂಚದ ಮಾಯೆಯ ಭ್ರಮೆಯಲ್ಲೇ ಬದುಕುತ್ತೇವೆ. ಶಾಶ್ವತವಲ್ಲದಜಗತ್ತಿನಲ್ಲಿ ಸ್ವಾರ್ಥಪರತೆಯಿಂದ ಮಾಡಬಾರದ್ದನ್ನುಮಾಡುತ್ತೇವೆ. ನಂತರ ಒದ್ದಾಡುತ್ತೇವೆ. ಬುದ್ಧಿವಂತರಾದವರು ಬದುಕಿನ ಪ್ರತಿಯೊಂದು ನಡೆಯೂ ಮಾಯೆಯೆಂದು ತಿಳಿದೂ ಅದರಲ್ಲಿ ನಿರ್ವಂಚನೆಯಿಂದ ಭಾಗವಹಿಸುತ್ತಾರೆ. ಈಮಾಯೆಯನ್ನು ಸೃಷ್ಟಿಸಿದ ಭಗವಂತನನ್ನು ಸದಾಕಾಲಧ್ಯಾನಿಸುತ್ತ ತನ್ನ ಆಯುಷ್ಯವನ್ನು ಕಳೆಯುತ್ತಾರೆ. ಈ ಐದು ರೀತಿಗಳನ್ನು ನೆನಪಿನಲ್ಲಿಟ್ಟು ಬದುಕು ಸಾಗಿಸಿದರೆ ಅದು ಖಂಡಿತವಾಗಿ ಸಾರ್ಥಕ ಬದುಕಾಗುತ್ತದೆ.

ಪದಬಂಧ 5111

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪಾರಮಾರ್ಥಿಕವಲ್ಲ!ಮಣ್ಣಿಗೆ ಸಂಬಂಧಿಸಿದ್ದು! (3)
3.ಮಧುರವಾದ ಧ್ವನಿ (4)
5.ಗುಜರಿ ಸೇರುವಷ್ಟು ಭಗ್ನಗೊಂಡಿರುವುದು (4)
7.ಕನ್ನಡಿಗನು ರಚಿಸಿಕೊಂಡಿರುವ ಕಮಿಟಿ (3)
8.ಯಾವುದೇ ತಪ್ಪು ಮಾಡದ ನಿರ್ದೋಷಿ (5)
10.ಆಕೆಯದ್ದು ಕಕ್ಷೆಗೇರುವ ಬಯಕೆ! (3)
11.ಎಲ್ಲರೂ ಸಭೆ ಸೇರಿರುವ ಸ್ಥಳ (4)
15.ಕೊನೆಗೆ ಪ್ರಾಣವಿಟ್ಟು ಒತ್ತಿ ಉಚ್ಚರಿಸುವಅಕ್ಷರ (4)
16.ಉಸುಕನ್ನು ಹರಡಿದ ಕಡೆ ಪ್ರದರ್ಶಿತವಾದ ಶಕ್ತಿ (3)

ಮೇಲಿಂದ ಕೆಳಕ್ಕೆ
1.ದ್ರವರೂಪದಲ್ಲೇ ಕಾಣಿಸುವ ಲೋಹ (3)
2.ಬಲ್ಲವರಿಗಾಗಿ ಹಬ್ಬಿರುಸಿರುವ ಬಳ್ಳಿ (3)
3.ಕೆಮ್ಮಿದಾಗ ಹೊರಬೀಳುವ ಶ್ಲೇಷ್ಮ (2)
4.ವರ್ಧಂತಿ ಎಂದದ್ದು ಬರೀ ಗಾಳಿಸುದ್ದಿ! (3)
6.ತವರು ಮನೆಯಲ್ಲಿರುವ ಲೋಹ (3)
7.ಏಕಾಗ್ರತೆಯಿಂದ ನಿರ್ಮಿಸಿರುವ ಗೋರಿ (3)
8.ನಿರೀಕ್ಷಕನ ಬರುವಿಕೆಗೆ ಆಸೆಯಿಂದ ಇದಿರು ನೋಡುವಿಕೆ (3)
9.ಸಾಕ್ಷರನ ಮುಂದಿರುವ ಅಸುರ (3)
10.ಶ್ರಮವಹಿಸಿ ಕಟ್ಟಿರುವ ಋಷಿಯ ವಾಸಸ್ಥಾನ (3)
12.ಈತ ಅತ್ಯಂತ ಭಾವಜೀವಿ (3)
13.ಹಾವು ಸೇರಿಕೊಂಡಿರುವ ಕಣಜ (3)
14.ಕಾಜಾಣ ಹಿಡಿದವ ಬುದ್ಧಿವಂತ! (2)



5110ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗಿಲಿಕೆ 2.ಜಲಜ
4.ಆವರೋಹ 7.ಪ್ರತಿಫಲ
9.ನವಯೌವನ 12.ಸ್ವಾಭಿಮಾನ
13.ರುಷುವತ್ತು 15.ನಕ್ಷತ್ರ
16.ಮನವಿ

ಮೇಲಿಂದ ಕೆಳಕ್ಕೆ:
1.ಗಿಧ್ರಾಂಅ 3.ಜಟಿಲ
5.ವರ 6.ಹಯವದನ
7.ಪ್ರಭಾವಬೀರು 8.ಫಲ
10.ನಾಭಿ 11.ನವ
12.ಸ್ವಾಧೀನ 14.ತ್ತುಪವಿ

ಸುಡೊಕು 5497

7		4		5				3
			1		9	6		5
6		5		3			1	
2					4	1		9
	7	1		8				
4			9		2	3		7
	4		3		7		2	1
						7		
1	3			2			6	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5496 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಹೊರವಲಯದ ಸಂಗನಕಲ್ ಸಮೀಪದಿಂದ ಮೋಕಾವರೆಗೆ ಯಾತ್ರೆ ● ಮಹಿಳಾ ಕೃಷಿ ಕಾರ್ಮಿಕರ ಜತೆ ಮಾತುಕತೆ

ಬಳ್ಳಾರಿ: ಎರಡನೇ ದಿನವೂ ಕುಂದದ ಉತ್ಸಾಹ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಕೈಗೊಂಡಿರುವ 'ಭಾರತ್ ಜೋಡೊ ಯಾತ್ರೆ'ಗೆ ಜಿಲ್ಲೆಯಲ್ಲಿ ಭಾನುವಾರವೂ ಬೆಂಬಲ ವ್ಯಕ್ತವಾಯಿತು. ಜನರು ಅತ್ಯುತ್ಸಾಹದಿಂದ ಪಾದಯಾತ್ರೆಯಲ್ಲಿ ಪಾಲ್ಗೊಂಡರು.

ಶನಿವಾರ ರಾತ್ರಿ ಸಂಗನಕಲ್‌ನಲ್ಲಿ ತಂಗಿದ್ದ ರಾಹುಲ್ ಗಾಂಧಿ ಪೂರ್ವ ನಿಗದಿಯಂತೆ ಬೆಳಿಗ್ಗೆ 6.30ಕ್ಕೆ ಸರಿಯಾಗಿ ಪಾದಯಾತ್ರೆ ಆರಂಭಿಸಿದರು. ಮಹಾರಾಷ್ಟ್ರ, ಆಂಧ್ರಪ್ರದೇಶ , ಮಧ್ಯ ಪ್ರದೇಶ, ರಾಜಸ್ತಾನ, ದೆಹಲಿ ಸೇರಿದಂತೆ ವಿವಿಧ ರಾಜ್ಯಗಳಿಂದ ಬಂದಿರುವ ಯಾತ್ರಿಗಳು ಅವರ ಜತೆ ಹೆಜ್ಜೆ ಹಾಕಿದರು.

ಎಂದಿನಂತೆ 2 ಸುತ್ತಿನ ಭದ್ರತೆಯಲ್ಲಿ ರಾಹುಲ್ ಮುನ್ನಡೆದರು. ಅವರ ಪಕ್ಕದಲ್ಲಿ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ರಾಜ್ಯದ ಉಸ್ತುವಾರಿ ರಣದೀಪ್ ಸುರ್ಜೆವಾಲ, ಶಾಸಕ ನಾಗೇಂದ್ರ ಇದ್ದರು. ಕೊಂಚ ಹೊತ್ತಿನ ಬಳಿಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಸೇರಿಕೊಂಡರು. ಕಾಂಗ್ರೆಸ್ ಮುಖಂಡ ದಿಗ್ವಿಜಯ್ ಸಿಂಗ್ ಅನತಿ ದೂರದಲ್ಲಿ ನಡೆಯುತ್ತಿದ್ದರು.

ರಾಹುಲ್ ಗಾಂಧಿ ಭಾನುವಾರ ಮೋಕಾ ಆಸ್ಪತ್ರೆಗೆ ಭೇಟಿ ನೀಡಿ, ವಿದ್ಯುತ್ ಸ್ಪರ್ಶದಿಂದ ಗಾಯಗೊಂಡ ಪಕ್ಷದ ಕಾರ್ಯಕರ್ತರ ಆರೋಗ್ಯ ವಿಚಾರಿಸಿದರು

ಪಾದಯಾತ್ರೆಗೆ ಶನಿವಾರದಷ್ಟು ರಂಗಿರದಿದ್ದರೂ ಉತ್ಸಾಹ ಕುಂದಿರಲಿಲ್ಲ. ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಕಲಾ ತಂಡಗಳು ಯಾತ್ರೆಯಲ್ಲಿದ್ದವು. ರಾಹುಲ್ ಎಂದಿನಂತೆ ಅಕ್ಕಪಕ್ಕದವರ ಜತೆ ಮಾತನಾಡುತ್ತಾ ಬಿರುಸಿನಿಂದ ಸಾಗುತ್ತಿದ್ದರು. ರಸ್ತೆಯ ಇಕ್ಕೆಲ್ಲಗಳಲ್ಲೂ ನಿಂತಿದ್ದ ಜನರತ್ತ ಕೈ ಬೀಸುತ್ತಿದ್ದರು. ಜನರೂ ತಮ್ಮ ನಾಯಕನನ್ನು ನೋಡಲು ಕಾಯುತ್ತಿದ್ದರು.

ರಾಹುಲ್ ರಸ್ತೆ ಬದಿಯಲ್ಲಿ ಚಹಾ ಕುಡಿದರು. ಬಿಸ್ಕತ್ ತಿಂದರು. ಅವರನ್ನು ಭೇಟಿಯಾಗಬೇಕೆಂಬ ಹಂಬಲದಿಂದ ಎರಡು ದಿನಗಳಿಂದಲೂ ಪ್ರಯತ್ನಿಸುತ್ತಿದ್ದ ಮಹಿಳೆಯೊಬ್ಬರಿಗೆ ಯಾತ್ರೆಯಲ್ಲಿದ್ದ ಯೋಗೇಂದ್ರ ಯಾದವ್ ನೆರವಾದರು. ರಾಹುಲ್ ಅವರನ್ನು ಭೇಟಿ ಮಾಡಿಸಿದರು.

ಮೋಕಾ ಬಳಿ ರಾಹುಲ್ ಮಹಿಳಾ ಕೃಷಿ ಕಾರ್ಮಿಕರ ಜತೆ ಮಾತನಾಡಿದರು. ಗೃಹ ರಕ್ಷಕ ದಳದ ಸಿಬ್ಬಂದಿ ಕೈ ಕುಲುಕಿ ಕುಶಲೋಪರಿ ವಿಚಾರಿಸಿದರು. ಪಾದ ಯಾತ್ರೆ ಸಮಯದಲ್ಲಿ ತುಂತುರು ಮಳೆ ಆರಂಭವಾಯಿತು.

ರಾಹುಲ್ ಗಾಂಧಿ ಸಂಜೆಯೂ ಸುಮಾರು ಒಂದು ಗಂಟೆ ಪಾದಯಾತ್ರೆ ಮಾಡಿದರು. ಪಕ್ಷದ ಮುಖಂಡ ಕಮಲ್‌ನಾಥ್ ಅವರ ಜತೆಯಲ್ಲಿದ್ದರು. ಸಂಗನಕಲ್‌ಗೆ ಹಿಂತಿರುಗಿ ಕನ್ವೆನ್‌ಷನ್ ಹಾಲ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಸೋಮವಾರ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದ್ದು, ರಾಹುಲ್ ಮತ್ತು ಪಕ್ಷದ ಉಳಿದ ಮತದಾರರಿಗೆ ಇಲ್ಲೇ ಮತದಾನ ಮಾಡಲು ವ್ಯವಸ್ಥೆ ಮಾಡಲಾಗಿದೆ. ಈ ಕಾರಣಕ್ಕೆ ಪಾದಯಾತ್ರೆಯನ್ನು ದಿನದ ಮಟ್ಟಿಗೆ ಸ್ಥಗಿತಗೊಳಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬಿಜೆಪಿಯಿಂದ ಆ್ಯನಿಮೇಷನ್ ವಿಡಿಯೊ ಬಿಡುಗಡೆ

ನವದೆಹಲಿ (ಪಿಟಿಐ): 'ಭಾರತ್ ಜೋಡೊ ಯಾತ್ರೆ' ಕುರಿತು ವ್ಯಂಗ್ಯವಾಡಿರುವ ಬಿಜೆಪಿಯು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ರೇಖಾಚಿತ್ರದ (ಆ್ಯನಿಮೇಷನ್) ವಿಡಿಯೊವೊಂದನ್ನು ಭಾನುವಾರ ಬಿಡುಗಡೆ ಮಾಡಿದೆ. ಈ ವಿಡಿಯೊಗೆ ಕಾಂಗ್ರೆಸ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ.

ಎರಡು ನಿಮಿಷಗಳ ವಿಡಿಯೊ ಇದಾಗಿದ್ದು, ಶೋಲೆ ಚಿತ್ರದಲ್ಲಿ ನಟ ಗೋವರ್ಧನ್ ಅಸ್ರಾನಿ ಅವರು ನಿರ್ವಹಿಸಿದ್ದ ಪಾತ್ರದಂತೆ ರಾಹುಲ್ ಗಾಂಧಿ ಅವರನ್ನು ಬಿಂಬಿಸಲಾಗಿದೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ರಾಹುಲ್ ಅವರನ್ನು ಉಲ್ಲೇಖಿಸಲಾಗಿರುವ ವಿಡಿಯೊಗೆ 'ಅಮ್ಮ, ಈ ಸಂಕಟ ಏಕೆ ಮುಗಿಯುತ್ತಿಲ್ಲ? ಇದು ಮುಗಿದಿದೆ... ಟಾಟಾ.. ಗುಡ್‌ಬೈ' ಎಂದು ಅಡಿಬರಹ ನೀಡಲಾಗಿದೆ.

ಈ ವಿಡಿಯೊಗೆ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್ ಸಂವಹನ ಉಸ್ತುವಾರಿ ಜೈರಾಮ್ ರಮೇಶ್, 'ಭಾರತ್ ಜೋಡೊ ಯಾತ್ರೆ'ಯ ಯಶಸ್ಸನ್ನು ಅಣಕ ಮಾಡಲು ಬಿಜೆಪಿ ಕಂಡುಕೊಂಡಿರುವ ಹೊಸ ಅಸ್ತ್ರ ಇದು.

ಹತಾಶೆ + ಖಿನ್ನತೆ = ರೇಖಾಚಿತ್ರ. ಈ ನಡೆಯನ್ನು 'ದಯನೀಯ' ಎಂದು ಕರೆಯುವುದು ಅತ್ಯಂತ ಚಿಕ್ಕ ಪದವಾಗುತ್ತದೆ' ಎಂದು ಹೇಳಿದ್ದಾರೆ.

ವಿದ್ಯುತ್ ಸ್ಪರ್ಶ; ನಾಲ್ವರಿಗೆ ಗಾಯ

ಪಾದಯಾತ್ರೆ ವೇಳೆ ವಿದ್ಯುತ್ ಸ್ಪರ್ಶವಾಗಿ ನಾಲ್ವರಿಗೆ ಸುಟ್ಟ ಗಾಯಗಳಾಗಿದ್ದು, ಮೋಕಾ ಆಸ್ಪತ್ರೆಗೆ ಸೇರಿಸಲಾಗಿದೆ. ಹೊಸ ಮೋಕಾ ಬಳಿ ಭಾನುವಾರ ರಾಷ್ಟ್ರಧ್ವಜ ಹಿಡಿದು ಹೊರಟಿದ್ದಾಗ ಈ ಘಟನೆ ಸಂಭವಿಸಿತು. ಧ್ವಜ ಹಾಕಿದ್ದ ಕಬ್ಬಿಣದ ಪೈಪ್ ವಿದ್ಯುತ್ ತಂತಿಗೆ ತಗುಲಿತು.

ಮೋಕಾ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಮಣ್ಣ, ಗಡೇಕಲ್ ದೊಡ್ಡಪ್ಪ, ಸಂತೋಷ್ ಕುಮಾರ್ ಹಾಗೂ ಎ. ಪಂಪಾಪತಿ ಗಾಯಗೊಂಡರು. ಬಳಿಕ ರಾಹುಲ್ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಚಿಕಿತ್ಸೆ ವೆಚ್ಚ ಭರಿಸುವುದಾಗಿ ಹೇಳಿದರು. ಗಾಯಾಳುಗಳಿಗೆ ತಲಾ ₹ 1 ಲಕ್ಷ ನೀಡಲಾಗುವುದು. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಬೆಂಗಳೂರಿಗೆ ಕಳುಹಿಸುವ ವ್ಯವಸ್ಥೆ ಮಾಡುವಂತೆ ರಾಹುಲ್ ತಿಳಿಸಿದ್ದಾಗಿ ಶಾಸಕ ನಾಗೇಂದ್ರ ಹೇಳಿದರು.

ಸುದ್ದಿ 2 ನಿಮಿಷ

ಬೀದರ್ ಜಿಲ್ಲೆಯಲ್ಲಿ ಭೂಕಂಪನ

ಬೀದರ್: '24 ಗಂಟೆಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಎರಡು ಕಡೆ ಭೂಕಂಪನವಾಗಿದೆ' ಎಂದು ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ ತಿಳಿಸಿದ್ದಾರೆ.

ಕಮಲನಗರ ತಾಲ್ಲೂಕಿನ ಡೊಣಗಾಂವ್ (ಎಂ) ದಲ್ಲಿ ಶನಿವಾರ ರಾತ್ರಿ 9.06ಕ್ಕೆ ಭೂಕಂಪನವಾಗಿ ರಿಕ್ಟರ್ ಮಾಪನದಲ್ಲಿ 1.4 ತೀವ್ರತೆ ದಾಖಲಾಗಿದೆ.

ಹುಮನಾಬಾದ್ ತಾಲ್ಲೂಕಿನ ಹಿಲಾಲಪುರ ಹಾಗೂ ಸಕ್ಕರಗಂಜ ಗ್ರಾಮಗಳ ಮಧ್ಯೆ ಭಾನುವಾರ ಬೆಳಿಗ್ಗೆ 10.44ಕ್ಕೆ ಭೂಕಂಪನ ಆಗಿದ್ದು, ರಿಕ್ಟರ್ ಮಾಪನದಲ್ಲಿ 3.3 ತೀವ್ರತೆ ದಾಖಲಾಗಿದೆ. ಭೂಮಿಯ 5 ಕಿ.ಮೀ. ಆಳದಲ್ಲಿ ಭೂಕಂಪನ ಸಂಭವಿಸಿದೆ.

'ಇದು ಭೂಮಿಯೊಳಗೆ ಸಂಭವಿಸುವ ಸಹಜ ಪ್ರಕ್ರಿಯೆಯಾಗಿದೆ. ಮಳೆಗಾಲದಲ್ಲಿ ಭೂ-ಭೌತಿಕ ವಿದ್ಯಮಾನಗಳು ಸಂಭವಿಸುತ್ತವೆ. ಭೂವಿಜ್ಞಾನಿಗಳ ಪ್ರಕಾರ ಬೀದರ್ ಜಿಲ್ಲೆ ಕಂಪನವಲ್ಲದ ಎರಡನೇ ವಲಯದಲ್ಲಿದೆ. ಹೀಗಾಗಿ ಸಾರ್ವಜನಿಕರು ಭಯ ಪಡುವ ಅಗತ್ಯವಿಲ್ಲ' ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಕಾವೇರಿ ತೀರ್ಥೋದ್ಭವ ಇಂದು

ಮಡಿಕೇರಿ: ಸಾವಿರಾರು ಭಕ್ತರ ನಂಬಿಕೆಯ ಪವಿತ್ರ ಕಾವೇರಿ ತೀರ್ಥೋದ್ಭವಕ್ಕೆ ಇಲ್ಲಿನ ತಲಕಾವೇರಿ ಸಜ್ಜಾಗಿದೆ.

ಅ.17ರಂದು (ಸೋಮವಾರ) ಸಂಜೆ 7.21ಕ್ಕೆ ಮೇಷ ಲಗ್ನದಲ್ಲಿ ಕಾವೇರಿ ತೀರ್ಥರೂಪಿಣಿಯಾಗಿ ಇಲ್ಲಿನ ಬ್ರಹ್ಮಕುಂಡಿಕೆಯಲ್ಲಿ ಉಕ್ಕಲಿದ್ದಾಳೆ ಎಂಬುದು ಭಕ್ತರ ನಂಬಿಕೆ. ಈ ಗಳಿಗೆ ಕಣ್ತುಂಬಿಕೊಳ್ಳಲು ಹಾಗೂ ಪವಿತ್ರ ಜಲ ಸಂಗ್ರಹಿಸಿಕೊಳ್ಳಲು ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಇಲ್ಲಿಗೆ ಬರಲಿದ್ದಾರೆ.

ಎರಡು ವರ್ಷಗಳಿಂದ ಕೋವಿಡ್ ನಿರ್ಬಂಧಗಳಿಂದ ಸರಳವಾಗಿ ನಡೆದಿದ್ದ ತೀರ್ಥೋದ್ಭವ ಈ ಬಾರಿ ಅದ್ದೂರಿಯಾಗಿ ನೆರವೇರಲಿದೆ. ಸಂಜೆ ತೀರ್ಥೋದ್ಭವವಾಗುವುದರಿಂದ ಅಂದಾಜು 10ಸಾವಿರಕ್ಕೂ ಅಧಿಕ ಮಂದಿ ಸೇರುವ ನಿರೀಕ್ಷೆ ಇದ್ದು, ಜಿಲ್ಲಾಡಳಿತ ಸಿದ್ಧತಾ ಕಾರ್ಯ ಕೈಗೊಂಡಿದೆ.

ಸೋಮವಾರ ಸಂಜೆ 5ರಿಂದಲೇ ವಿವಿಧ ಪೂಜಾ ಕಾರ್ಯಗಳು ಆರಂಭವಾಗಲಿವೆ. ಅರ್ಚಕ ಗುರುರಾಜ್ ಆಚಾರ್ಯ ನೇತೃತ್ವದಲ್ಲಿ 9 ಮಂದಿ ಅರ್ಚಕರು ಕುಂಕುಮಾರ್ಚನೆ, ಅಭಿಷೇಕ ಹಾಗೂ ಮಹಾಪೂಜಾ ಕಾರ್ಯಗಳನ್ನು ನೆರವೇರಿಸಲಿದ್ದಾರೆ.

ಕಾವೇರಿ ಮಾತೆ, ಮಹಾಗಣಪತಿ, ಅಗಸ್ತೇಶ್ವರ ದೇವಾಲಯಗಳಿಗೆ ಹೂವಿನ ಅಲಂಕಾರ ಮಾಡಲಾಗಿದೆ. ವಿಶೇಷ ಬಸ್ ಸೌಕರ್ಯ ಕಲ್ಪಿಸಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯ: 25ರಂದು ಸೇವೆ ಇಲ್ಲ

ಸುಬ್ರಹ್ಮಣ್ಯ: ಸೂರ್ಯ ಗ್ರಹಣದ ಕಾರಣ ಕುಕ್ಕೆ ಸುಬ್ರಹ್ಮಣ್ಯ ದೇಗುಲದಲ್ಲಿ ಅ.25ರಂದು ಯಾವುದೇ ಸೇವೆ ನಡೆಯುವುದಿಲ್ಲ, ಪ್ರಸಾದ ವ್ಯವಸ್ಥೆಯೂ ಇರುವುದಿಲ್ಲ. ಅ. 26ರಂದು ಬೆಳಗ್ಗೆ 9 ಗಂಟೆಯ ನಂತರ ದೇವರ ದರ್ಶನ, ಸೇವೆಗಳು ಆರಂಭಗೊಳ್ಳಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

14ನೇ ವರ್ಷದ ಚಿರಸ್ಮರಣೆ



ಹನುಮಂತಯ್ಯ ಉರುಫ್ ಕೆಂದಪ್ಪ
(ನಿಧನ: 17.10.2008)
ದಿವಂಗತರ ಆತ್ಮಕ್ಕೆ ಶಾಂತಿಕೋರುವ:
ಹೆಂಡತಿ, ಮಗ ಮತ್ತು ಮೊಮ್ಮಕ್ಕಳು
ಅವರಗೆರೆ, ಬಿಡದಿ, ರಾಮನಗರ.

'ಹಿಂದೂ ಪರಿಶಿಷ್ಟರಿಗೆ ಮಾತ್ರ ಮೀಸಲಾತಿ'

ವಿಶ್ವ ಹಿಂದೂ ಪರಿಷತ್ತಿನ ರಾಷ್ಟ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಸ್ಲಿಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಪರಿಶಿಷ್ಟರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಬಾರದು' ಎಂದು ವಿಶ್ವ ಹಿಂದೂ ಪರಿಷತ್ತಿನ ರಾಷ್ಟ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಆಗ್ರಹಿಸಿದರು.

'ಪರಿಶಿಷ್ಟ ಜಾತಿಯ ವ್ಯಕ್ತಿಗಳು ಬೇರೆ ಧರ್ಮಗಳಿಗೆ ಮತಾಂತರಗೊಂಡರೆ ಅವರಿಗೆ ಪರಿಶಿಷ್ಟ ಜಾತಿಯ ಸ್ಥಾನ ನೀಡಬೇಕೇ ಎಂದು ಪರಿಶೀಲಿಸಲು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ನೇತೃತ್ವದ ವಿಚಾರಣಾ ಆಯೋಗವನ್ನು ಕೇಂದ್ರವು ನೇಮಿಸಿದೆ. 'ಸಂವಿಧಾನದ ಆಶಯದಂತೆ ಹಿಂದೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮಾತ್ರ ಮೀಸಲಾತಿಯ ಹಕ್ಕುಗಳನ್ನು ನೀಡಬೇಕು' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಪರಿವರ್ತಿತ ಪರಿಶಿಷ್ಟ ಜಾತಿಗೆ ಅನುಸೂಚಿತ ಜಾತಿ ಸ್ಥಿತಿ ಮತ್ತು ಅಸ್ತಿತ್ವದಲ್ಲಿರುವ ಪರಿಶಿಷ್ಟ ಜಾತಿಗಳ ಮೇಲೆ ಇದರಿಂದಾಗುವ ಪರಿಣಾಮಗಳ ಕುರಿತು ವಿಸ್ತೃತ ಸಮಾಲೋಚನೆಗಳು ನಡೆಯಬೇಕು. ಈ ಪ್ರಕ್ರಿಯೆಯಲ್ಲಿ ವಿಶ್ವ ಹಿಂದೂ ಪರಿಷತ್ ಸಕ್ರಿಯವಾಗಿ ಭಾಗವಹಿಸುತ್ತದೆ' ಎಂದರು.

'ತಮ್ಮ ಧರ್ಮದಲ್ಲಿ ಯಾವುದೇ ಜಾತಿ ಭೇದಗಳಿಲ್ಲ ಎಂದು ಮುಸ್ಲಿಂ ಮತ್ತು ಕ್ರೈಸ್ತ ಧರ್ಮಗಳು ಹೇಳಿಕೊಳ್ಳುತ್ತವೆ. ಆದ್ದರಿಂದ ಆ ಧರ್ಮಗಳಿಗೆ ಮತಾಂತರಗೊಂಡ ಪರಿಶಿಷ್ಟರಿಗೆ ಮೀಸಲಾತಿ ಸೌಲಭ್ಯ ವಿಸ್ತರಿಸಬಾರದು. 1950ರಲ್ಲಿ ಸಂವಿಧಾನದ ಅನುಸೂಚಿತ ಜಾತಿಗಳ ಆದೇಶದಂತೆ ಹಿಂದೂ ಪರಿಶಿಷ್ಟ ಜಾತಿಗಳಿಗೆ ಮಾತ್ರ ಮೀಸಲಾತಿ ಸೌಲಭ್ಯಗಳನ್ನು ನೀಡಬೇಕು ಎಂದು ಸ್ಪಷ್ಟಪಡಿಸಿದೆ' ಎಂದು ಮಾಹಿತಿ ನೀಡಿದರು.

'ಇದರ ಹೊರತಾಗಿ, ಕ್ರಿಶ್ಚಿಯನ್ ಮಿಷನರಿಗಳು, ಇಸ್ಲಾಮಿಕ್ ಸಂಘಟನೆಗಳು ಈ ಸೌಲಭ್ಯವನ್ನು ಪರಿವರ್ತಿತ ಪರಿಶಿಷ್ಟರಿಗೂ ವಿಸ್ತರಿಸಬೇಕು ಎಂದು ಪ್ರಯತ್ನಿಸುತ್ತಿವೆ. ಆದರೆ ಪರಿಶಿಷ್ಟ ಜಾತಿಯ ಸಾಂವಿಧಾನಿಕ ಹಕ್ಕುಗಳನ್ನು ಕಸಿದುಕೊಳ್ಳಲು ನಾವು ಬಿಡುವುದಿಲ್ಲ' ಎಂದು ಹೇಳಿದರು. ವಿಎಚ್‌ಪಿ ಜಂಟಿ ಕಾರ್ಯದರ್ಶಿ ಕೋಟೇಶ್ವರ ಶರ್ಮ, ವಿಶ್ವ ಹಿಂದೂ ಪರಿಷತ್ತಿನ ಕ್ಷೇತ್ರ ಸಂಘಟನಾ ಕಾರ್ಯದರ್ಶಿ ಕೇಶವ್ ಹೆಗಡೆ, ಸದಸ್ಯ ವಿನಾಯಕ್ ಇದ್ದರು.

'ದೇಗುಲಗಳನ್ನು ಸರ್ಕಾರದ ಆಡಳಿತದಿಂದ ಮುಕ್ತಗೊಳಿಸಿ'

'ರಾಜ್ಯ ಸರ್ಕಾರದ ಆಡಳಿತದಲ್ಲಿರುವ ದೇವಸ್ಥಾನಗಳನ್ನು ಹಿಂದೂ ಸಮಾಜಕ್ಕೆ ಮರಳಿ ನೀಡಬೇಕು' ಎಂದು ವಿಎಚ್‌ಪಿ ರಾಷ್ಟ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಒತ್ತಾಯಿಸಿದರು.

'ಈ ಕುರಿತು ಧರ್ಮಸ್ಥಳದ ಧರ್ಮಾಧಿಕಾರಿ, ರಾಜ್ಯಸಭಾ ಸದಸ್ಯ ಡಿ. ವೀರೇಂದ್ರ ಹೆಗ್ಗಡೆ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭೇಟಿ ಮಾಡಿದ್ದು, ಅವರು ಸಹ ದೇವಸ್ಥಾನಗಳು ಸರ್ಕಾರದ ಆಡಳಿತದಿಂದ ಮುಕ್ತಗೊಳಿಸಬೇಕು. ಬರುವ ದಿನಗಳಲ್ಲಿ ಪ್ರತ್ಯೇಕ ವ್ಯವಸ್ಥೆ ರೂಪಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ' ಎಂದರು.

'ಬೆಲ್ಲದ ಹೇಳಿಕೆ ವೈಯಕ್ತಿಕ ಅಭಿಪ್ರಾಯ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ ತೆಗೆದು ಹಾಕಬೇಕೆಂಬ ಶಾಸಕ ಅರವಿಂದ ಬೆಲ್ಲದ ಅವರ ಹೇಳಿಕೆ ಪಕ್ಷದ ತೀರ್ಮಾನವಾಗುವುದಿಲ್ಲ. ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಅವರು ಹೇಳಿಕೊಂಡಿದ್ದಾರಷ್ಟೇ' ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೇಳಿದರು.

ಪ್ರವಾಸಿ ಮಂದಿರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂತಹ ವಿಷಯಗಳ ಕುರಿತು, ಸಾಮೂಹಿಕ ನಾಯಕತ್ವದಡಿ ಪಕ್ಷದ ವೇದಿಕೆಯಲ್ಲಿ ಚರ್ಚಿಸಿ ತಿರ್ಮಾನ ಕೈಗೊಳ್ಳಲಾಗುತ್ತದೆ ಎಂದರು.

ಶೆಟ್ಟರ್ ಕಡೆಗಣಿಸುವ ಪ್ರಶ್ನೆಯೇ ಇಲ್ಲ: 'ಸ್ಥಳೀಯ ಶಾಸಕರು ಮತ್ತು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ. ಶೆಟ್ಟರ್ ಅವರು, ಪಕ್ಷದ ಕಾರ್ಯಕಾರಿ ಹಾಗೂ ಚುನಾವಣಾ ಸಮಿತಿ ಸದಸ್ಯರಾಗಿದ್ದಾರೆ. ಅವರ ವಿಷಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಒಳ ಮೀಸಲು ಜಾರಿಗೆ ಬದ್ಧ: ಸಚಿವ

ಮೈಸೂರು: 'ಒಳ ಮೀಸಲು ಜಾರಿ ವಿಷಯದಲ್ಲಿ ಬಿಜೆಪಿ ಹಿಂದೇಟು ಹಾಕುವ ಪ್ರಶ್ನೆಯೇ ಇಲ್ಲ' ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಹೇಳಿದರು.

ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೊರತುಪಡಿಸಿದರೆ ಉಳಿದವರೆಲ್ಲರೂ ಒಳ ಮೀಸಲಾತಿ ಪರವಾಗಿದ್ದಾರೆ' ಎಂದರು.

'ರಾಜಕಾರಣದ ಶಕುನಿ ಸಿದ್ದರಾಮಯ್ಯ'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ರಾಜ್ಯ ರಾಜಕಾರಣದಲ್ಲಿ ಶಕುನಿ ಇದ್ದಂತೆ. ಜೆಡಿಎಸ್‌ಗೆ ಬೆಂಕಿ ಹಚ್ಚಿದ ಅವರೀಗ ಕಾಂಗ್ರೆಸ್‌ಗೆ ಬೆಂಕಿ ಹಚ್ಚಲು ಹೊರಟಿದ್ದಾರೆ' ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ವಾಗ್ದಾಳಿ ನಡೆಸಿದರು.

'ಸಚಿವ ಶ್ರೀರಾಮುಲು ಪೆದ್ದ, ಅವರಿಗೆ ಇತಿಹಾಸ ಗೊತ್ತಿಲ್ಲ. ಅವರಿಗೆ ಗಾಂಧಿ ಕುಟುಂಬದ ಬಗ್ಗೆ ಮಾತಾಡುವ ನೈತಿಕ ಹಕ್ಕಿಲ್ಲ' ಎಂದು ಇಲ್ಲಿನ ಮುನ್ಸಿಪಲ್ ಮೈದಾನದಲ್ಲಿ ಶನಿವಾರ ಬಹಿರಂಗ ಸಭೆಯಲ್ಲಿ ಸಿದ್ದರಾಮಯ್ಯ ಟೀಕಿಸಿರುವುದಕ್ಕೆ ತಿರುಗೇಟು ನೀಡಲು ಭಾನುವಾರ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಶ್ರೀರಾಮುಲು ಹರಿಹಾಯ್ದರು.

ಒಂದು ಹಂತದಲ್ಲಿ ಸಿದ್ದರಾಮಯ್ಯನವರ ವಿರುದ್ಧ ಏಕವಚನ ಪ್ರಯೋಗವೂ ಆಯಿತು. 'ಮಾಜಿ ಪ್ರಧಾನಿ ದೇವೇಗೌಡ, ಮುಖ್ಯಮಂತ್ರಿಗಳಾಗಿದ್ದ ಜೆ.ಎಚ್. ಪಟೇಲ್, ಎಸ್.ಆರ್. ಬೊಮ್ಮಾಯಿ, ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ, ಜಿ. ಪರಮೇಶ್ವರ್ ಮತ್ತಿತರರಿಗೆ ಬೆನ್ನಲ್ಲಿ ಚೂರಿ ಹಾಕಿದ ಸಿದ್ದರಾಮಯ್ಯ, ಈಗ ಡಿ.ಕೆ. ಶಿವಕುಮಾರ್ ಅವರನ್ನು ಮುಗಿಸಲು ಪಿತೂರಿ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ಡಿಕೆಶಿಗೆ ಸಿದ್ದು ಬ್ಲಾಕ್‌ಮೇಲ್'

'ಸಿದ್ದರಾಮಯ್ಯ ಕೆಲ ದಾಖಲೆ ಇಟ್ಟುಕೊಂಡು ಡಿಕೆಶಿ ಅವರಿಗೆ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಸಮಯ ಬಂದಾಗ ಎಲ್ಲವನ್ನೂ ಬಹಿರಂಗಪಡಿಸುತ್ತೇನೆ' ಎಂದು ಶ್ರೀರಾಮುಲು ಹೇಳಿದರು.

'ತಮ್ಮ ದಾರಿಗೆ ಶಿವಕುಮಾರ್ ಅಡ್ಡಿಯಾಗದಂತೆ ಸಿದ್ದರಾಮಯ್ಯ ತಡೆಯುತ್ತಿದ್ದಾರೆ. ನೀವು ಸಿಎಂ ಆಗಿದ್ದಾಗ ಎಸ್‌ಸಿ –ಎಸ್‌ಟಿ, ಪಂಗಡ ಮೀಸಲಾತಿ ಹೆಚ್ಚಳ ವಿಷಯ ಮುನ್ನೆಲೆಗೆ ಬಂದಿತ್ತು. ಆಗ ಮುಖ್ಯ ಕಾರ್ಯದರ್ಶಿ ಅರವಿಂದ ಜಾಧವ್ ಅವರಿಗೆ ಫೈಲ್ ಮುಚ್ಚಿಡುವಂತೆ ಹೇಳಲಿಲ್ಲವೇ' ಎಂದು ಹೇಳಿದರು.

ರಾಹುಲ್ ಗಾಂಧಿಗೆ ದಾಖಲೆ ಕಳುಹಿಸುವೆ: ಸಿ.ಎಂ

ಮಂಡ್ಯ: 'ಕಾಸಿದ್ದವರಿಗೆ ಮಾತ್ರ ಕರ್ನಾಟಕದಲ್ಲಿ ಪದವಿ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೀಡಿರುವ ಹೇಳಿಕೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು 'ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ರಾಜ್ಯದಲ್ಲಿ ಎಷ್ಟೆಲ್ಲಾ ಹಗರಣಗಳು ನಡೆದಿವೆ ಎಂಬ ವಿಚಾರ ರಾಹುಲ್ ಗಾಂಧಿ ಅವರಿಗೆ ಗೊತ್ತಿಲ್ಲ. ಪ್ರಶ್ನೆಪತ್ರಿಕೆ ಸೋರಿಕೆ, ಕಾನ್‌ಸ್ಟೆಬಲ್ ನೇಮಕಾತಿ ಮುಂತಾದ ಹಗರಣ ಕುರಿತ ದಾಖಲಾತಿ ಸಂಗ್ರಹಿಸಲಾಗಿದ್ದು ಅವರಿಗೆ ಶೀಘ್ರ ಕಳುಹಿಸುತ್ತೇನೆ. ಅದನ್ನು ನೋಡಿದ ನಂತರ ಅವರು ಮಾತನಾಡಲಿ' ಎಂದರು.

ಮಳವಳ್ಳಿ ಬಾಲಕಿ ಕುಟುಂಬಕ್ಕೆ ₹ 10 ಲಕ್ಷ ಪರಿಹಾರ: 'ಮಳವಳ್ಳಿಯಲ್ಲಿ ಬಾಲಕಿಯ ಮೇಲೆ ನಡೆದ ಅಮಾನುಷ ಕೃತ್ಯವನ್ನು ಖಂಡಿಸಲು ನನ್ನಲ್ಲಿ ಪದಗಳಿಲ್ಲ. ಬಾಲಕಿಯ ಕುಟುಂಬ ಸದಸ್ಯರಿಗೆ ಸರ್ಕಾರದಿಂದ ₹ 10 ಲಕ್ಷ ಪರಿಹಾರ ನೀಡಲಾಗುವುದು' ಎಂದು ಮುಖ್ಯಮಂತ್ರಿ ಹೇಳಿದರು.

'ಮೀನುಗಾರಿಕೆ: ಸಹಾಯಧನ ವಿಸ್ತರಣೆ'

ಬೆಂಗಳೂರು: 'ಕೇಬಲ್ ನೆಟ್ ಮೂಲಕ ಮೀನು ಸಾಕಾಣಿಕೆ ಮಾಡುವ ರಾಜ್ಯದ 300 ಸಂಘಗಳಿಗೆ ₹ 3 ಲಕ್ಷ ಸಹಾಯಧನ ನೀಡಲಾಗುತ್ತಿದೆ. ಈ ಮಿತಿಯನ್ನು 1,000 ಸಂಘಗಳಿಗೆ ವಿಸ್ತರಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮೀನುಗಾರಿಕೆ ಇಲಾಖೆ ಹಾಗೂ ಫ್ರೀಡಂ ಆ್ಯಪ್ ಸಹಯೋಗದಲ್ಲಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಒಳನಾಡು ಮೀನು ಉತ್ಪಾದಕರ ಸಮಾವೇಶ' ಉದ್ಘಾಟಿಸಿ ಮಾತನಾಡಿದ ಅವರು, 'ಮೀನು ಸಸ್ಯಾಹಾರಿ. ಮೀನು ತಿನ್ನುವವರು ಮಾತ್ರ ಮಾಂಸಾಹಾರಿಗಳು. ಮೀನಿನ ಆಹಾರಕ್ಕೆ ಹೆಚ್ಚು ಬೇಡಿಕೆ ಇದ್ದು, ಮೀನುಗಾರಿಕೆ ಬೃಹತ್ ಉದ್ಯಮವಾಗಿ ಬೆಳೆದಿದೆ. ಮೀನು ರಫ್ತಿನಲ್ಲಿ ಆಂಧ್ರಪ್ರದೇಶ ಮುಂಚೂಣಿಯಲ್ಲಿದ್ದು, ಕರ್ನಾಟಕವೂ ಮೀನುಗಾರಿಕೆ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡಬೇಕಿದೆ' ಎಂದರು. 'ರಾಜ್ಯದ 5,000 ಮೀನುಗಾರರ ಕುಟುಂಬಗಳಿಗೆ ಮನೆ ನಿರ್ಮಿಸಿಕೊಡಲು ಮಂಜೂರಾತಿ ನೀಡಲಾಗಿದೆ. ಜನವರಿಯೊಳಗೆ ಮನೆಗಳು ನಿರ್ಮಾಣವಾದರೆ, ಫಲಾನುಭವಿಗಳಿಗೆ ಹಸ್ತಾಂತರಿಸಲಾಗುವುದು' ಎಂದು ಹೇಳಿದರು.

1 ಲಕ್ಷ ಮಕ್ಕಳಿಗೆ ವಿದ್ಯಾನಿಧಿ: 'ರೈತರ ಮಕ್ಕಳಿಗೆ ನೀಡುತ್ತಿರುವ ವಿದ್ಯಾನಿಧಿ ಯೋಜನೆಯನ್ನು ಮೀನುಗಾರರ ಮಕ್ಕಳಿಗೂ ವಿಸ್ತರಿಸಲಾಗಿದೆ. ಮುಂಬರುವ ದಿನಗಳಲ್ಲಿ ಮೀನುಗಾರರ 1 ಲಕ್ಷ ಮಕ್ಕಳಿಗೆ ಯೋಜನೆಯಡಿ ವಿದ್ಯಾರ್ಥಿ ವೇತನ ವಿತರಿಸಲು ₹ 50 ಕೋಟಿ ಅನುದಾನ ಒದಗಿಸಲಾಗುವುದು' ಎಂದು ಮುಖ್ಯಮಂತ್ರಿ ತಿಳಿಸಿದರು.

ಎಂ.ಎಸ್.ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದ ವಜ್ರ ಮಹೋತ್ಸವ

ಆರ್ಥಿಕತೆ– ದೇಶಕ್ಕೆ 5ನೇ ಸ್ಥಾನ: ಪ್ರಲ್ಹಾದ ಜೋಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್ಥಿಕತೆಯಲ್ಲಿ ಭಾರತ ಈಗ ವಿಶ್ವದಲ್ಲಿಯೇ 5ನೇ ಸ್ಥಾನದಲ್ಲಿದೆ. 2047ರ ವೇಳೆಗೆ ದೇಶವು ಮೊದಲ ಸ್ಥಾನಕ್ಕೆ ಬರಲಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಿಶ್ವಾಸ ವ್ಯಕ್ತಪಡಿಸಿದರು.

ಭಾನುವಾರ ನಡೆದ ಎಂ.ಎಸ್. ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದ ವಜ್ರ ಮಹೋತ್ಸವದಲ್ಲಿ ಮಾತನಾಡಿದ ಅವರು, '2030ರ ವೇಳೆಗೆ ಭಾರತ 3ನೇ ಸ್ಥಾನದಲ್ಲಿ ಇರಲಿದೆ. ಇತರೆ ದೇಶಗಳಿಗೆ ಭಾರತ ಅಣ್ಣನ ಸ್ಥಾನದಲ್ಲಿ ಮಾರ್ಗದರ್ಶನ ನೀಡುತ್ತಿದೆ' ಎಂದರು.

'ಗುಣಮಟ್ಟದ ಶಿಕ್ಷಣದ ಜೊತೆಗೆ ಕೌಶಲಕ್ಕೂ ಒತ್ತು ನೀಡಲಾಗುತ್ತಿದೆ. ಕ್ರೀಡೆಯಲ್ಲಿ ದೇಶದ ಸಾಧನೆ ಉತ್ತಮವಾಗಿದೆ. ಈಚೆಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕ್ರೀಡಾಪಟುಗಳು 17 ಪದಕ ಗಳಿಸಿದ್ದರು. ಮುಂದಿನ ಒಲಿಂಪಿಕ್ಸ್‌ನಲ್ಲಿ ರಾಮಯ್ಯ ವಿಶ್ವವಿದ್ಯಾಲಯದ ಒಬ್ಬ ಕ್ರೀಡಾಪಟು ಚಿನ್ನದ ಪದಕ ಗೆಲ್ಲುವಂತಾಗಬೇಕು. ಶೈಕ್ಷಣಿಕ ಸಂಸ್ಥೆಗಳಲ್ಲಿ ಕ್ರೀಡಾ ವಾತಾವರಣ ನಿರ್ಮಿಸಲು ಸರ್ಕಾರ ಅಗತ್ಯ ನೆರವು ನೀಡಲಿದೆ' ಎಂದು ಹೇಳಿದರು.

'ಶೈಕ್ಷಣಿಕ ಸಂಸ್ಥೆಗಳು, ಆಯಾ ರಾಜ್ಯ ಸರ್ಕಾರಗಳು ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಸಮರ್ಪಕ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು. ದೇಶದಲ್ಲೇ ಮೊದಲಿಗೆ ಕರ್ನಾಟಕವು ಎನ್‌ಇಪಿ ಅನುಷ್ಠಾನಕ್ಕೆ ತಂದಿದೆ' ಎಂದರು.

ಎಂ.ಎಸ್.ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದ ವಜ್ರ ಮಹೋತ್ಸವದ ನಿಮಿತ್ತ ಹೊರತಂದ ಸ್ಮರಣ ಸಂಚಿಕೆಯನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ (ಎಡದಿಂದ ಮೂರನೆಯವರು) ಭಾನುವಾರ ಬಿಡುಗಡೆ ಮಾಡಿದರು. (ಎಡದಿಂದ) ಎಂ.ಆರ್. ಸೀತಾರಾಂ, ಡಾ.ಎಂ.ಆರ್.ಜಯರಾಂ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಎಂ.ಆರ್. ರಾಮಯ್ಯ ಹಾಜರಿದ್ದರು

> **ಗುಣಮಟ್ಟದ ಶಿಕ್ಷಣದಿಂದ ದೇಶದ ಬೆಳವಣಿಗೆ ಸಾಧ್ಯ. ಎನ್‌ಇಪಿ ಅನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲಾಗುತ್ತಿದೆ.**
> **ಸಿ.ಎನ್.ಅಶ್ವತ್ಥನಾರಾಯಣ** ಉನ್ನತ ಶಿಕ್ಷಣ ಸಚಿವ

> **ದೇಶದಲ್ಲಿ ಸಂಶೋಧನೆ, ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ.**
> **ಪ್ರಹ್ಲಾದ ಜೋಶಿ,** ಕೇಂದ್ರ ಸಚಿವ

'ಮಾತು, ಕೃತಿ, ಮನಸ್ಸು ಏಕರೂಪದಲ್ಲಿದ್ದರೆ ಮಹಾತ್ಮರು ಎನಿಸಿಕೊಳ್ಳಲಿದ್ದಾರೆ. ಎಂ.ಎಸ್.ರಾಮಯ್ಯ ಅವರು ಈ ಸಾಲಿಗೆ ಸೇರುತ್ತಾರೆ. ಶೈಕ್ಷಣಿಕ ಸಂಸ್ಥೆಯನ್ನು ಆರಂಭದಲ್ಲಿ ನಷ್ಟದಲ್ಲಿ ನಡೆಸಿದ್ದರು. ರಿಯಲ್ ಎಸ್ಟೇಟ್ ಮೂಲಕ ಹಣ ಗಳಿಸಬಹುದಿತ್ತು. ಆದರೆ, ಶಿಕ್ಷಣ ಸಂಸ್ಥೆ ನಿರ್ಮಿಸಿ ಯುವ ಪೀಳಿಗೆಯ ಬದುಕಿಗೆ ಎಂಎಸ್‌ಆರ್ ನೆರವಾದರು' ಎಂದು ಸ್ಮರಿಸಿದರು.

ಸಂಸ್ಥೆಯ ಅಧ್ಯಕ್ಷ ಎಂ.ಆರ್. ಜಯರಾಂ ಅವರು, 'ಎಸ್.ನಿಜಲಿಂಗಪ್ಪ ಅವರ ಸಲಹೆಯಂತೆ ತಂದೆಯವರು ಶಿಕ್ಷಣ ಸಂಸ್ಥೆ ಆರಂಭಿಸಿದ್ದರು. ಆರಂಭದಲ್ಲಿ 30ರಿಂದ 40 ವಿದ್ಯಾರ್ಥಿಗಳಷ್ಟೇ ಎಂಜಿನಿಯರಿಂಗ್ ಶಿಕ್ಷಣಕ್ಕೆ ಪ್ರವೇಶ ಪಡೆಯುತ್ತಿದ್ದರು. ಸಂಸ್ಥೆ ನಡೆಸುವುದು ಕಷ್ಟವಾಗಿತ್ತು. ನಂತರದ ವರ್ಷಗಳಲ್ಲಿ ಬೇಡಿಕೆ ಬಂತು. ಈಗ ಉತ್ಕೃಷ್ಟವಾದ ಶಿಕ್ಷಣ ನೀಡಲಾಗುತ್ತಿದೆ. ಆರಂಭದಲ್ಲಿ ಎರಡು ವಿಭಾಗಗಳಿದ್ದವು. ಈಗ ಯುಜಿಯ 17, ಪಿಜಿಯ 15 ವಿಭಾಗ ಇವೆ' ಎಂದರು.

ಸಂಸ್ಥೆಯ ಉಪಾಧ್ಯಕ್ಷ ಎಂ.ಆರ್. ಸೀತಾರಾಂ, ಕಾರ್ಯದರ್ಶಿ ಎಂ.ಆರ್. ರಾಮಯ್ಯ, ಪ್ರಾಂಶುಪಾಲ ಡಾ.ಎನ್. ವಿ.ಆರ್.ನಾಯ್ಡು, ಸಿಇಒ ರಾಮಪ್ರಸಾದ್, ವಿ.ಕೆ.ಅತ್ರೆ, ಜೆ.ಎನ್.ರೆಡ್ಡಿ, ಡಾ.ಎಚ್. ಪಿ.ಕಿಚ್ಚ ಹಾಜರಿದ್ದರು.

ಕನ್ನಡಿಗರಿಗೆ ಉದ್ಯೋಗ

'ಗುಣಮಟ್ಟದ ಶಿಕ್ಷಣ ಅಗತ್ಯ. ಕನ್ನಡಿಗರಿಗೇ ಹೆಚ್ಚಿನ ಉದ್ಯೋಗ ನೀಡಲು ಕ್ರಮ ವಹಿಸಲಾಗಿದೆ. ಇಂದು ಪ್ರತಿಭೆ ಇಲ್ಲದಿದ್ದರೆ ಭವಿಷ್ಯ ರೂಪಿಸಿಕೊಳ್ಳಲಾಗದು. ಬೆಂಗಳೂರನ್ನು ನಿವೃತ್ತರ ಸ್ವರ್ಗವೆಂದು ಕರೆಯುತ್ತಿದ್ದರು. ಈಗ ಸಿಲಿಕಾನ್ ವ್ಯಾಲಿ, ವಿಜ್ಞಾನ ಹಾಗೂ ಆವಿಷ್ಕಾರ ನಗರಿ ಎನ್ನಲಾಗುತ್ತಿದೆ' ಎಂದು ಸಚಿವ ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

'ಶಿಕ್ಷಣ ಕ್ಷೇತ್ರದ ಖಾಸಗೀಕರಣ ಬೇಡ ಎಂಬ ಒತ್ತಡವಿತ್ತು. ಭವಿಷ್ಯ ಆಲೋಚಿಸಿ ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ನೀಡಲು ಖಾಸಗಿಯವರಿಗೆ ಅವಕಾಶ ನೀಡಲಾಯಿತು. ಇದು ದೊಡ್ಡ ಬದಲಾವಣೆಗೆ ಕಾರಣವಾಯಿತು' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

"ಕೆಲಸಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339 /9036657399

Wanted

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ.10,000-15,000. 8951315839, 9880545002

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆ ಮಾಡಿ: 9611225266/ 9611225388

ಪ್ರವಾಸ

Travel

ದೆಹಲಿ ಮಥುರ ಅಲಹಾಬಾದ್ ಕಾಶಿ,ಗಯಾ,ಅಯೋಧ್ಯ ನೈಮೀಶಾರಣ್ಯ 29.10.2022 ರಿಂದ 13/10 ದಿನಗಳು. ಸೋಮನಾಥ್ ದ್ವಾರಕಾ ಉಜ್ಜಯಿನಿ ಓಂಕಾರೇಶ್ವರ್ ಮಾತೃಗಯಾ ಅಷ್ಟ ಜ್ಯೋತಿರ್ಲಿಂಗಗಳು 20.11.2022 28.11.2022 ರಿಂದ 15/10 ದಿನಗಳು. ವೈಷ್ಣೋದೇವಿ ಅಮೃತ್ಸರ್ ಕುಲು,ಮನಾಲಿ,ಶಕ್ತಿಪೀಠಗಳು ಕುರುಕ್ಷೇತ್ರ 18.11.2022 ರಿಂದ 12 ದಿನಗಳು. ಗೌಹಾಟಿ ಸಿಕ್ಕಿಂ ಡಾರ್ಜಲಿಂಗ್ ಕೊಲ್ಕತ್ತ,ಪುರಿ ಕೊನಾರ್ಕ್ ಭುವನೇಶ್ವರ್ 25.11.2022 ರಿಂದ 14 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವೆಲ್ಸ್ ಚಾಮರಾಜಪೇಟೆ ಬೆಂಗಳೂರು-18

ಕಾರ್ತಿಕ ಮಾಸದ ವಿಶೇಷ ಪ್ರವಾಸ: ವಿಮಾನ/A/C ಬಸ್ಸಿನಲ್ಲಿ 18.11.2022 ರಿಂದ 16 ದಿನಗಳ ಅಷ್ಟ ಜ್ಯೋತಿರ್ಲಿಂಗ ಗುಜರಾತ್ ಮಧ್ಯಪ್ರದೇಶ ಮಹಾರಾಷ್ಟ್ರ ಮೌಂಟ್‌ಅಬು ಇತ್ಯಾದಿ. ಊಟ,ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289 9686721196

16.11.2022 11.01.2023 15.02.2023 ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್ 7/11 ದಿನಗಳು. 06.11.2022 13.01.2023 08.02.2023 ದುಬೈ 5 ದಿನಗಳು. 10.11.2022 09.12.2022 17.01.2023 ಕಾಶಿ,ಗಯಾ,ಅಯೋಧ್ಯ 7 ದಿನಗಳು. 27.11.2022 13.12.2022 12.01.2023 ಗುಜರಾತ್ 8 ದಿನಗಳು. 18.11.2022 04.12.2022 ರಾಜಸ್ಥಾನ್ 9 ದಿನಗಳು. 04.12.2022 ರ್‍ರಾಮೇಶ್ವರ ಕನ್ಯಾಕುಮಾರ,ಮಧುರೈ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು.3 9448402248 7022547922

★12.12.2022 21ದಿನಗಳು★ ಪಂಚದ್ವಾರಕ 8ಜ್ಯೋತಿರ್ಲಿಂಗ ಪ್ರವಾಸ,6ದಿನಗಳು ರಾಜಸ್ಥಾನ್ ಪ್ರವಾಸ.18.12.2022 10ದಿನಗಳು ಗುಜರಾತ್, ಮಧ್ಯಪ್ರದೇಶಪ್ರವಾಸ. ಆರ್.ಗಾಂಧಿ ಟೂರ್ಸ್. 9945445809 9902433500 6363416487

Pilgrimage Tours

ಸುವರ್ಣ ಯಾತ್ರೆ.27/10/22 ಪೂರಿ,ಭುವನೇಶ್ವರ, 26/10/22 ತಮಿಳುನಾಡು,ನವಗ್ರಹ, ರಾಮೇಶ್ವರ.11/11/22 ಕಾಶಿ,ವೈದ್ಯನಾಥ್.28/10/22 ಮಧ್ಯಪ್ರದೇಶ 2ಜ್ಯೋತಿರ್ಲಿಂಗ. 9019462508/9008381022

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
BOOK YOUR CLASSIFIEDS ONLINE
ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

ವಿಮೆ: ಎಂಡಬ್ಲ್ಯೂಪಿ ಕಾಯ್ದೆಯ ಮಹತ್ವ

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

'ಅವಧಿ ವಿಮೆ' (ಟರ್ಮ್ ಲೈಫ್ ಇನ್ಶೂರೆನ್ಸ್) ತೆಗೆದುಕೊಂಡರೆ ಸಾಕು, ನಮ್ಮ ಜೀವಕ್ಕೆ ಏನಾದರು ತೊಂದರೆ ಆದರೂ ಪತ್ನಿ ಮತ್ತು ಮಕ್ಕಳ ಭವಿಷ್ಯ ಸುಭದ್ರವಾಗಿರುತ್ತದೆ' ಎಂದು ಪುರುಷರಲ್ಲಿ ಹಲವರು ಭಾವಿಸುವುದು ಇದೆ. ಆದರೆ ವಾಸ್ತವ ಬೇರೆ ರೀತಿಯೇ ಇರಬಹುದು. ವಿಮೆ ಖರೀದಿಸಿದ ಮಾತ್ರಕ್ಕೆ, ದುಡಿಯುವ ಪುರುಷ ಮೃತಪಟ್ಟ ಸಂದರ್ಭದಲ್ಲಿ ಕುಟುಂಬಕ್ಕೆ ವಿಮಾ ಹಣ ಸಿಕ್ಕಿಬಿಡುತ್ತದೆ ಎನ್ನಲಾಗದು.

ಎಷ್ಟೋ ಸಂದರ್ಭಗಳಲ್ಲಿ ನಾಮನಿರ್ದೇಶಿತ ವ್ಯಕ್ತಿಯ ಹೆಸರು ಸ್ಪಷ್ಟವಾಗಿ ಉಲ್ಲೇಖವಾಗಿದ್ದರೂ ವಿಮಾ ಪಾಲಿಸಿಯಿಂದ ಬರುವ ಹಣವು, ಸಾಲ ಕೊಟ್ಟ ಹಣಕಾಸು ಸಂಸ್ಥೆಗಳ ಅಥವಾ ಸಂಬಂಧಿಕರ ಪಾಲಾಗುವ ಸಾಧ್ಯತೆ ಇರುತ್ತದೆ. ಇಂತಹ ಪರಿಸ್ಥಿತಿಯನ್ನು ತಡೆಯುವ ಅಥವಾ ವಿವಾಹಿತ ಮಹಿಳೆಗೆ (ಪತ್ನಿ) ವಿಮೆಯ ಪೂರ್ಣ ಹಣ ಸಿಗುವಂತೆ ಮಾಡುವ ಕಾಯ್ದೆಯೇ 'ವಿವಾಹಿತ ಮಹಿಳೆಯರ ಆಸ್ತಿ ಕಾಯ್ದೆ' (ಅಥವಾ ಎಂಡಬ್ಲ್ಯೂಪಿ ಕಾಯ್ದೆ).

1874ರ ಈ ಕಾಯ್ದೆಯ ಸೆಕ್ಷನ್ 6ರ ಅಡಿಯಲ್ಲಿ ವಿಮೆ ಪಡೆದುಕೊಂಡರೆ, ಪತ್ನಿ, ಮಕ್ಕಳು ಅಥವಾ ಸೂಚಿತ ಅವಲಂಬಿತರಿಗೆ ಮಾತ್ರ ವಿಮೆ ಹಣ ಸಿಗುತ್ತದೆ. ಯಾವುದೇ ಸಾಲಗಾರರು, ಸಂಬಂಧಿಕರು ಈ ಹಣದ ಮೇಲೆ ಹಕ್ಕು ಸಾಧಿಸುವಂತಿಲ್ಲ. ಕೋರ್ಟ್‌ಗೆ ಅರ್ಜಿ ಸಲ್ಲಿಸಿ, ವಿಮೆಯಿಂದ ಬರುವ ಹಣದಲ್ಲಿ ಸಾಲ ಪಾವತಿ ಮಾಡುವಂತೆ ಬ್ಯಾಂಕ್‌ಗಳು ಕೇಳಲು ಅವಕಾಶ ಇಲ್ಲ. ವಿವಾಹಿತ ಮಹಿಳೆಯರ ಆಸ್ತಿ ಕಾಯ್ದೆಯ ಅನ್ವಯ ವಿಮೆ ಪಡೆದಿರುವ ವ್ಯಕ್ತಿಯು ಯಾರ ಹೆಸರನ್ನು ಸೂಚಿಸಿರುತ್ತಾರೋ ಅವರಿಗೆ ಮಾತ್ರ ವಿಮೆಯ ಹಣದ ಮೇಲೆ ಹಕ್ಕಿರುತ್ತದೆ. ಯಾವುದೇ ಸಂದರ್ಭದಲ್ಲೂ ಇದನ್ನು ಬದಲಿಸಲು ಸಾಧ್ಯವಿಲ್ಲ.

ಒಂದು ಉದಾಹರಣೆ: ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಕಿರಣ್ (ಕಾಲ್ಪನಿಕ ವ್ಯಕ್ತಿ) ವರ್ಷದ ಹಿಂದೆ ಗೃಹ ಸಾಲ ಪಡೆದಿದ್ದರು. ಗೃಹ ಸಾಲ ಪಡೆದ ಬೆನ್ನಲ್ಲೇ ಅವರು ಅವಧಿ ವಿಮೆ ಪಡೆದುಕೊಂಡು ವಿವಾಹಿತ ಮಹಿಳೆಯರ ಆಸ್ತಿ ಕಾಯ್ದೆ ಅಡಿಯಲ್ಲಿ ಅದನ್ನು ನೋಂದಾಯಿಸಿದರು. ತಮ್ಮ ಮಡದಿ ಮತ್ತು ಮಕ್ಕಳು ಅದರ ಫಲಾನುಭವಿಗಳು ಎಂದು ನಮೂದಿಸಿದರು. ಇದಾದ ಕೆಲ ತಿಂಗಳ ಬಳಿಕ ಕಿರಣ್ ಅಕಾಲಿಕ ಮರಣ ಹೊಂದಿದರು.

ಆಗ ಬ್ಯಾಂಕ್ ಅಧಿಕಾರಿಗಳು ಕೋರ್ಟ್ ಮೊರೆ ಹೋಗಿ ವಿಮೆಯಿಂದ ಬರುವ ಹಣ ಬಳಕೆ ಮಾಡಿ ಸಾಲ ಮರುಪಾವತಿ ಮಾಡಬೇಕು ಎಂದು ಅರ್ಜಿ ಸಲ್ಲಿಸಿದರು. ಪಾಲಿಸಿಯನ್ನು ವಿವಾಹಿತ ಮಹಿಳೆಯರ ಆಸ್ತಿ ಕಾಯ್ದೆ ಅಡಿಯಲ್ಲಿ ನೋಂದಣಿ ಮಾಡಿರುವುದರಿಂದ ಸಾಲ ಪಾವತಿಗೆ ವಿಮೆಯ ಹಣ [illegible] ಮತ್ತು ಮಕ್ಕಳಿಗೆ ಮಾತ್ರ ಆ ಹಣ ನೀಡಬಹುದು ಎಂದು ಕೋರ್ಟ್ ಹೇಳಿತು.

ಈ ಕಾಯ್ದೆ ಏಕೆ ಮುಖ್ಯ:

- ಸಾಲ ಪಡೆದುಕೊಂಡಿರುವ ಅಥವಾ ಹೆಚ್ಚು ಆರ್ಥಿಕ ಜವಾಬ್ದಾರಿ ಹೊತ್ತಿರುವ ಉದ್ಯಮಿಗಳಿಗೆ, ವರ್ತಕರಿಗೆ, ವೇತನದಾರರ ಕುಟುಂಬಗಳಿಗೆ ಇದು ರಕ್ಷಾಕವಚ
- ಇದರಿಂದ ಅನಿರೀಕ್ಷಿತ ಸಂದರ್ಭಗಳಲ್ಲೂ ಮಕ್ಕಳು ಮತ್ತು ಪತ್ನಿಗೆ ಅಡೆತಡೆಯಿಲ್ಲದೆ ವಿಮೆಯ ಹಣ ಸಿಗುತ್ತದೆ
- ಸಂಬಂಧಿಕರಿಂದ ವಿಮೆ ಹಣದ ಸಂಭಾವ್ಯ ದುರುಪಯೋಗ ತಡೆಯಬಹುದು
- ವಿಮೆ ಹಣ ಮಡದಿ- ಮಕ್ಕಳಿಗಷ್ಟೇ ಸಿಗಬೇಕು ಎಂದು ಬಯಸುವ ಪ್ರತಿಯೊಬ್ಬರಿಗೂ ಇದು ಉಪಯುಕ್ತ

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಮಾರಾಟದ ಒತ್ತಡಕ್ಕೆ ಸಿಲುಕಿದ ಷೇರುಪೇಟೆ

ಅಕ್ಟೋಬರ್ 14ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಮೊತ್ತದ ಕುಸಿತ ಕಂಡಿವೆ. 57,919 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇಕಡ 0.46ರಷ್ಟು ಇಳಿಕೆಯಾಗಿದೆ. 17,185 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.74ರಷ್ಟು ತಗ್ಗಿದೆ.

ಅಕ್ಟೋಬರ್ ತಿಂಗಳಲ್ಲಿ ಇದುವರೆಗೆ ಸೆನ್ಸೆಕ್ಸ್ ಮತ್ತು ನಿಫ್ಟಿ ಕ್ರಮವಾಗಿ 0.86ರಷ್ಟು ಮತ್ತು 0.5ರಷ್ಟು ಗಳಿಸಿಕೊಂಡಿವೆ. ಮಾರಾಟದ ಒತ್ತಡ, ಭಾರತದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣ ಹೆಚ್ಚಳ, ಕೈಗಾರಿಕಾ ಉತ್ಪಾದನೆ ಕುಂಠಿತ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಮಿಶ್ರ ಪ್ರತಿಕ್ರಿಯೆ ಸೇರಿದಂತೆ ಹಲವು ಅಂಶಗಳು ಕಳೆದ ವಾರದ ಮಾರುಕಟ್ಟೆ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಮತ್ತು ನಿಫ್ಟಿ ಬ್ಯಾಂಕ್ ಸೂಚ್ಯಂಕಗಳು ಮಾತ್ರ ಸಕಾರಾತ್ಮಕ ಗಳಿಕೆ ಕಂಡಿವೆ. ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 0.8ರಷ್ಟು ಮತ್ತು ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 0.3ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಫಾರ್ಮಾ ಶೇ 1.4ರಷ್ಟು, ಎಫ್‌ಎಂಸಿಜಿ ಶೇ 1.5ರಷ್ಟು, ವಾಹನ ಶೇ 2.2ರಷ್ಟು, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2.3ರಷ್ಟು, ಲೋಹ ಶೇ 2.8ರಷ್ಟು, ಮಾಧ್ಯಮ ವಲಯ ಶೇ 3.6ರಷ್ಟು ಮತ್ತು ರಿಯಲ್ ಎಸ್ಟೇಟ್ ಶೇ 4.2ರಷ್ಟು ಕುಸಿತ ಕಂಡಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 1ರಷ್ಟು ಕುಸಿದಿದೆ. ಅದಾನಿ ವಿಲ್ಮರ್, ಜೊಮಾಟೊ, ಅದಾನಿ ಗ್ರೀನ್ ಎನರ್ಜಿ, ವಿಪ್ರೊ, ಅದಾನಿ ಟ್ರಾನ್ಸ್‌ಮಿಷನ್, ಹ್ಯಾವೆಲ್ಸ್ ಇಂಡಿಯಾ, ಯುನೈಟೆಡ್ ಸ್ಪಿರಿಟ್ಸ್, ಇಂಡಸ್ ಟವರ್ಸ್ ಮತ್ತು ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಕಂಪನಿ ಷೇರುಗಳು ಶೇ 5ರಿಂದ ಶೇ 13ರವರೆಗೆ ತಗ್ಗಿವೆ.

ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 2.6ರಷ್ಟು ಕುಸಿದಿದೆ. ಅದಾನಿ ಪವರ್, ಪಿಬಿ ಫಿನ್ ಟೆಕ್, ಬಯೋಕಾನ್, ಮ್ಯಾಕ್ಸ್ ಫೈನಾನ್ಸಿಯಲ್ಸ್, ಅಶೋಕ್ ಲೇಲೆಂಡ್, ಜೆಎಸ್‌ಡಬ್ಲ್ಯು ಎನರ್ಜಿ, ವೋಡಾಫೋನ್ ಐಡಿಯಾ, ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್, ರಾಮ್ಕೋ ಸಿಮೆಂಟ್ಸ್, ಭಾರತ್ ಇಲೆಕ್ಟ್ರಾನಿಕ್ಸ್ , ಜೀ ಎಂಟರ್‌ಟೇನ್ಮೆಂಟ್ ಶೇ 5ರಿಂದ ಶೇ 10ರವರೆಗೆ ಇಳಿಕೆ ದಾಖಲಿಸಿವೆ.

ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 2.2ರಷ್ಟು ಕುಸಿದಿದೆ. ಇಂಡಿಯಾ ಸಿಮೆಂಟ್ಸ್, ಸುಜಲಾನ್ ಎನರ್ಜಿ, ಫ್ಯೂಚರ್ ಲೈಫ್‌ಸ್ಟೈಲ್ ಫ್ಯಾಷನ್ಸ್, ಪವರ್ ಮೆಕ್ ಪ್ರಾಜೆಕ್ಟ್ಸ್, ಟೈಮೆಕ್ಸ್ ಗ್ರೂಪ್ ಇಂಡಿಯಾ, ವೆಲ್‌ಸ್ಪನ್ ಕಾರ್ಪ್ ಇಳಿಕೆಯಾಗಿವೆ. ಅತುಲ್ ಆಟೊ, ಗಾಯತ್ರಿ ಪ್ರಾಜೆಕ್ಟ್ಸ್, ಜಿಂದಾಲ್ ಡ್ರಿಲ್ಲಿಂಗ್ ಇಂಡಸ್ಟ್ರೀಸ್, ಉಗರ್ ಶುಗರ್ ವರ್ಕ್ಸ್, ಪೆನ್ನಾರ್ ಇಂಡಸ್ಟ್ರೀಸ್, ಇಕೆಐ ಎನರ್ಜಿ ಸರ್ವಿಸಸ್ , ಬ್ಲಾಕ್ ಬಾಕ್ಸ್ ಶೇ 15ರಿಂದ ಶೇ 30ರಷ್ಟು ಜಿಗಿದಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 9,941.71 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 7,030.96 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಮುನ್ನೋಟ: ಈ ವಾರ ನಜಾರಾ ಟೆಕ್ನಾಲಜೀಸ್, ಬಜಾಜ್ ಫೈನಾನ್ಸ್, ಬಜಾಜ್ ಫಿನ್‌ಸರ್ವ್, ಐಟಿಸಿ, ಕೆಇಐ, ನೆಟ್‌ವರ್ಕ್ 18, ಪಿವಿಆರ್, ಪಾಲಿ ಕ್ಯಾಬ್, ಐಸಿಐಸಿಐ ಜನರಲ್ ಇನ್ಶೂರೆನ್ಸ್, ಎಕ್ಸಿಸ್ ಬ್ಯಾಂಕ್, ಇಂಡಸ್ ಇಂಡ್ ಬ್ಯಾಂಕ್, ಡಿಕ್ಸಾನ್ ಟೆಕ್ನಾಲಜೀಸ್, ಟಾಟಾ ಕಮ್ಯೂನಿಕೇಷನ್ಸ್, ಹ್ಯಾವೆಲ್ಸ್, ಹ್ಯಾಟ್‌ಸನ್, ಸೊನಾಟಾ ಸಾಫ್ಟ್‌ವೇರ್, ಫೈ ಪೈಸೆ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ದೇಶಿಯ ವಿದ್ಯಮಾನಗಳ ಜೊತೆಗೆ ಜಾಗತಿಕ ವಿದ್ಯಮಾನಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

75 ಡಿಜಿಟಲ್ ಬ್ಯಾಂಕಿಂಗ್ ಘಟಕಗಳಿಗೆ ಚಾಲನೆ

'ಫೋನ್ ಬ್ಯಾಂಕಿಂಗ್'ನಿಂದ ಆರ್ಥಿಕತೆಗೆ ಪೆಟ್ಟು: ಮೋದಿ

ನವದೆಹಲಿ (ಪಿಟಿಐ): 2014ಕ್ಕೂ ಮೊದಲು ಜಾರಿಯಲ್ಲಿ ಇದ್ದ 'ಫೋನ್ ಬ್ಯಾಂಕಿಂಗ್' ವ್ಯವಸ್ಥೆಯನ್ನು 'ಡಿಜಿಟಲ್ ಬ್ಯಾಂಕಿಂಗ್'ಗೆ ಬದಲಾಯಿಸಲು ಬಿಜೆಪಿ ನೇತೃತ್ವದ ಸರ್ಕಾರ ನಡೆಸಿದ ಯತ್ನಗಳ ಫಲವಾಗಿ ಭಾರತವು ಸುಸ್ಥಿರ ಆರ್ಥಿಕ ಬೆಳವಣಿಗೆ ಕಾಣುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ.

ಹಿಂದಿನ ಯುಪಿಎ ಆಡಳಿತದ ಕುರಿತು ಉಲ್ಲೇಖಿಸಿ ಪ್ರಧಾನಿಯವರು, ಫೋನ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಯಾರಿಗೆ ಸಾಲ ಕೊಡಬೇಕು, ಯಾವ ಷರತ್ತುಗಳ ಅಡಿ ಸಾಲ ಕೊಡಬೇಕು ಎಂಬ ಸೂಚನೆಯನ್ನು ಬ್ಯಾಂಕುಗಳಿಗೆ ಫೋನ್ ಮೂಲಕ ನೀಡಲಾಗುತ್ತಿತ್ತು ಎಂದು ಹೇಳಿದ್ದಾರೆ.

ಯಾವುದೇ ದೇಶದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಎಷ್ಟು ಬಲಿಷ್ಠವಾಗಿರುತ್ತದೆಯೇ ಅಷ್ಟರಮಟ್ಟಿಗೆ ಅಲ್ಲಿನ ಅರ್ಥ ವ್ಯವಸ್ಥೆ ಬೆಳವಣಿಗೆ ಹೊಂದುತ್ತಿರುತ್ತದೆ ಎಂದು ಮೋದಿ ಅವರು 75 ಡಿಜಿಟಲ್ ಬ್ಯಾಂಕಿಂಗ್ ಘಟಕಗಳನ್ನು (ಡಿಬಿಯು) ವಿಡಿಯೊ ಕಾನ್ಫರೆನ್ಸ್ ಮೂಲಕ ದೇಶಕ್ಕೆ ಅರ್ಪಿಸುವ ಸಂದರ್ಭದಲ್ಲಿ ಹೇಳಿದ್ದಾರೆ.

'2014ಕ್ಕೂ ಮೊದಲು ಬ್ಯಾಂಕುಗಳು ತಮ್ಮ ಕಾರ್ಯಾಚರಣೆ ಹೇಗಿರಬೇಕು ಎಂಬ ಸೂಚನೆಯನ್ನು ಫೋನ್ ಕರೆ ಮೂಲಕ ಪಡೆಯುತ್ತಿದ್ದವು. ಫೋನ್ ಬ್ಯಾಂಕಿಂಗ್ ರಾಜಕಾರಣವು ಬ್ಯಾಂಕುಗಳನ್ನು ಅಸುರಕ್ಷಿತವಾಗಿಸಿತ್ತು. ಸಹಸ್ರಾರು ಕೋಟಿ ರೂಪಾಯಿ ಮೊತ್ತದ ಹಗರಣಗಳ ಬೀಜ ಬಿತ್ತಿ ದೇಶದ ಅರ್ಥ ವ್ಯವಸ್ಥೆ ಕೂಡ ಅಸುರಕ್ಷಿತವಾಗುವಂತೆ ಮಾಡಿತ್ತು' ಎಂದು ಮೋದಿ ಟೀಕಿಸಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ 75 ಡಿಜಿಟಲ್ ಬ್ಯಾಂಕಿಂಗ್ ಘಟಕಗಳನ್ನು ಆರಂಭಿಸುವುದಾಗಿ 2022–23ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು.

ಯಾವೆಲ್ಲಾ ಸೌಲಭ್ಯಗಳು ಲಭ್ಯ?

ಡಿಜಿಟಲ್ ಬ್ಯಾಂಕಿಂಗ್ ಘಟಕಗಳು ಉಳಿತಾಯ ಖಾತೆ, ಸಾಲ, ಹೂಡಿಕೆ ಮತ್ತು ವಿಮಾ ಸೇವೆಗಳನ್ನು ಒದಗಿಸಲಿವೆ. ಸಣ್ಣ ಮೊತ್ತದ ವೈಯಕ್ತಿಕ ಸಾಲ ಮತ್ತು ಎಂಎಸ್‌ಎಂಇ ವಲಯದ ಉದ್ಯಮಗಳಿಗೆ ಬೇಕಿರುವ ಸಾಲವನ್ನು ಸಂಪೂರ್ಣವಾಗಿ ಡಿಜಿಟಲ್ ಪ್ರಕ್ರಿಯೆ ಮೂಲಕ ನೀಡಲಾಗುತ್ತದೆ. ಸರ್ಕಾರದ ಕೆಲವು ಯೋಜನೆಗಳ ಅಡಿ ಸೇವೆಗಳನ್ನು ಕೂಡ ನೀಡಲಾಗುತ್ತದೆ.

ಕಂಪ್ಯೂಟರ್ ಇಲ್ಲದವರು, ಸ್ಮಾರ್ಟ್‌ಫೋನ್ ಕೂಡ ಇಲ್ಲದವರು ಬ್ಯಾಂಕಿಂಗ್ ಸೇವೆಗಳನ್ನು ಡಿಜಿಟಲ್ ಮಾಧ್ಯಮದ ಮೂಲಕ ಪಡೆದುಕೊಳ್ಳಲು ಈ ಘಟಕಗಳು ನೆರವಾಗಲಿವೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಒಟ್ಟು ನಾಲ್ಕು ಡಿಜಿಟಲ್ ಬ್ಯಾಂಕಿಂಗ್ ಘಟಕಗಳು ಆರಂಭವಾಗಿವೆ. ಬೆಂಗಳೂರು ಗ್ರಾಮಾಂತರ, ರಾಯಚೂರು, ಮಂಗಳೂರು ಮತ್ತು ಮೈಸೂರಿನಲ್ಲಿ ತಲಾ ಒಂದು ಘಟಕ ಆರಂಭವಾಗಿದೆ ಎಂದು ಕೇಂದ್ರದ ಪ್ರಕಟಣೆ ಹೇಳಿದೆ.

ಹಬ್ಬದ ಮಾರಾಟ: ₹2.5 ಲಕ್ಷ ಕೋಟಿ ಮೌಲ್ಯದ ವಹಿವಾಟು ನಿರೀಕ್ಷೆ

ನವದೆಹಲಿ (ಪಿಟಿಐ): ಹಬ್ಬದ ಋತುವಿನ ಮಾರಾಟವು ಗ್ರಾಹಕ ಬಳಕೆ ಸರಕುಗಳ ಉದ್ಯಮದಲ್ಲಿ ಸಂಭ್ರಮಕ್ಕೆ ಮೂಡಿಸಿದೆ. ಸರಕು ಮತ್ತು ಸೇವೆಗಳ ಮಾರಾಟದ ಒಟ್ಟು ಮೌಲ್ಯವು ₹ 2.5 ಲಕ್ಷ ಕೋಟಿಗೆ ತಲುಪುವ ನಿರೀಕ್ಷೆ ಇದೆ ಎಂದು ಅಖಿಲ ಭಾರತ ವರ್ತಕರ ಒಕ್ಕೂಟ (ಸಿಎಐಟಿ) ಹೇಳಿದೆ.

ಮಳಿಗೆಗಳು ಮತ್ತು ಇ-ಕಾಮರ್ಸ್ ವೇದಿಕೆಗಳ ಮೂಲಕ ಟಿ.ವಿ., ಗೃಹೋಪಯೋಗಿ ಉತ್ಪನ್ನಗಳು, ಎಫ್‌ಎಂಸಿಜಿ ಆಹಾರ ಮತ್ತು ಆಹಾರೇತರ ಉತ್ಪನ್ನಗಳು, ಬಟ್ಟೆಗಳ ಮಾರಾಟವು ಕಳೆದ ವರ್ಷದ ಹಬ್ಬದ ಋತುವಿನ ಮಾರಾಟಕ್ಕೆ ಹೋಲಿಸಿದರೆ ಶೇಕಡ 8ರಿಂದ ಶೇ 10ರಷ್ಟು ಬೆಳವಣಿಗೆ ಕಂಡಿದೆ. ಹಣದುಬ್ಬರದ ಆತಂಕದ ನಡುವೆಯೂ ಗ್ರಾಹಕರು ಖರೀದಿ ಮಾಡಲು ಮುಂದಾಗಿದ್ದಾರೆ ಎಂದು ಅದು ತಿಳಿಸಿದೆ. ಹಬ್ಬದ ಮಾರಾಟವು ಓಣಂನಿಂದ ಆರಂಭ ಆಗಿ, ದೀಪಾವಳಿಗೆ ಮುಕ್ತಾಯ ಆಗುತ್ತದೆ.

ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆ (ಡಿ.ಎ) ಶೇ 4ರಷ್ಟು ಹೆಚ್ಚಳ ಆಗಿರುವುದು ಖರೀದಿಗೆ ಉತ್ತೇಜನ ನೀಡಿದೆ. ಅಲ್ಲದೆ, ನಾನ್ ಗೆಜೆಟೆಡ್ ರೈಲ್ವೆ ನೌಕರರಿಗೆ ಕಾರ್ಯಕ್ಷಮತೆ ಆಧರಿಸಿದ ಬೋನಸ್ ನೀಡಲು ಸರ್ಕಾರ ನಿರ್ಧರಿಸಿದೆ. ಇದು ಸಹ ಖರೀದಿ ಮೇಲೆ ಪ್ರಭಾವ ಬೀರಲಿದೆ ಎಂದು ಹೇಳಿದೆ.

ಈ ಹಬ್ಬದ ಋತುವಿನಲ್ಲಿ ಆಹಾರ ಉತ್ಪನ್ನಗಳು, ತಂಪುಪಾನೀಯಗಳು ಮತ್ತು ವೈಯಕ್ತಿಕ ಕಾಳಜಿಯ ವಸ್ತುಗಳಿಗೆ ಹೆಚ್ಚಿನ ಬೇಡಿಕೆಯನ್ನು ನಿರೀಕ್ಷಿಸಲಾಗಿದೆ ಎಂದು ಡಾಬರ್ ಇಂಡಿಯಾದ ಮಾರಾಟ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ಆದರ್ಶ್ ಶರ್ಮಾ ಹೇಳಿದ್ದಾರೆ.

ಕಡಿಮೆ ಬೆಲೆಯ ಉತ್ಪನ್ನಗಳ ಮಾರಾಟವು ಚೇತರಿಕೆ ಕಂಡುಕೊಳ್ಳುತ್ತಿಲ್ಲ. ಮಧ್ಯಮ ಮತ್ತು ಗರಿಷ್ಠ ಬೆಲೆಯ ಉತ್ಪನ್ನಗಳ ಮಾರಾಟ ಉತ್ತಮವಾಗಿದೆ. ಸರಾಸರಿ ಮಾರಾಟ ದರ ಹೆಚ್ಚಾಗುತ್ತಿದೆಯಾದರೂ ಗ್ರಾಮೀಣ ಭಾಗಗಳಲ್ಲಿ ಬೇಡಿಕೆ ಕಡಿಮೆ ಇರುವುದು ಉತ್ಪನ್ನಗಳ ಮಾರಾಟದ ಮೇಲೆ ಪರಿಣಾಮ ಬೀರಿದೆ ಎಂದು ಗ್ರಾಹಕ ಎಲೆಕ್ಟ್ರಾನಿಕ್ಸ್ ಮತ್ತು ಉಪಕರಣಗಳ ತಯಾರಕರ ಸಂಘದ (ಸಿಇಎಎಂಎ) ಅಧ್ಯಕ್ಷ ಎರಿಕ್ ಬ್ರಗಾಂಜಾ ಹೇಳಿದ್ದಾರೆ.

ಮುಖ್ಯಾಂಶಗಳು

- ಖರೀದಿ ಉತ್ತೇಜಿಸಲಿದೆ ಕೇಂದ್ರ ಸರ್ಕಾರಿ ನೌಕರರ ಡಿಎ ಹೆಚ್ಚಳ
- ಆಹಾರ ಉತ್ಪನ್ನ, ತಂಪುಪಾನೀಯಕ್ಕೆ ಹೆಚ್ಚು ಬೇಡಿಕೆ ನಿರೀಕ್ಷೆ

ರೂಪಾಯಿ ಮೌಲ್ಯ ಕುಸಿಯುತ್ತಿಲ್ಲ, ಡಾಲರ್ ವೃದ್ಧಿಸುತ್ತಿದೆ: ನಿರ್ಮಲಾ

ವಾಷಿಂಗ್ಟನ್ (ಪಿಟಿಐ): 'ರೂಪಾಯಿ ದುರ್ಬಲವಾಗಿಲ್ಲ. ಆದರೆ ಅಮೆರಿಕದ ಡಾಲರ್ ಬಲಗೊಳ್ಳುತ್ತಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಐಎಂಎಫ್ ಮತ್ತು ವಿಶ್ವಬ್ಯಾಂಕ್‌ನ ವಾರ್ಷಿಕ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರೂಪಾಯಿ ಕುಸಿಯುತ್ತಿದೆ ಎನ್ನುವುದಕ್ಕಿಂತಲೂ ಡಾಲರ್ ಬಲಗೊಳ್ಳುತ್ತಿದೆ ಎನ್ನುವ ದೃಷ್ಟಿಕೋನ ನನ್ನದು. ಡಾಲರ್ ಮೌಲ್ಯವು ನಿರಂತರವಾಗಿ ಹೆಚ್ಚಾಗುತ್ತಲೇ ಇದೆ' ಎಂದು ಹೇಳಿದ್ದಾರೆ.

'ತಾಂತ್ರಿಕ ಪರಿಭಾಷೆಯಲ್ಲಿ ನಾನು ಮಾತನಾಡುತ್ತಿಲ್ಲ. ಆದರೆ, ಡಾಲರ್ ಮೌಲ್ಯ ಏರಿಕೆಯನ್ನು ಭಾರತದ ರೂಪಾಯಿ ಸಹಿಸಿಕೊಂಡಿದೆ ಎನ್ನುವುದು ಸತ್ಯಸಂಗತಿ. ಪ್ರವರ್ಧಮಾನಕ್ಕೆ ಬರುತ್ತಿರುವ ಬೇರೆ ದೇಶಗಳ ಕರೆನ್ಸಿಗಳಿಗಿಂತಲೂ ಉತ್ತಮ ಸ್ಥಿತಿಯಲ್ಲಿ ಭಾರತದ ಕರೆನ್ಸಿ ಇದೆ' ಎಂದು ಅವರು ತಿಳಿಸಿದ್ದಾರೆ.

ಭಾರತದ ಆರ್ಥಿಕ ತಳಹದಿಯು ಬಲಿಷ್ಠವಾಗಿದ್ದು, ಇತರೆ ದೇಶಗಳಿಗೆ ಹೋಲಿಸಿದರೆ ಹಣದುಬ್ಬರವು ಕಡಿಮೆಯೇ ಇದೆ ಎಂದೂ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹222-601
ದ್ವಿತಳಿ (ಬಿ.ವಿ)	₹333-801

'₹ 39 ಲಕ್ಷ ಕೋಟಿ ಎಫ್‌ಡಿಐ'

ನವದೆಹಲಿ (ಪಿಟಿಐ): ಭಾರತದ ಅರ್ಥ ವ್ಯವಸ್ಥೆಯು ಮುಂದಿನ ಐದು ವರ್ಷಗಳಲ್ಲಿ ಒಟ್ಟು 475 ಬಿಲಿಯನ್ ಅಮೆರಿಕನ್ ಡಾಲರ್ (ಅಂದಾಜು ₹39.14 ಲಕ್ಷ ಕೋಟಿ) ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಆಕರ್ಷಿಸುವ ಸಾಮರ್ಥ್ಯ ಹೊಂದಿದೆ ಎಂದು ಸಿಐಐ–ಇವೈ ವರದಿ ಹೇಳಿದೆ.

ಕಳೆದ ದಶಕದಲ್ಲಿ ಭಾರತದಲ್ಲಿ ಎಫ್‌ಡಿಐ ಪ್ರಮಾಣವು ನಿರಂತರವಾಗಿ ಹೆಚ್ಚಾಗಿದೆ. ಕೋವಿಡ್ ಸಾಂಕ್ರಾಮಿಕ ಹಾಗೂ ಜಾಗತಿಕ ಬಿಕ್ಕಟ್ಟುಗಳ ನಡುವೆಯೂ 2021–22ರಲ್ಲಿ ಭಾರತಕ್ಕೆ ಒಟ್ಟು 84.8 ಬಿಲಿಯನ್ ಡಾಲರ್ (ಅಂದಾಜು ₹ 6.98 ಲಕ್ಷ ಕೋಟಿ) ಎಫ್‌ಡಿಐ ಬಂದಿದೆ ಎಂದು ವರದಿ ಹೇಳಿದೆ.

ಭಾರತದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಬಹುರಾಷ್ಟ್ರೀಯ ಕಂಪನಿಗಳ (ಎಂಎನ್‌ಸಿ) ಪೈಕಿ ಶೇಕಡ 71ರಷ್ಟು ಕಂಪನಿಗಳು, ತಮ್ಮ ಜಾಗತಿಕ ಚಟುವಟಿಕೆಗಳ ವಿಸ್ತರಣೆಯಲ್ಲಿ ಭಾರತವು ಪ್ರಮುಖ ದೇಶ ಎಂದು ಪರಿಗಣಿಸಿವೆ. ಮುಂದಿನ ಮೂರರಿಂದ ಐದು ವರ್ಷಗಳಲ್ಲಿ ದೇಶದ ಅರ್ಥ ವ್ಯವಸ್ಥೆಯು ಗಣನೀಯವಾಗಿ ಉತ್ತಮ ಸಾಧನೆ ತೋರಲಿದೆ ಎಂದು ಬಹುತೇಕ ಎಂಎನ್‌ಸಿಗಳು ಭಾವಿಸಿವೆ ಎಂದು ಈ ವರದಿಯಲ್ಲಿ ತಿಳಿಸಲಾಗಿದೆ.

ಹಿಂದಿ ಹೇರಿಕೆ ವಿರುದ್ಧ ಮೋದಿಗೆ ಸ್ಟಾಲಿನ್ ಪತ್ರ

ಚೆನ್ನೈ(ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ, ಅಧಿಕೃತ ಭಾಷೆಗೆ ಸಂಬಂಧಿಸಿದ ಸಂಸದೀಯ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ಶಿಫಾರಸಿನಲ್ಲಿ ಹಿಂದಿಗೆ ನೀಡಿರುವ ಆದ್ಯತೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಾನುವಾರ ಪತ್ರ ಬರೆದಿದ್ದಾರೆ.

ಹಿಂದಿಗಿಂತಲೂ ಬೇರೆ ಭಾಷೆಗಳನ್ನು ಮಾತನಾಡುವ ಜನರ ಸಂಖ್ಯೆ ಭಾರತೀಯ ಒಕ್ಕೂಟದಲ್ಲಿ ಹೆಚ್ಚಾಗಿದೆ. ಪ್ರತಿ ಭಾಷೆಯೂ ತನ್ನದೇ ವಿಶೇಷತೆ ಹೊಂದಿದೆ. ಇದನ್ನು ನೀವು ಪ್ರಶಂಸಿಸುತ್ತೀರಿ ಎಂಬುದರ ಬಗ್ಗೆ ನನಗೆ ಖಾತ್ರಿಯಿದೆ ಎಂದು ಸ್ಟಾಲಿನ್ ಪತ್ರದಲ್ಲಿ ಬರೆದಿದ್ದಾರೆ.

ಹಿಂದಿ ಹೇರುವ ಇತ್ತೀಚಿನ ಪ್ರಯತ್ನಗಳು ಅಪ್ರಾಯೋಗಿಕ ಮತ್ತು ವಿಭಜಕ ನಡೆ. ಇದು, ಹಿಂದಿ ಮಾತನಾಡದ ಜನರನ್ನು ಹಲವು ವಿಷಯಗಳಲ್ಲಿ ಬಹಳ ಅನಾನುಕೂಲಕರ ಪರಿಸ್ಥಿತಿಗೆ ತಳ್ಳುತ್ತದೆ. ಇದು ತಮಿಳುನಾಡು ಮಾತ್ರವಲ್ಲದೆ ತಮ್ಮ ಮಾತೃಭಾಷೆಯನ್ನು ಗೌರವಿಸುವ ಯಾವುದೇ ರಾಜ್ಯವೂ ಒಪ್ಪುವಂಥದ್ದಲ್ಲ ಎಂದು ಸ್ಟಾಲಿನ್ ಅಭಿಪ್ರಾಯಪಟ್ಟಿದ್ದಾರೆ.

ವೈಜ್ಞಾನಿಕ ಅಭಿವೃದ್ಧಿ ಮತ್ತು ತಾಂತ್ರಿಕ ಸೌಲಭ್ಯಗಳನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿ ತಮಿಳೂ ಸೇರಿದಂತೆ ಎಲ್ಲಾ ಭಾಷೆಗಳನ್ನು ಸೇರಿಸಬೇಕು, ಎಲ್ಲಾ ಭಾಷೆಗಳನ್ನು ಉತ್ತೇಜಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

'ತೈವಾನ್ ಸೇರ್ಪಡೆಗೆ ಸೇನೆ ಬಳಕೆ ಅವಕಾಶ ಕೈಬಿಡುವುದಿಲ್ಲ'

ಬೀಜಿಂಗ್ (ಪಿಟಿಐ): 'ತೈವಾನ್ ಅನ್ನು ಚೀನಾದೊಂದಿಗೆ ಸೇರಿಸಲು ಸೇನೆ ಬಳಸುವ ಅವಕಾಶವನ್ನು ಕೈಬಿಡುವುದಿಲ್ಲ. ಆ ಮೂಲಕ ಚೀನಾದ ಏಕೀಕರಣ ಮಾಡುತ್ತೇವೆ' ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಭಾನುವಾರ ಪ್ರತಿಜ್ಞೆ ಮಾಡಿದರು.

ಚೀನಾದ ಕಮ್ಯುನಿಸ್ಟ್ ಪಕ್ಷದ 20ನೇ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ತೈವಾನ್ ಅನ್ನು ಚೀನಾದೊಂದಿಗೆ ಸೇರಿಸಿ, ಚೀನಾವನ್ನು ಒಂದುಗೂಡಿಸುವ ಕಾರ್ಯತಂತ್ರಕ್ಕೆ ಪಕ್ಷದ ಎಲ್ಲಾ ಸದಸ್ಯರು ಬದ್ಧರಾಗಿಬೇಕು' ಎಂದರು. ಇಂತಹ ಸಮ್ಮೇಳನವು ಐದು ವರ್ಷಕ್ಕೊಮ್ಮೆ ನಡೆಯುತ್ತದೆ.

ಜಿನ್‌ಪಿಂಗ್ ಅವರು ತೈವಾನ್ ಕುರಿತು ಪ್ರತಿಜ್ಞೆ ಮಾಡುತ್ತಿದ್ದಂತೆಯೇ, ಸಮ್ಮೇಳನದಲ್ಲಿ ಭಾಗವಹಿಸಿದ್ದ 2,300 ಚುನಾಯಿತ ಪ್ರತಿನಿಧಿಗಳು ಸುದೀರ್ಘ ಕರತಾಡನದ ಮೂಲಕ ತಮ್ಮ ನಾಯಕನೊಂದಿಗೆ ಸಹಮತ ವ್ಯಕ್ತಪಡಿಸಿದರು.

'ಏಕೀಕರಣಕ್ಕಾಗಿ ಶಾಂತಿಯುತ ಮಾರ್ಗ ಅನುಸರಿಸುವುದನ್ನು ಚೀನಾ ಮುಂದುವರಿಸಲಿದೆ. ಆದರೆ, ಅದಕ್ಕಾಗಿ ಸೇನೆಯನ್ನು ಬಳಸುವುದಿಲ್ಲ ಎಂದು ನಾವು ಎಂದೂ ಹೇಳಿಲ್ಲ. 'ತೈವಾನ್ ಸ್ವಾತಂತ್ರ್ಯ'ಕ್ಕಾಗಿ ಹವಣಿಸುತ್ತಿರುವ ಪ್ರತ್ಯೇಕತಾವಾದಿಗಳನ್ನು ಗುರಿಯಾಗಿಸುತ್ತೇವೆಯೇ ಹೊರತು ತೈವಾನ್‌ನಲ್ಲಿ ಇರುವ ನಮ್ಮ ನಾಗರಿಕ ಬಾಂಧವರನ್ನಲ್ಲ' ಎಂದೂ ಹೇಳಿದ್ದಾರೆ.

ಸೇನೆ ಆಧುನೀಕರಣ: ಸೇನೆಯನ್ನು ಬಲಗೊಳಿಸುವ ಕುರಿತು ಮಾತನಾಡಿದ ಜಿನ್‌ಪಿಂಗ್, ದೇಶದ ಸಾರ್ವಭೌಮತ್ವದ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಸೇನೆಯನ್ನು ಜಗತ್ತಿನ ಅತ್ಯುನ್ನತ ಮಟ್ಟಕ್ಕೆ ಆಧುನಿಕಗೊಳಿಸುವುದಾಗಿ ಹೇಳಿದರು.

ಎದುರಾಳಿ ರಾಷ್ಟ್ರಗಳೊಂದಿಗೆ ಹೋರಾಡಿ ಗೆಲ್ಲುವ ಸಲುವಾಗಿ ಸೇನಾಪಡೆಗಳಿಗೆ ನೀಡುವ ತರಬೇತಿಯನ್ನು ಇನ್ನಷ್ಟು ತೀವ್ರಗೊಳಿಸಲು ಹಾಗೂ ಪ್ರಬಲ ವ್ಯೂಹಾತ್ಮಕ ಪ್ರತಿರೋಧ ವ್ಯವಸ್ಥೆಯನ್ನು ರೂಪಿಸಲಾಗುವುದು ಎಂದು ಷಿ ಅವರು ತಮ್ಮ 63 ಪುಟಗಳ ವರದಿಯಲ್ಲಿ ತಿಳಿಸಿದ್ದಾರೆ.

'ಚೀನಾ ಸೇನೆ 'ಪೀಪಲ್ಸ್ ಲಿಬರೇಷನ್ ಆರ್ಮಿ'ಗೆ 2027ಕ್ಕೆ ನೂರು ವರ್ಷ ತುಂಬಲಿದೆ. ಈ ವೇಳೆಗೆ ಸೇನೆಯನ್ನು ಇನ್ನಷ್ಟು ಬಲಗೊಳಿಸುವ ಕಾರ್ಯತಂತ್ರ ರೂಪಿಸಲಾಗುವುದು. ಸೆಂಟ್ರಲ್ ಮಿಲಿಟರಿ ಕಮಿಷನ್ (ಸಿಎಂಸಿ) ಮುಖ್ಯಸ್ಥನ ಬಳಿಯೇ ಎಲ್ಲಾ ಹೊಣೆಗಾರಿಕೆ ಇರುವಂತೆ ನೋಡಿಕೊಳ್ಳಲಾಗುವುದು' ಎಂದರು. ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೇ ಸಿಎಂಸಿನ ಮುಖ್ಯಸ್ಥರಾಗಿದ್ದಾರೆ.

3ನೇ ಬಾರಿಗೆ ಅಧ್ಯಕ್ಷ ಸಾಧ್ಯತೆ

ಚೀನಾದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಷಿ ಜಿನ್‌ಪಿಂಗ್ ಅವರು ಮೂರನೇ ಬಾರಿಗೆ ಆಯ್ಕೆ ಆಗುವುದು ಬಹುತೇಕ ಖಚಿತವಾಗಿದೆ. 2018ರಲ್ಲಿ ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್ ಸಂವಿಧಾನ ತಿದ್ದುಪಡಿ ತಂದಿರುವ ಕಾರಣ ಷಿ ಹಾದಿ ಸುಗಮವಾಗಿದೆ.

> **ತೈವಾನ್ ಸಮಸ್ಯೆ ಪರಿಹರಿಸುವುದು ಚೀನಾದ ಕೆಲಸ. ಚೀನಾದ ಜನರೇ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಿದ್ದಾರೆ**
> **ಷಿ ಜಿನ್‌ಪಿಂಗ್,** ಚೀನಾ ಅಧ್ಯಕ್ಷ

ತವಾಂಗ್ ಸೆಕ್ಟರ್‌ನಲ್ಲಿ 2021ರ ನವೆಂಬರ್‌ನಲ್ಲಿ ಆರಂಭವಾಗಿದ್ದ ಕಾಮಗಾರಿ

ಗಡಿಯಲ್ಲಿ ಮಾದರಿ ಸೇನಾ ನೆಲೆ ನಿರ್ಮಾಣ

ಪ್ರಜಾವಾಣಿ ವಾರ್ತೆ

ಗುವಾಹಟಿ: ಚೀನಾ ಗಡಿ ಸನಿಹದ ಅತಿ ಎತ್ತರದ ಪ್ರದೇಶದಲ್ಲಿ ಕಾವಲಿಗೆ ನಿಯೋಜನೆಗೊಳ್ಳುವ ಸೈನಿಕರಿಗಾಗಿ ಭಾರತೀಯ ಸೇನೆಯ ಎಂಜಿನಿಯರ್‌ಗಳು 'ಮಾದರಿ ಸೇನಾ ನೆಲೆ' (ಪೋಸ್ಟ್) ನಿರ್ಮಾಣ ಮಾಡಿದ್ದು, ಅದು ಬಳಕೆಗೆ ಮುಕ್ತವಾಗಿದೆ.

ಅಲ್ಟ್ರಾ ಹೈ ಪರ್ಫಾರ್ಮೆನ್ಸ್ ಕಾಂಕ್ರೀಟ್ (ಯುಎಚ್‌ಪಿಸಿ) ಮತ್ತು ಬ್ಯಾಂಬೂ ರೀಇನ್‌ಫೋರ್ಸ್‌ಡ್ ಕಾಂಕ್ರೀಟ್ ಫ್ರೇಮ್ಸ್ ತಂತ್ರಜ್ಞಾನಗಳನ್ನು ಬಳಸಿಕೊಂಡು ಇದನ್ನು ನಿರ್ಮಿಸಲಾಗಿದೆ.

'ಅರುಣಾಚಲಪ್ರದೇಶದ ಪಶ್ಚಿಮ ಭಾಗದಲ್ಲಿ (ತವಾಂಗ್ ಸೆಕ್ಟರ್) ಅಗತ್ಯ ಮೂಲಸೌಕರ್ಯವನ್ನೊಳಗೊಂಡ ಸೇನಾ ನೆಲೆ ನಿರ್ಮಿಸುವ ಮಹತ್ವಾಕಾಂಕ್ಷಿ ಯೋಜನೆಗೆ 2021ರ ನವೆಂಬರ್‌ನಲ್ಲಿ ಚಾಲನೆ ನೀಡಲಾಗಿತ್ತು. ಅದು ಈಗ ಪೂರ್ಣಗೊಂಡಿದೆ. ಇನ್ನೂ ಎರಡು ಸೇನಾ ನೆಲೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಅವು ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳಲಿವೆ' ಎಂದು ಸೇನಾ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಈಗ ನಿರ್ಮಿಸಲಾಗಿರುವ ಸೇನೆ ನೆಲೆಯಲ್ಲಿ ಕನಿಷ್ಠ 30 ಮಂದಿ ಸೈನಿಕರು ಉಳಿದುಕೊಳ್ಳಬಹುದು. ಕೊಠಡಿಗಳು ವಿಶಾಲವಾಗಿದ್ದು, ನೀರು ಹಾಗೂ ಸೋಲಾರ್ ವಿದ್ಯುತ್ ಸೌಕರ್ಯಗಳನ್ನೂ ಇದು ಒಳಗೊಂಡಿದೆ. ಸೈನಿಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಅದಕ್ಕೆ ಅಗತ್ಯವಿರುವ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಮೊದಲು ಸೈನಿಕರು ಬಂಕರ್‌ಗಳಲ್ಲಿ ಆಶ್ರಯಪಡೆಯಬೇಕಿತ್ತು. ಅವುಗಳಲ್ಲಿ ವಿಶಾಲವಾದ ಸ್ಥಳಾವಕಾಶ ಇರುತ್ತಿರಲಿಲ್ಲ. ಜೊತೆಗೆ ಮಳೆ, ಗಾಳಿಯಿಂದ ರಕ್ಷಣೆ ಪಡೆಯುವುದೂ ಕಷ್ಟಕರವಾಗಿತ್ತು. ಹೀಗಾಗಿ ಮಾದರಿ ಪೋಸ್ಟ್‌ಗಳನ್ನು ನಿರ್ಮಿಸುವ ಯೋಜನೆ ರೂಪಿಸಲಾಗಿತ್ತು' ಎಂದು ಸೇನಾ ಪ್ರಕಟಣೆ ತಿಳಿಸಿದೆ.

'ಇದು ಮಹತ್ವಾಕಾಂಕ್ಷಿ ಯೋಜನೆ. ಈಗಿನ ವಿನ್ಯಾಸ ಮತ್ತು ಪರಿಕಲ್ಪನೆಯಲ್ಲಿ ಇನ್ನಷ್ಟು ಬದಲಾವಣೆ ಮಾಡಿ, ಎಲ್ಲಾ ಗಡಿ ಪ್ರದೇಶಗಳಲ್ಲೂ ಮಾದರಿ ಸೇನಾ ನೆಲೆಗಳನ್ನು ನಿರ್ಮಿಸಲಾಗುತ್ತದೆ' ಎಂದು ಹೇಳಿದೆ.

'ಅತಿ ಎತ್ತರದ ಪ್ರದೇಶಗಳಲ್ಲಿ ಇಂತಹ ಪೋಸ್ಟ್ ನಿರ್ಮಿಸುವುದು ಅತ್ಯಂತ ಸವಾಲಿನದ್ದಾಗಿತ್ತು. ನಿರ್ಮಾಣ ಸಾಮಾಗ್ರಿಗಳನ್ನು ಸಾಗಿಸುವುದೂ ಕಷ್ಟವಾಗಿತ್ತು. ಪ್ರತಿಕೂಲ ಹವಾಮಾನದಿಂದಾಗಿ ನಮ್ಮ ಬಳಿ ಸಮಯವೂ ಕಡಿಮೆ ಇತ್ತು. ಕ್ರೇನ್‌ಗಳ ನೆರವಿಲ್ಲದೆ ಎರಡು ಅಂತಸ್ತಿನ ಶೆಡ್ ನಿರ್ಮಿಸುವುದೂ ಸವಾಲೆನಿಸಿತ್ತು' ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉತ್ತರ ಪ್ರದೇಶ ಅಧೀನ ಸೇವೆಗಳ ಆಯ್ಕೆ ಆಯೋಗದ (ಯುಪಿಎಸ್‌ಎಸ್‌ಎಸ್‌ಸಿ) 2022ರ ಸಾಲಿನ ಪ್ರಾಥಮಿಕ ಅರ್ಹತಾ ಪರೀಕ್ಷೆಯು ಶನಿವಾರ, ಭಾನುವಾರ ನಡೆಯಿತು. ಈ ಹಿನ್ನೆಲೆಯಲ್ಲಿ ಭಾರಿ ಸಂಖ್ಯೆಯಲ್ಲಿ ಅಭ್ಯರ್ಥಿಗಳು ವಾರಾಣಸಿಗೆ ಆಗಮಿಸಿದ್ದರಿಂದ ರೈಲ್ವೆ ನಿಲ್ದಾಣದಲ್ಲಿ ನೂಕುನುಗ್ಗಲು ಉಂಟಾಯಿತು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಕಿರುತೆರೆ ನಟಿ ವೈಶಾಲಿ ಆತ್ಮಹತ್ಯೆ

ಭೋಪಾಲ್ (ಪಿಟಿಐ): ಖ್ಯಾತ ಕಿರುತೆರೆ ನಟಿ ವೈಶಾಲಿ ಠಕ್ಕರ್ (29) ಅವರು ಮಧ್ಯಪ್ರದೇಶದ ಇಂದೋರ್‌ನಲ್ಲಿರುವ ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



'ಪೊಲೀಸರು ಅವರ ನಿವಾಸಕ್ಕೆ ಧಾವಿಸಿ ಬಾಗಿಲು ತೆರೆದಾಗ ನೇಣು ಬಿಗಿದ ಸ್ಥಿತಿಯಲ್ಲಿ ವೈಶಾಲಿ ಅವರ ಮೃತದೇಹ ಪತ್ತೆಯಾಗಿದೆ. ಡೆತ್ ನೋಟ್ ಕೂಡ ಸಿಕ್ಕಿದ್ದು, ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಯೇ ರಿಷ್ತಾ ಕ್ಯಾ ಕೆಹಲಾತಾ ಹೈ' ಧಾರಾವಾಹಿ ಮೂಲಕ ವೃತ್ತಿಜೀವನ ಆರಂಭಿಸಿದ ವೈಶಾಲಿ ಅವರಿಗೆ 'ಸಸುರಾಲ್ ಸಿಮರ್ ಕಾ' ಧಾರಾವಾಹಿ ಸಾಕಷ್ಟು ಖ್ಯಾತಿ ನೀಡಿತ್ತು. , 'ಸೂಪರ್ ಸಿಸ್ಟರ್ಸ್', 'ಮನಮೋಹಿನಿ 2' ಸೇರಿ 12ಕ್ಕೂ ಹೆಚ್ಚು ಧಾರಾವಾಹಿಗಳಲ್ಲಿ ನಟಿಸಿದ್ದರು.

'ಹಸಿವು ಸೂಚ್ಯಂಕ ದುರುದ್ದೇಶದ್ದು'

ನವದೆಹಲಿ (ಪಿಟಿಐ): 'ಜಾಗತಿಕ ಹಸಿವು ಸೂಚ್ಯಂಕ –2022' ದುರುದ್ದೇಶದಿಂದ ಕೂಡಿದೆ. ಇದು ಬೇಜವಾಬ್ದಾರಿಯುತವಾದ ವರದಿ' ಎಂದು ಸ್ವದೇಶಿ ಜಾಗರಣ ಮಂಚ್ (ಎಸ್‌ಜೆಎಂ) ಭಾನುವಾರ ಟೀಕಿಸಿದೆ. 'ಈ ವರದಿಯನ್ನು ಬಿಡುಗಡೆಮಾಡಿರುವವರ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದೆ.

ಭಾರತ 107ನೇ ಸ್ಥಾನಕ್ಕೆ ಕುಸಿದಿರುವ ವಿಚಾರ ಮುಂದಿಟ್ಟುಕೊಂಡು ಕೇಂದ್ರದ ವಿರುದ್ಧ ಕಿಡಿಕಾರಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ವಾಸ್ತವಾಂಶಗಳನ್ನು ಮುಚ್ಚಿಟ್ಟು, ಜನರ ದಾರಿ ತಪ್ಪಿಸುವ ಮೂಲಕ ದೇಶವನ್ನು ದುರ್ಬಲಗೊಳಿಸಲು ಆರ್‌ಎಸ್‌ಎಸ್ ಮತ್ತು ಬಿಜೆಪಿ ಎಲ್ಲಿಯವರೆಗೂ ಕೆಲಸ ಮಾಡಲಿವೆ' ಎಂದು ಪ್ರಶ್ನಿಸಿದ್ದಾರೆ.

₹1,300 ಕೋಟಿ ಮೌಲ್ಯದ ಸ್ವತ್ತು ಜಪ್ತಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಐಆರ್‌ಇಒ ರಿಯಲ್ ಎಸ್ಟೇಟ್ ಸಮೂಹಕ್ಕೆ ಸೇರಿದ ₹1,317 ಕೋಟಿಗೂ ಅಧಿಕ ಮೌಲ್ಯದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿದ್ದಾರೆ.

'ಪ್ರಕರಣದಲ್ಲಿ ಐಆರ್‌ಇಒ ವ್ಯವಸ್ಥಾಪಕ ನಿರ್ದೇಶಕ ಮತ್ತು ಉಪಾಧ್ಯಕ್ಷ ಲಲಿತ್ ಗೋಯಲ್ ಹಾಗೂ ಸಮೂಹದ ಇತರರ ಪಾತ್ರ ಇದ್ದು, ಈ ದಿಸೆಯಲ್ಲೂ ತನಿಖೆ ನಡೆಸಲಾಗುತ್ತಿದೆ. ಸಮೂಹದ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ಕನಿಷ್ಠ 30 ಎಫ್‌ಐಆರ್‌ಗಳು ದಾಖಲಾಗಿದ್ದವು.

ಮಂಗಳ ಹೆಸರಲ್ಲೂ ಜಮೀನು!

ಔರಂಗಾಬಾದ್ (ಪಿಟಿಐ): ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯ ಉಪ್ಲಾ ಗ್ರಾಮದಲ್ಲಿ 32 ಎಕರೆ ಜಮೀನು ಮಂಗಗಳ ಹೆಸರಿನಲ್ಲಿ ನೋಂದಣಿಗೊಂಡಿದೆ. 'ಭೂ ದಾಖಲೆಗಳ ಪ್ರಕಾರ ಜಮೀನು ಮಂಗಗಳ ಹೆಸರಿನಲ್ಲಿರುವುದು ಸ್ಪಷ್ಟವಾಗಿದೆ. ಆದರೆ ಪ್ರಾಣಿಗಳ ಹೆಸರಿನಲ್ಲಿ ಯಾರು, ಯಾವಾಗ ಈ ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎಂಬುದು ತಿಳಿದಿಲ್ಲ' ಎಂದು ಗ್ರಾಮದ ಮುಖಂಡ ಬಪ್ಪಾ ಪಡ್ವಾಲ್ ಹೇಳಿದ್ದಾರೆ.

'ಗ್ರಾಮದಲ್ಲಿ ಮದುವೆ ಸಮಾರಂಭಗಳು ನಡೆದಾಗ ಮೊದಲಿಗೆ ಮಂಗಗಳಿಗೆ ಉಡುಗೊರೆ ನೀಡಿದ ಬಳಿಕ ಸಮಾರಂಭ ನಡೆಯುತ್ತಿತ್ತು. ಈ ಪದ್ಧತಿಯನ್ನು ಈಗ ಎಲ್ಲರೂ ಅನುಸರಿಸುತ್ತಿಲ್ಲ' ಎಂದೂ ತಿಳಿಸಿದ್ದಾರೆ 'ಈ ಜಮೀನಿನಲ್ಲಿ ಅರಣ್ಯ ಇಲಾಖೆಯವರು ತೋಟಗಾರಿಕೆ ನಡೆಸಿದ್ದಾರೆ. ಈ ಜಾಗದಲ್ಲಿದ್ದ ಮನೆ ಈಗ ಕುಸಿದು ಬಿದ್ದಿದೆ' ಎಂದಿದ್ದಾರೆ.

'ಭ್ರಷ್ಟಾಚಾರ: ಕಾಂಗ್ರೆಸ್ ದಾಖಲೆ ಮೀರಿಸಿದ ಎಎಪಿ'

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಎಎಪಿ ಸರ್ಕಾರ ಹಗರಣಗಳಿಗೆ ಹೆಸರುವಾಸಿಯಾಗುತ್ತಿದೆ. ಭ್ರಷ್ಟಾಚಾರದ ವಿಷಯದಲ್ಲಿ ಅದು ಕಾಂಗ್ರೆಸ್ ದಾಖಲೆಯನ್ನೂ ಮೀರಿಸಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಭಾನುವಾರ ಆರೋಪಿಸಿದರು. ದೆಹಲಿ ಮಹಾನಗರ ಪಾಲಿಕೆ ಚುನಾವಣೆ ಹಿನ್ನೆಲೆಯಲ್ಲಿ ಇಲ್ಲಿ ಆಯೋಜಿಸಿದ್ದ 'ಪಂಚ ಪರಮೇಶ್ವರ ಸಮ್ಮೇಳನ'ದಲ್ಲಿ ಅವರು ಮಾತನಾಡಿದರು.

ಆರ್‌ಎಸ್‌ಎಸ್ ಕಾರ್ಯಕಾರಿಣಿ ಆರಂಭ

ಪ್ರಯಾಗರಾಜ್ (ಉತ್ತರಪ್ರದೇಶ): ಆರ್‌ಎಸ್‌ಎಸ್‌ನ ನಾಲ್ಕು ದಿನಗಳ ರಾಷ್ಟ್ರೀಯ ಕಾರ್ಯಕಾರಿಣಿಯು ಇಲ್ಲಿನ ಗೌಹಾನಿಯಾದಲ್ಲಿ ಭಾನುವಾರ ಆರಂಭಗೊಂಡಿದೆ. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಪಾಲ್ಗೊಂಡಿದ್ದರು. ಸಂಘದ ಚಟುವಟಿಕೆಗಳನ್ನು ವಿಸ್ತರಿಸುವ ಕುರಿತು ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಹೊಸದಾಗಿ ಲಸಿಕೆ ಖರೀದಿಸದಿರಲು ಕೇಂದ್ರ ನಿರ್ಧಾರ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆಯಾದ ಹಿನ್ನೆಲೆಯಲ್ಲಿ ಸದ್ಯಕ್ಕೆ ಹೊಸದಾಗಿ ಲಸಿಕೆಯನ್ನು ಖರೀದಿಸದಿರಲು ಕೇಂದ್ರ ಆರೋಗ್ಯ ಸಚಿವಾಲಯ ನಿರ್ಧರಿಸಿದೆ. ಅಲ್ಲದೆ ₹4237 ಕೋಟಿ ಅಥವಾ 2022–23ನೇ ಸಾಲಿನ ಬಜೆಟ್‌ನಲ್ಲಿ ಲಸಿಕೆ ಉದ್ದೇಶಕ್ಕೆ ಮೀಸಲಿಟ್ಟ ಶೇ 85ರಷ್ಟು ಹಣವನ್ನು ಹಣಕಾಸು ಸಚಿವಾಲಯಕ್ಕೆ ಹಿಂದಿರುಗಿಸಲು ನಿರ್ಧರಿಸಲಾಗಿದೆ.

ಇನ್ನೂ 1.8 ಕೋಟಿಗೂ ಅಧಿಕ ಡೋಸ್ ಲಸಿಕೆ ಲಭ್ಯವಿದೆ. ಲಸಿಕೆ ಪಡೆಯುವವರ ಸಂಖ್ಯೆಯೂ ಕಡಿಮೆಯಾಗಿದೆ ಎಂದು ಅಧಿಕೃತ ಮೂಲಗಳು ಹೇಳಿವೆ. ಸರ್ಕಾರದ ಬಳಿ ಇರುವ ಸಂಗ್ರಹ ಮುಗಿದರೂ ಮಾರುಕಟ್ಟೆಯಲ್ಲಿ ಕೋವಿಡ್ ಲಸಿಕೆ ಲಭ್ಯವಿರಲಿದೆ. 6 ತಿಂಗಳ ನಂತರ ಕೋವಿಡ್ ಸ್ಥಿತಿಗತಿ ಆಧರಿಸಿ ಹೆಚ್ಚಿನ ಲಸಿಕೆ ಸಂಗ್ರಹಿಸಬೇಕೇ ಅಥವಾ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕೇ ಎಂದು ತೀರ್ಮಾನಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಕೊರೊನಾ ಪ್ರಕರಣಗಳ ಸಂಖ್ಯೆ ಕಡಿಮೆಯಾದಾಗಿನಿಂದ ಲಸಿಕೆಗೆ ಬೇಡಿಕೆಯೂ ತಗ್ಗಿದೆ. ಕೇಂದ್ರ ಸರ್ಕಾರ ಬೂಸ್ಟರ್ ಡೋಸ್ ಪಡೆಯುವಂತೆ 'ಕೋವಿಡ್ ಲಸಿಕೆ ಅಮೃತಮಹೋತ್ಸವ' ಅಭಿಯಾನ ಆರಂಭಿಸಿದರೂ ಅಷ್ಟೇನೂ ಸ್ಪಂದನೆ ವ್ಯಕ್ತವಾಗಲಿಲ್ಲ. ಅಲ್ಲದೆ ಈಗಾಗಲೇ ಸಂಗ್ರಹಿಸಿರುವ ಲಸಿಕೆಯ ಮುಕ್ತಾಯ ದಿನಾಂಕವೂ ಸಮೀಪಿಸುತ್ತಿದೆ.

ಇದನ್ನು ಪರಿಗಣಿಸಿ ಸದ್ಯಕ್ಕೆ ಲಸಿಕೆಯನ್ನು ಖರೀದಿಸದಿರಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಭಾರತದಲ್ಲಿ ಈವರೆಗೆ 219.32 ಕೋಟಿ ಡೋಸ್ ಲಸಿಕೆ ವಿತರಣೆ ಮಾಡಲಾಗಿದೆ.

ಸಿಸೋಡಿಯಾಗೆ ಸಮನ್ಸ್

ಒಂದನೇ ಪುಟದಿಂದ...

ಓನ್ಲಿ ಮಚ್ ಲೌಡರ್ ಮನರಂಜನಾ ಕಂಪನಿಯ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಎಎಪಿ ಕಾರ್ಯಕರ್ತ ವಿಜಯ ನಾಯರ್ ಅವರನ್ನು ಬಂಧಿಸಲಾಗಿದೆ. ಹೈದರಾಬಾದ್‌ನ ಉದ್ಯಮಿ ಅಭಿಷೇಕ್ ಬೊಯಿನ್‌ಪಲ್ಲಿ, ಅವರ ಪಾಲುದಾರ ಅರುಣ್ ಪಿಳ್ಳೆ ಅವರ ಹೆಸರು ಸಿಬಿಐನ ಎಫ್‌ಐಆರ್‌ನಲ್ಲಿ ಇದೆ. ಸಿಬಿಐ ವಿಶೇಷ ನ್ಯಾಯಾಲಯದಲ್ಲಿ ಆಗಸ್ಟ್‌ನಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಎಫ್‌ಐಆರ್‌ನಲ್ಲಿ ಸಿಸೋಡಿಯಾ ಮತ್ತು ಇತರ 14 ಜನರ ಹೆಸರು ಇದೆ.

ದೆಹಲಿ ಅಬಕಾರಿ ನೀತಿ ಜಾರಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಪ್ರಕರಣದಲ್ಲಿ ಸಿಬಿಐ ತನಿಖೆ ನಡೆಸಲು ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್‌ಸಕ್ಸೇನಾ ಅವರು ಶಿಫಾರಸು ಮಾಡಿದ್ದರು. ಅಬಕಾರಿ ನೀತಿಯನ್ನು ಕಳೆದ ವರ್ಷ ನವೆಂಬರ್‌ನಲ್ಲಿ ಜಾರಿಗೆ ತರಲಾಗಿತ್ತು.

ಮಹೇಂದ್ರು ಅವರು ಸಿಸೋಡಿಯಾ ಅವರ ಆಪ್ತರಿಗೆ ಕೋಟ್ಯಂತರ ರೂಪಾಯಿ ನೀಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ. ಅಬಕಾರಿ ನೀತಿ ಜಾರಿಯಲ್ಲಿ ನಡೆದ ಅಕ್ರಮದಲ್ಲಿ ಮಹೇಂದ್ರು ಅವರೂ ಭಾಗಿಯಾಗಿದ್ದಾರೆ ಎಂದು ಆರೋಪಿಸಲಾಗಿದೆ.

ಮೂಲಗಳಿಂದ ಪಡೆದ ಮಾಹಿತಿ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಸಿಬಿಐ ಹೇಳಿದೆ. ಸಂಬಂಧಪಟ್ಟ ಪ್ರಾಧಿಕಾರದ ಅನುಮೋದನೆ ಇಲ್ಲದೆಯೇ ಅಬಕಾರಿ ನೀತಿಗೆ ಸಂಬಂಧಿಸಿದ ನಿರ್ಧಾರಗಳನ್ನು ಸಿಸೋಡಿಯಾ ಸೇರಿದಂತೆ ಹಲವರು ಕೈಗೊಂಡಿದ್ದಾರೆ. ಮದ್ಯ ಮಾರಾಟದ ಗುತ್ತಿಗೆ ಪಡೆದುಕೊಂಡವರು ಗುತ್ತಿಗೆ ಪಡೆದ ನಂತರ ಅಕ್ರಮವಾಗಿ ಲಾಭ ಮಾಡಿಕೊಳ್ಳಲು ನೆರವಾಗಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

> **ಕೇಜ್ರಿವಾಲ್ ತಮ್ಮನ್ನು ದೇವರಿಗೂ ತಮ್ಮ ಸಚಿವರನ್ನು ಸ್ವಾತಂತ್ರ್ಯ ಹೋರಾಟಗಾರರಿಗೂ ಹೋಲಿಸುತ್ತಿದ್ದಾರೆ. ಭ್ರಷ್ಟರನ್ನು ಭಗತ್ ಸಿಂಗ್‌ಗೆ ಹೋಲಿಸಲು ಅವರಿಗೆ ನಾಚಿಕೆಯಾಗಬೇಕು**
> **ಗೌರವ್ ಭಾಟಿಯಾ,** ಬಿಜೆಪಿ ವಕ್ತಾರ

ಅಂಧೇರಿ ಉಪ ಚುನಾವಣೆ: ನಾಮಪತ್ರ ಹಿಂಪಡೆಯಲು ಬಿಜೆಪಿಗೆ ರಾಜ್ ಠಾಕ್ರೆ ಮನವಿ

ಪ್ರಜಾವಾಣಿ ವಾರ್ತೆ

ಮುಂಬೈ: ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಅವರು ಅಂಧೇರಿ ಪೂರ್ವ ವಿಧಾನಸಭೆ ಕ್ಷೇತ್ರದ ಉಪ ಚುನಾವಣಾ ಕಣದಿಂದ ಹಿಂದೆ ಸರಿಯುವಂತೆ ಬಿಜೆಪಿಗೆ ಭಾನುವಾರ ಮನವಿ ಮಾಡಿರುವುದು ಅಚ್ಚರಿ ಮೂಡಿಸಿದೆ.

ಶಿವಸೇನಾ ಶಾಸಕ ರಮೇಶ್ ಲಟ್ಕೆ ನಿಧನದಿಂದ ತೆರವಾಗಿರುವ ಸ್ಥಾನಕ್ಕೆ ಪತ್ನಿ ರುತುಜಾ ಅವರು ಉದ್ಧವ್ ಬಣದ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಬಿಜೆಪಿ ಅಭ್ಯರ್ಥಿಯಾಗಿ ಮುರ್ಜಿ ಪಟೇಲ್ ಸ್ಪರ್ಧಿಸಿದ್ದಾರೆ.

'ರಮೇಶ್ ಅವರ ಅಕಾಲಿಕ ನಿಧನದಿಂದ ತೆರವಾಗಿರುವ ಸ್ಥಾನಕ್ಕೆ ಅವರ ಪತ್ನಿಯನ್ನು ಅವಿರೋಧವಾಗಿ ಆಯ್ಕೆ ಮಾಡುವುದು ಉತ್ತಮ' ಎಂದು ರಾಜ್ ಠಾಕ್ರೆ, ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್‌ಗೆ ಪತ್ರ ಬರೆದಿದ್ದಾರೆ.

'ಪಕ್ಷದ ಅಭ್ಯರ್ಥಿಯ ನಾಮಪತ್ರ ಹಿಂಪಡೆಯುವ ವಿಚಾರದಲ್ಲಿ ಪಕ್ಷದ ವರಿಷ್ಠರು, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಜೊತೆ ಸಮಾಲೋಚಿಸಿ ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ' ಎಂದು ಫಡಣವೀಸ್ ತಿಳಿಸಿದ್ದಾರೆ.

'ಪವಾರ್ ಅವರು ಮಹಾರಾಷ್ಟ್ರದ ರಾಜಕೀಯ ಪರಂಪರೆಯನ್ನು ಮತ್ತೊಂದು ಮಗ್ಗುಲಿಗೆ ತೆಗೆದುಕೊಂಡು ಹೋಗಿದ್ದಾರೆ' ಎಂದು ಉದ್ಧವ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಹಿಮಾ ದಾಸ್‌ಗೆ ನಿರಾಸೆ

ಇಲಕ್ಕಿಯದಾಸನ್, ಶ್ರಬಣಿ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೇಸ್ ತಂಡದ ಇಲಕ್ಕಿಯದಾಸನ್ ಮತ್ತು ಒಡಿಶಾದ ಶ್ರಬಣಿ ನಂದಾ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 100 ಮೀ ಓಟದಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಭಾನುವಾರ ಮಿಂಚು ಹರಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಎರಡನೇ ದಿನ ಪುರುಷರ ವಿಭಾಗದ ಸ್ಪರ್ಧೆಯಲ್ಲಿ ಇಲಕ್ಕಿಯದಾಸನ್ ಅವರು 10.37 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಮಹಿಳೆಯರ ವಿಭಾಗದಲ್ಲಿ ಶ್ರಬಣಿ 11.55 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಅಗ್ರಸ್ಥಾನ ಗಳಿಸಿದರು. ಈ ವಿಭಾಗದಲ್ಲಿ ಪ್ರಮುಖ ಸ್ಪರ್ಧಿ ಎನಿಸಿದ್ದ ಹಿಮಾ ದಾಸ್ (ಅಸ್ಸಾಂ) ಎಂಟನೇ ಸ್ಥಾನಕ್ಕೆ ಕುಸಿದರು.

ಫಲಿತಾಂಶಗಳು: ಪುರುಷರು: 100 ಮೀ.: ಇಲಕ್ಕಿಯ ದಾಸನ್ (ರೈಲ್ವೇಸ್, ಕಾಲ: 10.37 ಸೆ.)–1, ಹರ್ಜಿತ್ ಸಿಂಗ್ (ಸರ್ವಿಸಸ್)–2, ಶಿವಕುಮಾರ್ ಬಿ. (ರೈಲ್ವೇಸ್)–3 400 ಮೀ.: ರಾಜೇಶ್ ರಮೇಶ್ (ರೈಲ್ವೇಸ್, ಕಾಲ: 46.63 ಸೆ.)–1, ಆಯುಷ್ ದಬಾಸ್ (ರೈಲ್ವೇಸ್)–2, ನಿಹಾಲ್ ಜೋಯಲ್ ಡಬ್ಲ್ಯು (ಕರ್ನಾಟಕ)–3. 1500 ಮೀ.: ಪರ್ವೇಜ್ ಖಾನ್ (ಸರ್ವಿಸಸ್, ಕಾಲ: 3 ನಿ. 46.41 ಸೆ.)–1, ಅಭಿಷೇಕ್ ಠಾಕೂರ್ (ಮಧ್ಯಪ್ರದೇಶ)–2, ರಿತೇಶ್ ಓರೆ (ಮಧ್ಯಪ್ರದೇಶ)–3. ಶಾಟ್‌ಪಟ್: ತಜಿಂದರ್ ಪಾಲ್ ತೂರ್ (ಸರ್ವಿಸಸ್, ದೂರ: 20.68 ಮೀ.)–1, ಕರಣ್‌ವೀರ್ ಸಿಂಗ್ (ರೈಲ್ವೇಸ್)–2, ಇಂದರ್‌ಜೀತ್ ಸಿಂಗ್ (ಹರಿಯಾಣ)–3. ಲಾಂಗ್‌ಜಂಪ್: ಯುಗಾಂತ್ ಶೇಖರ್ ಸಿಂಗ್(ರೈಲ್ವೇಸ್, ದೂರ: 7.59 ಮೀ)–1, ಮೊಹಮ್ಮದ್ ಅಸಿಫ್ (ಕೇರಳ)–2, ಆರ್ಯ ಎಸ್. (ಕರ್ನಾಟಕ)–3.

ಮಹಿಳೆಯರು: 100 ಮೀ.: ಶ್ರಬಣಿ ನಂದಾ (ಒಡಿಶಾ, ಕಾಲ: 11.55 ಸೆ.)–1, ಹಿಮಾಶ್ರೀ ರಾಯ್ (ರೈಲ್ವೇಸ್)–2, ಅರ್ಚನಾ ಸುಶೀಂದ್ರನ್ (ತಮಿಳುನಾಡು)–3 400 ಮೀ.: ಶುಭಾ ವೆಂಕಟೇಶ್ (ತಮಿಳುನಾಡು, ಕಾಲ: 52.67 ಸೆ.)–1, ಸೋನಿಯಾ ಬೈಷ್ಯಾ (ರೈಲ್ವೇಸ್)–2, ದಂಡಿ ಜ್ಯೋತಿಕಾ ಶ್ರೀ (ಆಂಧ್ರ ಪ್ರದೇಶ)–3. 1500 ಮೀ.: ಕೆ.ಎಂ. ದೀಕ್ಷಾ (ಮಧ್ಯಪ್ರದೇಶ, ಕಾಲ: 4 ನಿ. 23.03 ಸೆ.)–1, ಅಂಕಿತಾ (ರೈಲ್ವೇಸ್)–2, ಲಿಲಿ ದಾಸ್ (ಪಶ್ಚಿಮ ಬಂಗಾಳ)–3.

ಹೆಪ್ಟಾಥ್ಲಾನ್: ಸ್ವಪ್ನಾ ಬರ್ಮನ್ –1, ಸೌಮ್ಯಾ ಮುರುಗನ್–2, ಸೋನು ಕುಮಾರಿ–3 (ಮೂವರು ರೈಲ್ವೇಸ್ ತಂಡ)



100 ಮೀಟರ್ಸ್ ಓಟದಲ್ಲಿ ಗುರಿಯತ್ತ ಮುನ್ನುಗ್ಗಿದ ಇಲಕ್ಕಿಯದಾಸನ್ (ಎಡ) ಮತ್ತು ಶ್ರಬಣಿ ನಂದಾ
ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ನಿಹಾಲ್ ಜೋಯಲ್ ಡಬ್ಲ್ಯು.

ರಾಜ್ಯದ ನಿಹಾಲ್, ಆರ್ಯಗೆ ಕಂಚು

ಕರ್ನಾಟಕದ ನಿಹಾಲ್ ಜೋಯಲ್ ಡಬ್ಲ್ಯು. ಪುರುಷರ 400 ಮೀ. ಓಟದಲ್ಲಿ ಮತ್ತು ಆರ್ಯ ಎಸ್. ಅವರು ಲಾಂಗ್‌ಜಂಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರು. ನಿಹಾಲ್ 47.03 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.
ಆರ್ಯ 7.49 ಮೀಟರ್ ಸಾಧನೆ ಮಾಡಿದರು.

ಶ್ರೀಲಂಕಾಗೆ ನಮಿಬಿಯಾ ಆಘಾತ

ಟಿ20 ವಿಶ್ವಕಪ್ ಕ್ರಿಕೆಟ್: ಫ್ರೈಲಿಂಕ್ ಆಲ್‌ರೌಂಡ್ ಆಟ

ಜೀಲಾಂಗ್ (ಪಿಟಿಐ): ಏಷ್ಯಾ ಕಪ್ ವಿಜೇತ ಶ್ರೀಲಂಕಾ ತಂಡಕ್ಕೆ ನಮಿಬಿಯಾ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ ಆಘಾತ ನೀಡಿತು.

ಭಾನುವಾರ ಸೈಮಂಡ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಜಾನ್ ಫ್ರೈಲಿಂಕ್ (44 ಹಾಗೂ 26ಕ್ಕೆ2) ಆಲ್‌ರೌಂಡ್ ಆಟದ ಬಲದಿಂದ ನಮಿಬಿಯಾ 55 ರನ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ಲಂಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇತ್ತೀಚೆಗಷ್ಟೇ ಏಷ್ಯಾ ಕಪ್ ಟೂರ್ನಿಯಲ್ಲಿ ಮಿಂಚಿದ್ದ ಲಂಕಾ ಬೌಲರ್‌ಗಳಿಗೆ ಕ್ರಿಕೆಟ್ ಲೋಕದಲ್ಲಿ ಅಂಬೆಗಾಲಿಡುತ್ತಿರುವ ನಮಿಬಿಯಾವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕಲು ಸಾಧ್ಯವಾಗಲಿಲ್ಲ.

ಮಧ್ಯಮಕ್ರಮಾಂಕದ ಬ್ಯಾಟರ್‌ಗಳ ಉತ್ತಮ ಆಟದಿಂದ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 163 ರನ್ ಗಳಿಸಿತು. 15 ಓವರ್‌ಗಳಲ್ಲಿ 93 ರನ್ ಗಳಿಸಿ ಆರು ವಿಕೆಟ್ ಕಳೆದುಕೊಂಡಿದ್ದ ತಂಡವು ಪುಟಿದೆದ್ದಿತು. ಕೊನೆಯ ಐದು ಓವರ್‌ಗಳಲ್ಲಿ 69 ರನ್‌ಗಳು ಹರಿದುಬರಲು ಫ್ರೈಲಿಂಕ್ ಹಾಗೂ ಸ್ಮಿತ್ ಅವರ ಬ್ಯಾಟಿಂಗ್ ಕಾರಣವಾಯಿತು.

ಈ ಹೋರಾಟದ ಮೊತ್ತವನ್ನು ಬೆನ್ನಟ್ಟಿದ ಶ್ರೀಲಂಕಾ ಬಳಗದ ಬ್ಯಾಟರ್‌ಗಳಿಗೆ ನಮಿಬಿಯಾ ಬೌಲಿಂಗ್ ಪಡೆ ತಡೆಯೊಡ್ಡಿತು. ಹೆಚ್ಚು ಡಾಟ್‌ಬಾಲ್‌ಗಳನ್ನೂ ಪ್ರಯೋಗಿಸಿದ ಬೌಲರ್‌ಗಳು ವಿಕೆಟ್ ಕೂಡ ಗಳಿಸಿದರು. ಉತ್ತಮವಾಗಿ ಫೀಲ್ಡಿಂಗ್ ಕೂಡ ಮಾಡಿದರು.

ಇದರಿಂದಾಗಿ ಲಂಕಾ ತಂಡವು 19 ಓವರ್‌ಗಳಲ್ಲಿ 108 ರನ್ ಗಳಿಸಿ ಆಲೌಟ್ ಆಯಿತು. 2014ರ ವಿಶ್ವಕಪ್ ವಿಜೇತ ಶ್ರೀಲಂಕಾ ತಂಡವು ಆರಂಭದಲ್ಲಿಯೇ ಸೋಲಿನ ಕಹಿ ಅನುಭವಿಸಿತು.

ಹೋದ ಸಲದ ಟೂರ್ನಿಯಲ್ಲಿಯೂ ನಮಿಬಿಯಾ ಉತ್ತಮವಾಗಿ ಆಡಿತ್ತು.

ಇನ್ನೊಂದು ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವು ಯುನೈಟೆಡ್ ಅರಬ್ ಎಮಿರೇಟ್ಸ್ ವಿರುದ್ಧ 3 ವಿಕೆಟ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ನಮಿಬಿಯಾ; 20 ಓವರ್‌ಗಳಲ್ಲಿ 7ಕ್ಕೆ163 (ಲಾಟಿ ಈಟನ್ 20, ಸ್ಟಿಫನ್ ಬಾರ್ಡ್ 26, ಗೆರಾರ್ಡ್ ಎರಸ್ಮಸ್ 20, ಜಾನ್ ಫ್ರೈಲಿಂಕ್ 44, ಜೆ.ಜೆ. ಸ್ಮಿತ್ ಔಟಾಗದೆ 31, ಪ್ರಮೋದ್ ಮಧುಶಾನ್ 37ಕ್ಕೆ2) ಶ್ರೀಲಂಕಾ: 19 ಓವರ್‌ಗಳಲ್ಲಿ 108 (ಧನಂಜಯ ಡಿಸಿಲ್ವಾ 12, ಭಾನುಕಾ ರಾಜಪಕ್ಸ 20, ದಸುನ್ ಶನಕ 29, ಡೇವಿಡ್ ವೀಸ್ 16ಕ್ಕೆ2, ಬೆಮಾರ್ಡ್ ಶೋಲ್ಜ್ 18ಕ್ಕೆ2, ಬೆನ್ ಶಿಕೊಂಗೊ 22ಕ್ಕೆ2, ಜಾನ್ ಫ್ರೈಲಿಂಕ್ 26ಕ್ಕೆ2) ಫಲಿತಾಂಶ: ನಮಿಬಿಯಾ ತಂಡಕ್ಕೆ 55 ರನ್‌ಗಳ ಜಯ. ಪಂದ್ಯಶ್ರೇಷ್ಠ: ಜಾನ್ ಫ್ರೈಲಿಂಕ್.

ಯುಎಇ: 20 ಓವರ್‌ಗಳಲ್ಲಿ 8ಕ್ಕೆ111 (ಮೊಹಮ್ಮದ್ ವಾಸೀಂ 41, ಫ್ರೆಡ್ ಕ್ಲಾಸೆನ್ 13ಕ್ಕೆ2, ಬೆಸ್ ಡಿ ಲೀಡ್ 19ಕ್ಕೆ3) ನೆದರ್ಲೆಂಡ್ಸ್: 19.5 ಓವರ್‌ಗಳಲ್ಲಿ 7ಕ್ಕೆ112 (ಮ್ಯಾಕ್ಸ್ ಒಡೌಡ್ 23, ಸ್ಕಾಟ್ ಎಡ್ವರ್ಡ್ಸ್ 16, ಕಾಲಿನ್17, ಜುನೇದ್ ಸಿದ್ದೀಕಿ 24ಕ್ಕೆ3) ಫಲಿತಾಂಶ: ನೆದರ್ಲೆಂಡ್ಸ್ ತಂಡಕ್ಕೆ 3 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ: ಬೆಸ್ ಡಿ ಲೀಡ್

ಇಂದಿನ ಪಂದ್ಯಗಳು (ಬಿ ಗುಂಪು)
ವೆಸ್ಟ್ ಇಂಡೀಸ್–ಸ್ಕಾಟ್ಲೆಂಡ್ (ಬೆಳಿಗ್ಗೆ 9.30ರಿಂದ)
ಜಿಂಬಾಬ್ವೆ–ಐರ್ಲೆಂಡ್ (ಮಧ್ಯಾಹ್ನ 1.30ರಿಂದ)
ಸ್ಥಳ: ಹೋಬರ್ಟ್

ನಮಿಬಿಯಾದ ಆಟಗಾರ ಜಾನ್ ಫ್ರೈಲಿಂಕ್ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಐಎಸ್‌ಎಲ್: ಡಿಮಿಟ್ರಿ ಹ್ಯಾಟ್ರಿಕ್

ಕೊಚ್ಚಿ (ಐಎಸ್‌ಎಲ್): ಡಿಮಿಟ್ರಿ ಪೆಟ್ರಾಟೊಸ್ ಅವರು ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಎಟಿಕೆ ಮೋಹನ್ ಬಾಗನ್ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವು ಸಾಧಿಸಿತು.

ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ 5–2ರಿಂದ ಕೇರಳ ಬ್ಲಾಸ್ಟರ್ಸ್ ತಂಡವನ್ನು ಸೋಲಿಸಿತು.

ಚಾರ್ವಿಗೆ ಚಿನ್ನ



ಬೆಂಗಳೂರು: ಇತ್ತೀಚೆಗೆ ಎಂಟು ವರ್ಷದೊಳಗಿನವರ ವಿಭಾಗದ ವಿಶ್ವ ಚೆಸ್ ಚಾಂಪಿಯನ್ ಆಗಿದ್ದ ನಗರದ ಚಾರ್ವಿ ಅನಿಲ್‌ಕುಮಾರ್ ಮುಡಿಗೆ ಮತ್ತೊಂದು ಗರಿ ಮೂಡಿದೆ. ಏಷ್ಯನ್ ಯೂತ್ 8 ವರ್ಷದೊಳಗಿನವರ ರ್‍ಯಾಪಿಡ್ ಟೂರ್ನಿಯಲ್ಲಿ ಅವರು ಚಿನ್ನದ ಪದಕ ಜಯಿಸಿದ್ದಾರೆ.

ಇಂಡೋನೇಷ್ಯಾದ ಬಾಲಿಯಲ್ಲಿ ಭಾನುವಾರ ನಡೆದ ಟೂರ್ನಿಯ ಏಳನೇ ಮತ್ತು ಅಂತಿಮ ಸುತ್ತಿನಲ್ಲಿ ಚಾರ್ವಿ, ವಿಯೆಟ್ನಾಂ ವೊ ಮೈ ಫೊಂಗ್ ಅವರನ್ನು ಸೋಲಿಸಿದರು.

ಕಾರ್ಲ್‌ಸನ್‌ಗೆ ಆಘಾತ ನೀಡಿದ ಅರ್ಜುನ್

ಚೆನ್ನೈ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಅವರು ಏಮ್‌ಚೆಸ್ ರ್‍ಯಾಪಿಡ್ ಆನ್‌ಲೈನ್ ಚೆಸ್ ಟೂರ್ನಿಯಲ್ಲಿ ಭಾನುವಾರ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಸೋಲುಣಿಸಿದರು. ಅರ್ಜುನ್, ಪ್ರಿಲಿಮನರಿ ಹಂತದ 7ನೇ ಸುತ್ತಿನಲ್ಲಿ ನಾರ್ವೆ ಆಟಗಾರನಿಗೆ ಆಘಾತ ನೀಡಿದರು. ಕಾರ್ಲ್‌ಸನ್ ಎದುರು ಅರ್ಜುನ್‌ಗೆ ಇದು ಮೊದಲ ಜಯ.

ಶೂಟಿಂಗ್: ಭಾರತ ತಂಡಕ್ಕೆ ಚಿನ್ನದ ಪದಕ

ಕೈರೊ (ಪಿಟಿಐ): ರುದ್ರಾಕ್ಷ್ ಪಾಟೀಲ್, ಕಿರಣ್ ಜಾಧವ್ ಮತ್ತು ಅರ್ಜುನ್ ಬಬುತಾ ಅವರಿದ್ದ ಭಾರತ ತಂಡವು ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನ 10 ಮೀಟರ್ಸ್ ಏರ್ ರೈಫಲ್ ತಂಡ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿತು. ಇಲ್ಲಿ ನಡೆಯುತ್ತಿರುವ ಟೂರ್ನಿಯ ಫೈನಲ್‌ನಲ್ಲಿ ಭಾನುವಾರ ಭಾರತ ತಂಡದವರು 16–10ರಿಂದ ಚೀನಾ ತಂಡಕ್ಕೆ ಸೋಲುಣಿಸಿದರು.

ಯೋಧಾಸ್‌ಗೆ ಮಣಿದ ಬುಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಪಿ ಯೋಧಾ ತಂಡದ ಪರದೀಪ್ ನರ್ವಾಲ್ ಹಾಗೂ ಸುರೇಂದರ್ ಗಿಲ್ ಅವರ ಮಿಂಚಿನ ದಾಳಿಯ ಮುಂದೆ ಬೆಂಗಳೂರು ಬುಲ್ಸ್ ತಂಡವು ಮುಗ್ಗರಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಯೋಧಾಸ್ ತಂಡವು 44–37ರಿಂದ ಬೆಂಗಳೂರು ವಿರುದ್ಧ ಜಯಿಸಿತು. ನರ್ವಾಲ್ ಹಾಗೂ ಗಿಲ್ ತಲಾ 14 ಅಂಕ ಗಳಿಸಿದರು.

ವಾರಾಂತ್ಯದಂದು ತವರಿನ ತಂಡದ ಅಭಿಮಾನಿಗಳು ಹೆಚ್ಚು ಸಂಖ್ಯೆಯಲ್ಲಿ ಸೇರಿದ್ದರು. ಆದರೆ, ಪಂದ್ಯದಲ ಮೊದಲಾರ್ಧದಲ್ಲಿಯೇ ಯುಪಿ ತಂಡವು (26–12) ದೊಡ್ಡ ಅಂತರದ ಮುನ್ನಡೆ ಸಾಧಿಸಿತು.

ಆದರೆ ವಿರಾಮದ ನಂತರ ಬೆಂಗಳೂರು ತಂಡವು ವಿರೋಚಿತವಾಗಿ ಆಡಿತು. ಇದರಿಂದಾಗಿ ಈ ಅವಧಿಯಲ್ಲಿ ಯುಪಿಗಿಂತ (18–25) ಬೆಂಗಳೂರು ಹೆಚ್ಚು ಅಂಕ ಗಳಿಸಿತು. ಇದರಿಂದಾಗಿ ಪಂದ್ಯವು ರೋಚಕತೆ ಮೂಡಿಸಿತ್ತು.

ಆದರೆ ಒಟ್ಟು ಫಲಿತಾಂಶದಲ್ಲಿ ಏಳು ಅಂಕಗಳ ಹಿನ್ನಡೆ ಅನುಭವಿಸಿತು. ಬೆಂಗಳೂರು ತಂಡದ ವಿಕಾಶ್ ಖಂಡೋಲಾ (12) ಹಾಗೂ ಭರತ್ (9) ರೇಡಿಂಗ್‌ನಲ್ಲಿ ಗಮನ ಸೆಳೆದರು.

ಪುಣೇರಿಗೆ ರೋಚಕ ಜಯ: ದಿನದ ಇನ್ನೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡವು 30–28ರಿಂದ ಯು ಮುಂಬಾ ಎದುರು ರೋಚಕ ಜಯಸಾಧಿಸಿತು.

ಪುಣೇರಿ ತಂಡದ ರೇಡರ್ ಅಸ್ಲಂ ಇನಾಂದಾರ್ (9), ಮೋಹಿತ್ ಗೋಯತ್ (5) ಗಮನ ಸೆಳೆದರು.

ಮುಂಬಾ ತಂಡದ ಗುಮಾನ್ ಸಿಂಗ್ (7) ಹಾಗೂ ಜೈ ಭಗವಾನ್ (5) ಉತ್ತಮವಾಗಿ ಆಡಿದರು.

ಪಂದ್ಯವು ಆರಂಭದಿಂದಲೇ ಕುತೂಹಲ ಕೆರಳಿಸಿತ್ತು. ವಿರಾಮದ ವೇಳೆಗೆಪುಣೇರಿ ತಂಡವು ಒಂದು ಅಂಕ (14–13) ಮುನ್ನಡೆಯಲ್ಲಿತ್ತು. ವಿರಾಮದ ನಂತರವೂ (16–15) ಕೇವಲ ಒಂದು ಅಂಕದ ಅಂತರದ ಮುನ್ನಡೆ ಗಳಿಸಿ ಗೆದ್ದಿತು.

ಯುಪಿ ಯೋಧಾ ಹಾಗೂ ಬೆಂಗಳೂರು ಬುಲ್ಸ್ ಆಟಗಾರರ ಹಣಾಹಣಿ

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಡೆಲ್ಲಿ	4	4	0	0	20
ಜೈಪುರ	4	3	1	0	16
ಬೆಂಗಾಲ್	4	3	1	0	15
ಯುಪಿ	4	2	2	0	12
ಮುಂಬಾ	4	2	2	0	11
ಬೆಂಗಳೂರು	4	2	2	0	11

ಭಾರತ ಯುವ ಬ್ಯಾಸ್ಕೆಟ್‌ಬಾಲ್ ತಂಡಕ್ಕೆ ವಿಶ್ವಕಪ್ ಅರ್ಹತೆ

ಬೆಂಗಳೂರು: ಉತ್ತಮ ಆಟವಾಡಿದ ಭಾರತ ಯುವ 3X3 ಬ್ಯಾಸ್ಕೆಟ್‌ಬಾಲ್ ತಂಡವು ಮೊದಲ ಬಾರಿಗೆ ಫಿಬಾ 18 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಳಿಸಿದೆ.

ಮಲೇಷ್ಯಾದ ಕ್ವಾಲಾಲಂಪುರದಲ್ಲಿ ನಡೆದ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಭಾರತ ತಂಡದವರು 21–20ರಿಂದ ಚೀನಾ ತೈಪೆ ತಂಡಕ್ಕೆ ಸೋಲುಣಿಸಿದರು. ಇದರೊಂದಿಗೆ ಟೂರ್ನಿಯಲ್ಲಿ ಎರಡನೇ ಸ್ಥಾನ ಗಳಿಸಿ ವಿಶ್ವಕಪ್ ಟೂರ್ನಿಯ ಟಿಕೆಟ್ ಗಿಟ್ಟಿಸಿದರು. ಫೈನಲ್‌ನಲ್ಲಿ ಭಾರತ ತಂಡವು 17–21ರಿಂದ ಜಪಾನ್‌ಗೆ ಸೋತಿತು.

ನಗದು ಬಹುಮಾನ: ವಿಶ್ವಕಪ್ ಅರ್ಹತೆ ಗಳಿಸಿದ ಭಾರತ ತಂಡದ ಆಟಗಾರರಿಗೆ ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಕೆ.ಗೋವಿಂದರಾಜು ತಲಾ ₹ 1 ಲಕ್ಷ ಬಹುಮಾನ ಪ್ರಕಟಿಸಿದ್ದಾರೆ.

ದೆಹಲಿ ಹಾಫ್ ಮ್ಯಾರಥಾನ್: ಅವಿನಾಶ್ ಸಬ್ಳೆ ಮಿಂಚು

ಚಾಲಾ ರೆಗಾಸ, ಐರಿನ್‌ಗೆ ಕಿರೀಟ

ನವದೆಹಲಿ (ಪಿಟಿಐ): ಇಥಿಯೋಪಿಯಾದ ಚಾಲಾ ರೆಗಾಸ ಮತ್ತು ಕೀನ್ಯಾದ ಐರಿನ್ ಚೆಪ್ಟಾಯ್ ಅವರು ದೆಹಲಿ ಹಾಫ್ ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಭಾನುವಾರ ನಡೆದ ಪುರುಷರ ವಿಭಾಗದ ಸ್ಪರ್ಧೆಯಲ್ಲಿ ರೆಗಾಸ 1 ತಾಸು 30 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಮಹಿಳೆಯರ ರೇಸ್‌ನಲ್ಲಿ ಐರಿನ್ 1 ತಾಸು 6 ನಿಮಿಷ 42 ಸೆಕೆಂಡುಗಳಲ್ಲಿ ಅಂತಿಮ ಗೆರೆ ಮುಟ್ಟಿದರು.

ಭಾರತೀಯ ಎಲೀಟ್ ಪುರುಷರ ವಿಭಾಗದಲ್ಲಿ ತೀವ್ರ ಪೈಪೋಟಿ ಕಂಡುಬಂತು. ಹಾಲಿ ಚಾಂಪಿಯನ್ ಅವಿನಾಶ್ ಸಬ್ಳೆ ಮತ್ತು ಕಾರ್ತಿಕ್ ಕುಮಾರ್ ಇಬ್ಬರೂ 64 ನಿಮಿಷಗಳಲ್ಲಿ ರೇಸ್ ಮುಗಿಸಿದರು. ಆದರೆ ಮರುಪರಿಶೀಲನೆಯ ಬಳಿಕ ಭಾರತ ಅಥ್ಲೆಟಿಕ್ ಫೆಡರೇಷನ್‌ನ ತಾಂತ್ರಿಕ ಅಧಿಕಾರಿಗಳು ಅವಿನಾಶ್ ಅವರನ್ನು ವಿಜೇತರೆಂದು ಘೋಷಿಸಿದರು. ಭಾರತೀಯ ಎಲೀಟ್ ಮಹಿಳೆಯರ ವಿಭಾಗದಲ್ಲಿ ಸಂಜೀವನಿ ಜಾಧವ್ ಕಿರೀಟ ಧರಿಸಿದರು. ಅವರು 1 ತಾಸು 17 ನಿ. 53 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಮೋನಿಕಾ ಅಥಾರ ಎರಡನೇ ಸ್ಥಾನ ಗಳಿಸಿದರು.



ಐರಿನ್ ಚೆಪ್ಟಾಯ್– ಎಎಫ್‌ಪಿ ಚಿತ್ರ

ಚಾಲಾ ರೆಗಾಸ– ಪಿಟಿಐ ಚಿತ್ರ

ವಿದ್ವತ್ ಕಾವೇರಪ್ಪಗೆ ಐದು ವಿಕೆಟ್: ಕರ್ನಾಟಕಕ್ಕೆ ಜಯ

ಚಂಡೀಗಡ: 5 ವಿಕೆಟ್‌ಗಳ ಗೊಂಚಲು ಗಳಿಸಿದ ವಿದ್ವತ್ ಕಾವೇರಪ್ಪ ಹಾಗೂ ಚೆಂದದ ಬ್ಯಾಟಿಂಗ್ ಮಾಡಿದ ಶ್ರೇಯಸ್ ಗೋಪಾಲ್ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಜಮ್ಮು –ಕಾಶ್ಮೀರ್ ವಿರುದ್ಧ ಕರ್ನಾಟಕ್ಕೆ ಜಯದ ಕಾಣಿಕೆ ನೀಡಿದರು.

ಟಾಸ್ ಗೆದ್ದ ಕರ್ನಾಟಕದ ನಾಯಕ ಮಯಂಕ್ ಅಗರವಾಲ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆದರೆ ಮಯಂಕ್ ಸೇರಿದಂತೆ ಐವರು ಬ್ಯಾಟರ್‌ಗಳಲ್ಲಿ ಕೇವಲ 59 ರನ್‌ಗಳಿಸಿದ್ದಾಗ ಔಟಾದರು. ಈ ಹೊತ್ತಿನಲ್ಲಿ ಶ್ರೇಯಸ್ (ಅಜೇಯ 48; 38ಎ, 4X4, 6X1) ಹಾಗೂ ಮನೋಜ್ ಬಾಂಢಗೆ (41; 23ಎ, 4X2, 4X6) 6ನೇ ವಿಕೆಟ್ ಜೊತೆಯಾಟದಲ್ಲಿ 61 ರನ್ ಗಳಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 7ಕ್ಕೆ147 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಜಮ್ಮು–ಕಾಶ್ಮೀರ ತಂಡಕ್ಕೆ ನವಪ್ರತಿಭೆ ವಿದ್ವತ್ (3.2–0–11–5) ಬರಸಿಡಿಲಿನಂತೆ ಎರಗಿದರು. ಅವರ ಸ್ವಿಂಗ್ ದಾಳಿಯ ಮುಂದೆ ಕಣಿವೆ ರಾಜ್ಯವು 18.2 ಓವರ್‌ಗಳಲ್ಲಿ 113 ರನ್ ಗಳಿಸಿ ಆಲೌಟ್ ಆಯಿತು.

ಕೊಡಗಿನ ಹುಡುಗ ವಿದ್ವತ್‌ಗೆ ಇದೇ ಮೊದಲ ಟಿ20 ಟೂರ್ನಿ ಆಗಿದೆ. ಮಹಾರಾಷ್ಟ್ರ ವಿರುದ್ಧ ಮೊಹಾಲಿಯಲ್ಲಿ ನಡೆದ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು. ಮಯಂಕ್ ಬಳಗಕ್ಕೆ ಟೂರ್ನಿಯಲ್ಲಿ ಇದು 3ನೇ ಜಯ. ಒಟ್ಟು 12 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಮಂಗಳವಾರ ನಡೆಯುವ ಪಂದ್ಯದಲ್ಲಿ ಕರ್ನಾಟಕ ತಂಡವು ಅರುಣಾಚಲ ಪ್ರದೇಶವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 20 ಓವರ್‌ಗಳಲ್ಲಿ 7ಕ್ಕೆ147 (ದೇವದತ್ತ ಪಡಿಕ್ಕಲ್ 22, ಲವನಿತ್ ಸಿಸೊಡಿಯಾ 20, ಶ್ರೇಯಸ್ ಗೋಪಾಲ್ 48, ಮನೋಜ್ ಭಾಂಡಗೆ 41, ಅಬಿದ್ ಮುಷ್ತಾಕ್ 16ಕ್ಕೆ2, ರಿತಿಕ್ ಸಿಂಗ್ 16ಕ್ಕೆ2) ಜಮ್ಮು–ಕಾಶ್ಮೀರ : 18.2 ಓವರ್‌ಗಳಲ್ಲಿ 113 (ವಿವ್ರಾಂತ್ ಶರ್ಮಾ 63, ಅಬಿದ್ ಮುಷ್ತಾಕ್ 32, ವಿದ್ವತ್ ಕಾವೇ ರಪ್ಪ 11ಕ್ಕೆ5, ವಾಸುಕಿ ಕೌಶಿಕ್ 32ಕ್ಕೆ2, ವಿಜಯ ಕುಮಾರ್ ವೈಶಾಖ್ 15ಕ್ಕೆ2) ಫಲಿತಾಂಶ: ಕರ್ನಾಟಕ ತಂಡಕ್ಕೆ 34 ರನ್ ಜಯ.

ವಿದ್ವತ್ ಕಾವೇರಪ್ಪ

ಕುಸ್ತಿ: ದಾವಣಗೆರೆ, ಕಾರವಾರಕ್ಕೆ ಪ್ರಶಸ್ತಿ

ಗದಗ: ದಾವಣಗೆರೆ ಹಾಗೂ ಕಾರವಾರ ತಂಡಗಳು ನಗರದಲ್ಲಿ ನಡೆದ ರಾಜ್ಯಮಟ್ಟದ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ಕುಸ್ತಿಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದವು.

ಪುರುಷರ ವಿಭಾಗದಲ್ಲಿ 53 ಅಂಕ ಗಳಿಕೆಯೊಂದಿಗೆ ದಾವಣಗೆರೆ ತಂಡ ಪ್ರಥಮ ಸ್ಥಾನ ಪಡೆಯಿತು. ಬಾಗಲಕೋಟೆ ತಂಡ 36 ಅಂಕ ಪಡೆದು ರನ್ನರ್ಸ್‌ಅಪ್ ಆಯಿತು. ಮಹಿಳೆಯರ ವಿಭಾಗದಲ್ಲಿ ಕಾರ ವಾರ ತಂಡ 25 ಅಂಕ ಗಳಿಕೆಯೊಂದಿಗೆ ಪ್ರಥಮ ಸ್ಥಾನ ಪಡೆಯಿತು. 19 ಅಂಕ ಪಡೆದ ದಕ್ಷಿಣ ಕನ್ನಡ ದ್ವಿತೀಯ ಸ್ಥಾನ ಪಡೆಯಿತು.

ದಾವಣಗೆರೆ ವರದಿ: ಇಲ್ಲಿನ ಕ್ರೀಡಾ ವಸತಿನಿಲಯದ ಎಂಟು ಕುಸ್ತಿಪಟುಗಳು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಗಳನ್ನು ಗೆದ್ದು ಸ್ಕೂಲ್ ಗೇಮ್ಸ್ ಆಫ್ ಇಂಡಿಯಾದ 19 ವರ್ಷದೊಳಗಿನವರ ರಾಷ್ಟ್ರೀಯ ಕೂಟಕ್ಕೆ ಆಯ್ಕೆಯಾಗಿದ್ದಾರೆ. ಗ್ರಿಕೊ ರೋಮನ್ ಶೈಲಿಯ 60 ಕೆ.ಜಿ. ವಿಭಾಗದಲ್ಲಿ ಸಂಜು ಕೊರವರ, ಆಕಾಶ್ ಸಾಗೋಟಿ (63 ಕೆ.ಜಿ.), ದಾನೇಶ್ ಗಲಗಲಿ (67 ಕೆ.ಜಿ.), ಶ್ರವಣ್ ಎಸ್. (72 ಕೆ.ಜಿ.), ಕಿರಣ್ ಬಿ.ಎಚ್. (82 ಕೆ.ಜಿ.), ರಾಘವೇಂದ್ರ (87 ಕೆ.ಜಿ.) ಮತ್ತು ಫ್ರೀ ಸ್ಟೈಲ್ ಶೈಲಿಯ 57 ಕೆ.ಜಿ. ವಿಭಾಗದಲ್ಲಿ ಬಸವರಾಜ ಸಂತಿ, 70 ಕೆ.ಜಿ.ಯಲ್ಲಿ ಮಹಾಂತೇಶ ಗದ್ದಿ ಚಿನ್ನ ಗೆದ್ದರು.

ಪ್ರಶಸ್ತಿ ಗೆದ್ದ ಶ್ರೀನಾಥ್ ರಾವ್ (ಮಧ್ಯ), ರನ್ನರ್ ಅಪ್ ರತ್ನಾಕರನ್ (ಬಲ) ಮತ್ತು ಮೂರನೇ ಸ್ಥಾನ ಗಳಿಸಿದ ಶರಣ್ ರಾವ್

ಚೆಸ್: ಶ್ರೀನಾಥ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಕುಂದಾಪುರ (ಉಡುಪಿ ಜಿಲ್ಲೆ): ಇಂಟರ್‌ನ್ಯಾಷನಲ್ ಮಾಸ್ಟರ್, ಛತ್ತೀಸಗಢದ ಶ್ರೀನಾಥ್ ರಾವ್ ಅವರು ಟೊರ್ಪೆಡೊಸ್ ಸ್ಪೋರ್ಟ್ಸ್ ಕ್ಲಬ್ ಆಯೋಜಿಸಿದ್ದ ರಶ್ಮಿ ಶೆಟ್ಟಿ ಸ್ಮಾರಕ ಫಿಡೆ ರೇಟೆಡ್ ರ್‍ಯಾಪಿಡ್ ಚೆಸ್ ಟೂರ್ನಿಯ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಶ್ರೀ ನಾರಾಯಣ ಗುರು ಸಭಾಂಗಣದಲ್ಲಿ ಭಾನುವಾರ ಮುಕ್ತಾಯಗೊಂಡ ಟೂರ್ನಿಯಲ್ಲಿ ಅಜೇಯರಾಗಿ ಉಳಿದ ಅವರು ಮಿರುಗುವ ಟ್ರೋಫಿ ಮತ್ತು ₹ 30,000 ಬಹುಮಾನ ಮೊತ್ತ ಗಳಿಸಿದರು. ರೈಲ್ವೇಸ್ ಆಟಗಾರ, ಇಂಟರ್‌ನ್ಯಾಷನಲ್ ಮಾಸ್ಟರ್ ರತ್ನಾಕರನ್ ರನ್ನರ್ ಅಪ್ ಆದರೆ ಫಿಡೆ ಮಾಸ್ಟರ್ ಮಂಗಳೂರಿನ ಶರಣ್ ರಾವ್ 3ನೇ ಸ್ಥಾನ ಗಳಿಸಿದರು.

ರತ್ನಾಕರನ್, ಶರಣ್ ರಾವ್, ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಇಶಾ ಶರ್ಮಾ ಮತ್ತು ಮಹಾರಾಷ್ಟ್ರದ ಅಖಿಲೇಶ್ ನಗರೆ ಅವರು ತಲಾ ಎಂಟು ಪಾಯಿಂಟ್ ಗಳಿಸಿದರು. ಉತ್ತಮ ಟೈ ಬ್ರೇಕರ್ ಸ್ಕೋರ್ ಆಧಾರದಲ್ಲಿ ಇವರಿಗೆ ಕ್ರಮವಾಗಿ ಎರಡರಿಂದ ಐದನೇ ಸ್ಥಾನ ಲಭಿಸಿತು.

2196 ಎಲೊ ರೇಟಿಂಗ್ ಹೊಂದಿರುವ ಶ್ರೀನಾಥ್ ರಾವ್ ತೆಲಂಗಾಣದ ಆಟಗಾರ ಚಕ್ರವರ್ತಿ ರೆಡ್ಡಿ ಅವರನ್ನು ಅಂತಿಮ ಸುತ್ತಿನಲ್ಲಿ ಮಣಿಸಿದರು. ರತ್ನಾಕರನ್ (2242 ಎಲೊ ರೇಟಿಂಗ್) ಕರ್ನಾಟಕದ ಅಭಿಷೇಕ್ ಗಾಣಿಗೇರ್ (1431) ವಿರುದ್ಧ, ಶರಣ್ ರಾವ್ (2250) ತಮಿಳುನಾಡಿನ ಮಣಿಕಂಠನ್ (1985) ವಿರುದ್ಧ, ಇಶಾ ಶರ್ಮಾ (2134) ಗೋವಾದ ಆರ್ಯನ್ ಶಾಮರಾವ್ ರಾಯ್ಕರ್ (1514) ವಿರುದ್ಧ ಜಯ ಗಳಿಸಿದರು.

ಎಐಸಿಸಿ ಚುನಾವಣೆ: ಮಲ್ಲಿಕಾರ್ಜುನ ಖರ್ಗೆ ವಿಶ್ವಾಸ

‘ರಾಜ್ಯದ ನಾಯಕರ ಬೆಂಬಲ ಖಚಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನಗೆ ಈ ಚುನಾವಣೆ ಬಗ್ಗೆ ಆಸಕ್ತಿ ಇಲ್ಲ. 55 ವರ್ಷಗಳಿಂದ ಪಕ್ಷ ಸಂಘಟಿಸುತ್ತಿರುವ ನೀವು ಸ್ಪರ್ಧಿಸಬೇಕು ಎಂದು ಹಲವು ನಾಯಕರು ಒತ್ತಾಯಿಸಿ ದ್ದರಿಂದ ಸ್ಪರ್ಧಿಸುತ್ತಿದ್ದೇನೆ. ರಾಜ್ಯದ ನಾಯಕರು ನನಗೆ ಬೆಂಬಲ ನೀಡುವುದರಲ್ಲಿ ಸಂಶಯವಿಲ್ಲ’ ಎಂದು ಎಐಸಿಸಿ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿರುವ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ಚುನಾವಣೆಯಿಂದ ಗಾಂಧಿ ಕುಟುಂಬ ಹಿಂದೆ ಸರಿದು, ಬೇರೆಯವರಿಗೆ ಅವಕಾಶ ಕೊಟ್ಟ ಕಾರಣ ನಾನು ಸ್ಪರ್ಧಿಸಲು ನಿರ್ಧರಿಸಿದೆ’ ಎಂದರು.

‘20 ವರ್ಷಗಳಿಂದ ಸೋನಿಯಾ ಗಾಂಧಿ ಅವರು ಪಕ್ಷ ಸಂಘಟನೆ ಮಾಡಿ ಹಲವು ಕಾನೂನು ತಂದು ಬಡವರ ಹೊಟ್ಟೆ ತುಂಬುವ ಆಹಾರ ಭದ್ರತೆ, ಶಿಕ್ಷಣ ಹಕ್ಕು, ನರೇಗಾದಂತಹ ಯೋಜನೆ ತಂದಿದ್ದಾರೆ. ರಾಹುಲ್ ಗಾಂಧಿ ಅಧ್ಯಕ್ಷರಾಗಿದ್ದಾಗ ಆರು ರಾಜ್ಯ ಗಳಲ್ಲಿ ಕಾಂಗ್ರೆಸ್ ಸರ್ಕಾರ ಮಾಡಿದ್ದೆವು. ಮೋದಿ ಹಾಗೂ ಅಮಿತ್ ಶಾ ಅವರು ಸಾಂವಿಧಾನಿಕ ಸಂಸ್ಥೆ ದುರ್ಬಳಕೆ ಮಾಡಿಕೊಂಡು ಒಂದೊಂದಾಗಿ ಸರ್ಕಾರ ಕೆಡವಿದರು’ ಎಂದು ದೂರಿದರು.

ಎಐಸಿಸಿ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿರುವ ಮತ್ತೊಬ್ಬ ಅಭ್ಯರ್ಥಿ ಶಶಿ ತರೂರ್‌ಗೆ ಯಾವ ಸಲಹೆ ನೀಡುತ್ತೀರಿ ಎಂಬ ಪ್ರಶ್ನೆಗೆ, ‘ಇದು ನಮ್ಮ ಮನೆ ವಿಚಾರ. ಇಲ್ಲಿ ಅವರಿಗೂ ಅಭಿಪ್ರಾಯ ವ್ಯಕ್ತಪಡಿಸುವ ಅಧಿಕಾರ ಇದೆ. ಇದು ಆಂತರಿಕವಾಗಿ ನಡೆಯುತ್ತಿರುವ ಸ್ನೇಹಯುತ ಸ್ಪರ್ಧೆ' ಎಂದರು.

‘ಇಲ್ಲಿ ಕಳಂಕಿತರು ಅಲ್ಲಿ ಕ್ಲೀನ್’

‘ಬಿಜೆಪಿಯವರು ಕ್ರಿಮಿನಲ್ ಪ್ರಕರಣ ಇದ್ದವರನ್ನು ಹೆದರಿಸಿ ತಮ್ಮತ್ತ ಸೆಳೆದುಕೊಳ್ಳುತ್ತಾರೆ. ಅವರ ಪಕ್ಷ ಸೇರಲು ಒಪ್ಪದಿದ್ದರೆ ಕೇಸ್ ಮುಂದುವರಿಸುತ್ತಾರೆ. ಇಲ್ಲಿ ಕಳಂಕಿತರು ಅಲ್ಲಿ ಹೋಗಿ ಕ್ಲೀನ್ ಆಗುತ್ತಾರೆ’ ಎಂದು ಖರ್ಗೆ ಹೇಳಿದರು.

ಪಕ್ಷದಲ್ಲಿ ಡಿ.ಕೆ ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಬಣದ ಜತೆ ಖರ್ಗೆ ಅವರ ಬಣ ಬರುತ್ತದೆಯೇ ಎಂಬ ಪ್ರಶ್ನೆಗೆ, ‘ನಮ್ಮಲ್ಲಿ ಯಾವುದೇ ಬಣ ಇಲ್ಲ. ನಾವೆಲ್ಲರೂ ಸಮಾನರು. ಒಗ್ಗಟ್ಟಿದ್ದರೆ ನಮ್ಮ ಸರ್ಕಾರ ಬರುವುದು ಖಚಿತ’ ಎಂದು ಅವರು ಹೇಳಿದರು.

ಅಧ್ಯಕ್ಷತೆ: ಮತದಾನ ಇಂದು

ಒಂದನೇ ಪುಟದಿಂದ

ಪ್ರಚಾರದ ಸಂದರ್ಭದಲ್ಲಿ ಎದ್ದು ಕಾಣುವ ವೈರುಧ್ಯಗಳು ಇದ್ದವು. ಖರ್ಗೆ ಅವರು ರಾಜ್ಯಗಳಿಗೆ ಭೇಟಿ ಕೊಟ್ಟಾಗ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಮತ್ತು ಇತರ ಮುಖಂಡರು ಅವರನ್ನು ಬರಮಾಡಿಕೊಂಡಿದ್ದಾರೆ. ಆದರೆ, ತರೂರ್ ಅವರು ಹೋದಾಗ ಕೆಲವೇ ಕೆಲವು ಪ್ರತಿನಿಧಿಗಳು ಮಾತ್ರ ಅವರನ್ನು ಸ್ವಾಗತಿಸಿದ್ದಾರೆ. ಹೆಚ್ಚಿನ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ತರೂರ್ ಕಾರ್ಯಕ್ರಮಕ್ಕೆ ಗೈರುಹಾಜರಾಗಿದ್ದರು.

ಪಕ್ಷದಲ್ಲಿರುವ ಯುವ ಜನರು ಮತ್ತು ಕೆಳ ಹಂತದ ಹುದ್ದೆಗಳಲ್ಲಿರುವ ಪ್ರತಿನಿಧಿಗಳು ತಮ್ಮ ಬೆಂಬಲಕ್ಕೆ ಇದ್ದಾರೆ. ಹಿರಿಯ ಮುಖಂಡರು ಖರ್ಗೆ ಅವರನ್ನು ಬೆಂಬಲಿಸುತ್ತಿದ್ದಾರೆ ಎಂದು ತರೂರ್ ಹೇಳಿದ್ದರು.

ದಶಕಗಳ ಕಾಲ ಪಕ್ಷದಲ್ಲಿ ಕೆಲಸ ಮಾಡಿದ ಅನುಭವ ಮತ್ತು ಎಲ್ಲರನ್ನೂ ಜೊತೆಗೆ ಒಯ್ಯುವ ಸಾಮರ್ಥ್ಯದಿಂದಾಗಿ ತಮಗೆ ಮತ ಹಾಕಬೇಕು ಎಂದು ಖರ್ಗೆ ಅವರು ಕೋರಿದ್ದಾರೆ.

ನೆಹರೂ–ಗಾಂಧಿ ಕುಟುಂಬಕ್ಕೆ ಪಕ್ಷದಲ್ಲಿ ವಿಶೇಷ ಸ್ಥಾನವಿದೆ ಎಂದು ಖರ್ಗೆ ಮತ್ತು ತರೂರ್ ಹೇಳಿದ್ದಾರೆ. ತಾವು ಗೆದ್ದರೆ ಈ ಕುಟುಂಬದ ಮಾರ್ಗದರ್ಶನ ಪಡೆಯುತ್ತೇನೆ ಎಂದು ಖರ್ಗೆ ಹೇಳಿದ್ದಾರೆ. ಈ ಕುಟುಂಬವನ್ನು ದೂರ ಇಟ್ಟು ಕಾಂಗ್ರೆಸ್ ಪಕ್ಷದ ಯಾವ ಅಧ್ಯಕ್ಷನೂ ಕೆಲಸ ಮಾಡಲಾಗದು ಎಂದು ತರೂರ್ ಹೇಳಿದ್ದಾರೆ.

ಯಾತ್ರೆಯಲ್ಲಿ ರಾಹುಲ್ ಮತದಾನ

ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ಮತ ಚಲಾಯಿಸುವ ನಿರೀಕ್ಷೆ ಇದೆ. ‘ಭಾರತ್ ಜೋಡೊ’ ಯಾತ್ರೆ ನಡೆಸುತ್ತಿರುವ ರಾಹುಲ್ ಗಾಂಧಿ ಅವರು ಕರ್ನಾಟಕದ ಸಂಗನಕಲ್ಲು ಎಂಬಲ್ಲಿ ಮತ ಚಲಾಯಿಸಲಿದ್ದಾರೆ. ಅವರ ಜತೆಗೆ ಯಾತ್ರೆ ಕೈಗೊಂಡಿರುವ ಮತ್ತು ಮತದಾನದ ಅರ್ಹತೆ ಇರುವ ಸುಮಾರು 40 ಮಂದಿಯೂ ಇಲ್ಲಿ ಮತ ಹಾಕಲಿದ್ದಾರೆ.